ಶತಮಾನೋತ್ಸವ ಗ್ರಂಥಮಾಲೆ ಪುಷ್ಪ ನಂ.-೧೦೦

ತಂದೆ ಪುರಂದರವಿಠಲ
ಮತ್ತು
ಗುರುತಂದೆ ಪುರಂದರವಿಠಲರ ಕೀರ್ತನೆಗಳು

ಡಾ॥ ಅನಂತಪದ್ಮನಾಭರಾವ್
ಪ್ರೊ॥ ಜಿ.ಅಶ್ವತ್ಥನಾರಾಯಣ



ಕರ್ನಾಟಕ ಇತಿಹಾಸ ಸಂಶೋಧನ ಮಂಡಲ(ರಿ.), ಧಾರವಾಡ

ಶತಮಾನೋತ್ಸವ ಗ್ರಂಥಮಾಲೆ ಪುಷ್ಪ ನಂ.–೯೩

ತಂದೆ ಪುರಂದರವಿಠಲ

ಮತ್ತು

ಗುರುತಂದೆ ಪುರಂದರವಿಠಲರ

ಕೀರ್ತನೆಗಳು

ಸಂಪಾದಕರು

ಡಾ॥ ಅನಂತಪದ್ಮನಾಭರಾವ್

ಪ್ರೊ॥ ಜಿ.ಅಶ್ವತ್ಥನಾರಾಯಣ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ

ಧಾರವಾಡ – ೧

Tande Purandara Vittala Mathu
Guru Tande Purandara Vittalara Keerthanegalu.

Edited by	:	Dr. Ananthapadmanabha Rao Prof. G. Aswathanarayana
Published by	:	Karnataka Historical Research Society, Dharwad.
©	:	Publisher
Copy right	:	Editor
Edition	:	2017
Pages	:	xxiii+176
Copies	:	1000
Price	:	Rs. 150/-
DTP	:	Shri V. Harisha
Printed at	:	Pavan Printers, Bengaluru

ತಂದೆ ಪುರಂದರವಿಠಲ ಮತ್ತು ಗುರು ತಂದೆ ಪುರಂದರವಿಠಲ ಕೀರ್ತನೆಗಳು

ಸಂಪಾದಕರು	:	**ಡಾ॥ ಅನಂತಪದ್ಮನಾಭರಾವ್** **ಪ್ರೊ॥ಅಶ್ವತ್ಥನಾರಾಯಣ**
ಪ್ರಕಾಶಕರು	:	ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ
ಹಕ್ಕು	:	ಪ್ರಕಾಶಕರು
ವರ್ಷ	:	2017
ಪುಟಗಳು	:	xxiii+176
ಪ್ರತಿಗಳು	:	1000
ಬೆಲೆ	:	ರೂ. ೧೫೦/–
ಅಕ್ಷರ ಜೋಡಣೆ	:	ಶ್ರೀ ವಿ. ಹರೀಶ
ಮುದ್ರಕರು	:	ಪವನ ಪ್ರಿಂಟರ್ಸ್, ಬೆಂಗಳೂರು

ಪರಿವಿಡಿ

ಪ್ರಕಾಶಕರ ನುಡಿ

ಕರ್ನಾಟಕದ ವಿದ್ಯಾಕೇಂದ್ರವಾದ ಧಾರವಾಡದಲ್ಲಿ ಕರ್ನಾಟಕ ಕುಲಪುರೋಹಿತ ಶ್ರೀ ವೆಂಕಟರಾವ ಆಲೂರು, ಶ್ರೀರಾಮರಾವ ನರಗುಂದಕರ, ಕರ್ಮಯೋಗಿ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತ, ಶ್ರೀ ನಾರಾಯಣರಾವ ದೇಶಪಾಂಡೆ, ಶ್ರೀ ಪುಣೇಕರ ಉರ್ಫ ಕಾವ್ಯಾನಂದ, ಶ್ರೀ ಕಡಪಾ ರಾಘವೇಂದ್ರ ರಾವ, ಶ್ರೀ ವಿಠ್ಠಲರಾವ ಜೋಶಿ, ಶ್ರೀಮುದವೀಡು ಕೃಷ್ಣರಾವ, ಶ್ರೀ ರಾಮರಾವ ಜವಳಿ, ಶ್ರೀ ಚಿದಂಬರ ರಾವ್ ಆಹೆಟ್ಟಿ, ಶ್ರೀ ಸುಬ್ಬರಾವ ಕುಲಕರ್ಣಿ, ಶ್ರೀ ಭೀಮರಾವ ಬೆಟಗೇರಿ, ಶ್ರೀ ವೆಂಕಟೇಶ ಹನುಮಂತ ಡಂಬಳ, ಶ್ರೀ ವೆಂಕಟೇಶ ಭೀಮಸೇನಾಚಾರ್ಯ ಡಂಬಳ ಈ ಹದಿನಾಲ್ಕು ಜನ ಖ್ಯಾತಿವೆತ್ತ ಸಂಶೋಧಕರೂ ಕನ್ನಡಾಭಿಮಾನಿಗಳೂ ಸೇರಿ ದಿನಾಂಕ. ೨೮.೦೯.೧೯೧೪ ರಂದು ವಿಜಯದಶಮಿಯ ಶುಭಮುಹೂರ್ತದಲ್ಲಿ ಈ ಸಂಶೋಧನ ಮಂಡಲವನ್ನು ಸ್ಥಾಪಿಸಿದರು.

ಕ.ಇ.ಸಂ. ಮಂಡಲದ ಸ್ಥಾಪನೆಯಾದ ನಂತರ ಇದರ ಅಭಿವೃದ್ಧಿಗೆ ಖ್ಯಾತಿವೆತ್ತ ಅನೇಕ ಸಂಶೋಧಕ ವಿದ್ವಾಂಸರೂ, ಗಣ್ಯವ್ಯಕ್ತಿಗಳೂ ಶ್ರಮಿಸಿದ್ದಾರೆ. ಅವರಲ್ಲಿ ಶ್ರೀರಂಗನಾಥ ದಿವಾಕರ, ಶ್ರೀ ವ್ಹಿ.ಬಿ.ಹಾಲಭಾವಿ, ಶ್ರೀ ವ್ಹಿ.ಕೆ.ಆರ್.ವ್ಹಿ. ರಾವ್, ಶ್ರೀ ದ.ರಾ.ಬೇಂದ್ರೆ, ಮುಖ್ಯನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾವ, ಶ್ರೀ ಮೊಹರೆ ಹನುಮಂತರಾವ, ವಿದ್ಯಾರತ್ನ ಶ್ರೀರಾ.ಸ್ವಾ.ಪಂಚಮುಖಿ, ರಾಜರ್ಷಿ ಶ್ರೀದ.ಪ.ಕರಮರಕರ, ಡಾ.ಪಿ.ಬಿ.ದೇಸಾಯಿ, ಡಾ. ವ್ಹಿ.ಆರ್.ಉಮರ್ಜಿ, ಡಾ.ವಿ.ಆರ್.ಪಂಚಮುಖಿ, ಡಾ.ಪಿ.ಆರ್.ಪಂಚಮುಖಿ, ಮುಂತಾದವರ ಕೊಡುಗೆಯು ಉಲ್ಲೇಖನೀಯವಾದುದು.

ಮಂಡಲದ ಕಾರ್ಯಾಧ್ಯಕ್ಷರಾಗಿ, ಪ್ರಮುಖ ಸಂಪಾದಕರಾಗಿ ಕೊನೆಗೆ ಅಧ್ಯಕ್ಷರಾಗಿಯೂ ಸುಮಾರು ೨೫ ವರ್ಷ ಮಂಡಲದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ ವಿದ್ಯಾರತ್ನ ಶ್ರೀ ರಾ.ಸ್ವಾ.ಪಂಚಮುಖಿಯವರ ಕಾಲದಲ್ಲಿ ಮಂಡಲಕ್ಕೆ ಒಂದು ಸ್ವಂತ ಕಟ್ಟಡವು ನಿರ್ಮಾಣವಾಗಿ ಸಂಶೋಧನಾ ಕಾರ್ಯಗಳು ವ್ಯಾಪಕವಾಗಿ ಮತ್ತು ಸುವ್ಯವಸ್ಥಿತವಾಗಿ ನಡೆಯುವಂತಾಯಿತು. ಈ ಸಂಶೋಧನ ಮಂಡಲವು ೨೦೧೪ ರಲ್ಲಿ ಒಂದು ನೂರು ವರ್ಷ ಪೂರೈಸಿದೆ.

ದೇಶದ ಮತ್ತು ಕರ್ನಾಟಕದ ಧೀಮಂತ ಸಂಸ್ಕೃತಿಯ ಮಹೋನ್ನತಿಯ ಸಾಕ್ಷಾತ್ಕಾರವನ್ನು ಜನಸಾಮಾನ್ಯರೂ ಪಡೆಯಬೇಕೆಂಬ ಹಂಬಲವುಳ್ಳ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲದ ಈಗಿನ ಪದಾಧಿಕಾರಿಗಳು ಮತ್ತು ಸದಸ್ಯರು ಸಭೆ ಸೇರಿ ಮಂಡಲದ ಶತಮಾನೋತ್ಸವವನ್ನು ವಿಶಿಷ್ಟ ಕಾರ್ಯಕ್ರಮಗಳೊಂದಿಗೆ ಆಚರಿಸಲು ಸಂಕಲ್ಪಿಸಿದ್ದಾರೆ.

ಶತಮಾನೋತ್ಸವದ ವಿಶಿಷ್ಟ ಕಾರ್ಯಕ್ರಮಗಳು :

೧. ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸಂಸ್ಥಾಪಕರಲ್ಲಿ ಪ್ರಮುಖರಾದವರ ಸ್ಮರಣಾರ್ಥ ವಿಚಾರಸಂಕಿರಣಗಳನ್ನು ಏರ್ಪಡಿಸುವುದು. ೨. ದೇಶದ ಖ್ಯಾತಸಂಶೋಧಕರಿಂದ ಇತಿಹಾಸ, ಶಾಸನಗಳು, ಸಂಸ್ಕೃತಿ, ಸಾಹಿತ್ಯ, ಕಲೆ, ಶಿಕ್ಷಣ, ಆರೋಗ್ಯ ಮುಂತಾದ

ವಿಷಯಗಳನ್ನು ಕುರಿತು ಬರೆಯಲ್ಪಟ್ಟ ಒಂದು ನೂರು ಕೃತಿಗಳ ಪ್ರಕಟಣೆ. ೩. ಪ್ರಸಿದ್ಧ ಸಂಶೋಧಕರಿಂದ ಬರೆಯಲ್ಪಟ್ಟ ನೂರು ಲೇಖನಗಳಿಂದ ಕೂಡಿದ ಶತಮಾನೋತ್ಸವ ಸ್ಮರಣಸಂಪುಟ ಪ್ರಕಟಣೆ. ೪. ದೇಶದ ವಿವಿಧ ಭಾಗಗಳಲ್ಲಿ ಮತ್ತು ರಾಜ್ಯದ ಜಿಲ್ಲೆಗಳಲ್ಲಿ ವಿದ್ವಾಂಸರಿಂದ ಒಂದು ನೂರುಉಪನ್ಯಾಸಗಳನ್ನು ಏರ್ಪಡಿಸುವುದು. ೫) ಕರ್ನಾಟಕದ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಕಲೆ ಮುಂತಾದವುಗಳ ಮೇಲೆ ಪ್ರಕಟಿತವಾದ ಪುಸ್ತಕಗಳ ಪ್ರದರ್ಶನ ಮತ್ತು ಇತರ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪ್ರದರ್ಶನಗಳು. ೬) ಮಂಡಲದಿಂದ ಪ್ರಕಟಿತವಾದ ಗ್ರಂಥಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದು. ೭) ಗಣ್ಯಸಂಶೋಧಕರಿಗೆ ಸನ್ಮಾನ. ೮) ಶತಮಾನೋತ್ಸವವರ್ಷದ ಕೊನೆಯ ಏಳು ದಿನ ಸಂಶೋಧಕರಿಂದ ವಿಶೇಷ ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ೯)ಶತಮಾನೋತ್ಸವ ಸ್ಮರಣಾರ್ಥ ಸಾಂಸ್ಕೃತಿಕ ಭವನದ ನಿರ್ಮಾಣ. ೧೦) ಉಚಿತ ಯೋಗ ಶಿಕ್ಷಣ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು. ೧೧) "ಸ್ವಚ್ಛ ಭಾರತ" ಅಭಿಯಾನವನ್ನು ಅನುಷ್ಠಾನಗೊಳಿಸುತ್ತ ಜನರಲ್ಲಿ ಭಾರತದ ಭವ್ಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು.

ಈ ಎಲ್ಲ ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಹಾಗೂ ಅಭಿಮಾನಿಗಳಾದ ತಮ್ಮ ಸಹಕಾರ ಮತ್ತು ಸಹಾಯಹಸ್ತವನ್ನು ಅಪೇಕ್ಷಿಸುತ್ತೇವೆ.

ಶತಮಾನೋತ್ಸವದ ಪ್ರಕಟಣೆಗಾಗಿ ಕಳುಹಿಸಿದ ಗ್ರಂಥದ ಲೇಖಕರಿಗೆ/ ಸಂಪಾದಕರಿಗೆ ಮಂಡಲವು ಚಿರಋಣಿಯಾಗಿದೆ. ಅದರಂತೆಯೇ ಈ ಗ್ರಂಥವು ಪ್ರಕಾಶಕ್ಕೆ ಬರುವಲ್ಲಿ ಸಹಕರಿಸಿದ ಎಲ್ಲ ವಿದ್ವಾಂಸರಿಗೂ, ಸಿಬ್ಬಂದಿಗೂ, ಅಕ್ಷರ ಜೋಡಣೆಯನ್ನು ಮಾಡಿದವರಿಗೂ ಮತ್ತು ಅಂದವಾಗಿ ಮುದ್ರಿಸಿ ಕೊಟ್ಟ ಮುದ್ರಣಾಲಯದ ಅಧಿಕಾರಿಗಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಪ್ರಕೃತ ತಮ್ಮ ಕೈಯಲ್ಲಿರುವ **"ತಂದೆ ಪುರಂದರವಿಠಲ ಮತ್ತು ಗುರುತಂದೆ ಪುರಂದರವಿಠಲರ ಕೀರ್ತನೆಗಳು"** ಎಂಬ ಈ ಪುಸ್ತಕವು ಶತಮಾನೋತ್ಸವದ ೧೦೦ ಕೃತಿಗಳಲ್ಲಿ ಒಂದಾಗಿದೆ. ಈ ಕೃತಿಯ ಪ್ರಾರಂಭದಲ್ಲಿ ಇರುವ ಪ್ರಸ್ತಾವನೆಯಿಂದ ಓದುಗರಿಗೆ ಸಂಕ್ಷೇಪದಲ್ಲಿ ಈ ಗ್ರಂಥಗತ ವಿಷಯಗಳ ಅರಿವಾಗುವುದು.

ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸುತ್ತಿರುವ ೧೦೦ ಕೃತಿಗಳನ್ನು ಮತ್ತು ಸ್ಮರಣ ಸಂಪುಟವನ್ನು ಕೊಂಡೊಯ್ದು ಭಾರತ ದೇಶದ ಭವ್ಯ ಸಂಸ್ಕೃತಿ, ಇತಿಹಾಸ ಮತ್ತು ಗತವೈಭವವನ್ನು ಮನಗಂಡು ಇಂದಿನ ಜನಾಂಗವು ಸನ್ಮಾರ್ಗದಲ್ಲಿ ನಡೆಯುವಂತಾಗಲಿ, ಹಾಗೂ ಕ್ಷೇಮದಿಂದ ಬಾಳಲಿ ಎಂದು ಆಶಿಸುವ

ಶ್ರೀ. ಆ. ರಾ. ಪಂಚಮುಖಿ
ಕಾರ್ಯಾಧ್ಯಕ್ಷ ಮತ್ತು ಪ್ರಧಾನ ಸಂಪಾದಕ
ಮತ್ತು ಮಂಡಲದ ಎಲ್ಲ ಸದಸ್ಯರು

ಪ್ರಸ್ತಾವನೆ

ತಂದೆ ಪುರಂದರವಿಠಲ ದಾಸರ
ಮತ್ತು
ಗುರುತಂದೆ ಪುರಂದರವಿಠಲ ದಾಸರ ಕೀರ್ತನೆಗಳು

'ದಾಸರೆಂದರೆ ಪುರಂದರದಾಸರಯ್ಯ' ಎಂದು ಗುರುಗಳಾದ ವ್ಯಾಸರಾಜರಿಂದಲೇ ಪ್ರಶಸ್ತಿ ಪಡೆದು ದಾಸಶ್ರೇಷ್ಠರೆಂದು ಮಾನ್ಯರಾದವರು ಪುರಂದರದಾಸರು. ತಂಬೂರಿಮೀಟುವ ಸಾಮಾನ್ಯ ವೃತ್ತಿಗಾಯಕರಿಂದ ಹಿಡಿದು ಶಾಸ್ತ್ರಸಂಪನ್ನರಾದ ಸಂಗೀತಕಲಾನಿಧಿಗಳವರೆಗೂ ಎಲ್ಲರ ನಾಲಗೆಯಲ್ಲಿ ದಾಸರ ಪದಗಳು ನರ್ತಿಸುತ್ತವೆ. ವಿಶಾಲವಾದ ವಸ್ತುವೈವಿಧ್ಯದಿಂದ, ಭಕ್ತಿ, ಸಾಹಿತ್ಯ ಸಂಗೀತಗಳ ಸಮರಸದಿಂದ ಗಾತ್ರದಲ್ಲೂ, ಪಾತ್ರದಲ್ಲೂ ಮೌಲಿಕವಾದ ರಚನೆಗಳನ್ನು ನೀಡಿದವರು ಪುರಂದರದಾಸರು.

ಪುರಂದರದಾಸರು ಒಟ್ಟು ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಪದ ಸುಳಾದಿಗಳನ್ನು ರಚಿಸಿದ್ದಾರೆಂಬುದು ಪಾರಂಪರಿಕ ನಂಬಿಕೆ. ಆದರೆ ವಾಸ್ತವವಾಗಿ ನಮಗೆ ದೊರೆಯುವ ಕೀರ್ತನೆಗಳು ಸುಮಾರು ಒಂದು ಸಾವಿರ. ಇವುಗಳಲ್ಲಿಯೂ ಸಾಕಷ್ಟು ಪ್ರಕ್ಷೇಪಗಳು, ಅಂಕಿತಪಲ್ಲಟಗಳು ಆಗಿವೆ. 'ಕನಕದಾಸರ ಪದಗಳನ್ನು ಪುರಂದರವಿಠಲ ಅಂಕಿತಕ್ಕೆ ಬದಲಿಸಲಾಗಿದೆ' ಎಂಬ ಗಂಭೀರ ಆರೋಪಗಳೂ ಇವೆ. ವರದ ಪುರಂದರವಿಠಲ, ಗುರುಪುರಂದರವಿಠಲ ಅಂಕಿತದ ಪದಗಳು ಪುರಂದರದಸರವು ಅಲ್ಲ, ಅವು ದಾಸರ ಮಕ್ಕಳ ರಚನೆಗಳು, ಎಂಬ ಅಭಿಪ್ರಾಯವೂ ಇದೆ. ಆದರೆ ಈ ಅಭಿಪ್ರಾಯಗಳನ್ನು ಸಾಧಾರವಾಗಿ ನಿರೂಪಿಸಲು ಸಾಧ್ಯವಾಗಿಲ್ಲ.

ಪುರಂದರದಾಸರ ಕೀರ್ತನರಾಶಿಯಲ್ಲಿ 'ತಂದೆ ಪುರಂದರ ವಿಠಲ' ಅಂಕಿತದ ಹಾಡುಗಳೂ ದೊರೆಯುತ್ತವೆ. ಈ ಅಂಕಿತದಲ್ಲಿ ಪುರಂದರ ದಾಸರೂ ಪದಗಳನ್ನು ರಚಿಸಿದ್ದಾರೆ, ಬೇರೆಯವರೂ ರಚಿಸಿದ್ದಾರೆ. ಇವುಗಳಲ್ಲಿ ಪುರಂದರದಾಸರವು ಯಾವುದು? ಬೇರೆಯವರದು ಯಾವುದು? ಈ ಬೇರೆಯವರು ಯಾರು? ಈ ಬೇರೆಯವರ ಕೀರ್ತನೆಗಳು ಪುರಂದರದಾಸರ ಪದಗಳಲ್ಲಿ ಪ್ರಕ್ಷೇಪಗಳಾಗಿ ಸೇರಿಹೋಗಿರುವುದಕ್ಕೆ ಪ್ರಮಾಣಗಳೇನು? ಯಾವ ಕಾಲ ಘಟ್ಟದಲ್ಲಿ ಬೇರೆಯವರ ರಚನೆಗಳು ಪುರಂದರದಾಸರ ಪದಗಳ ಜೊತೆ ಸೇರಿಹೋಯಿತು? ತಂದೆ ಪುರಂದರವಿಠಲ ಅಂಕಿತದ ಕೀರ್ತನೆಕಾರರು ಎಷ್ಟು ಮಂದಿ? ಇಲ್ಲಿಯವರೆಗೆ ಪುರಂದರದಾಸರ ಕೃತಿಗಳನ್ನು ಸಂಕಲಿಸಿರುವ, ಸಂಪಾದಿಸಿರುವ ವಿದ್ವಾಂಸರು ಇದನ್ನು ಏಕೆ ಗುರುತಿಸಿಲ್ಲ? ಇತ್ಯಾದಿ ಸಂದೇಹಗಳಲ್ಲಿ ಕೆಲವನ್ನಾದರೂ ನಿವಾರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪುರಂದರದಾಸರಿಗೆ ನಾಲ್ವರು ಮಕ್ಕಳು ಇದ್ದರೆಂದೂ ಅವರುಗಳೂ ಕೀರ್ತನೆಗಳನ್ನು ರಚಿಸಿದ್ದಾರೆಂದೂ, ವರದಪುರಂದರವಿಠಲ, ಗುರುಪುರಂದರವಿಠಲ, ಅಭಿನವಪುರಂದರವಿಠಲ, ಮಧ್ವಪತಿ ಎಂಬ ಅಂಕಿತಗಳಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆಂದು ವಿಜಯದಾಸರ ಅಭಿಪ್ರಾಯ. ಈ ಕೀರ್ತನೆಗಳನ್ನು ಬೇರ್ಪಡಿಸಿದರೆ ಪುರಂದರದಾಸರ ನಿಜವಾದ ಕೀರ್ತನೆಗಳು ಯಾವುವು? ಎಂಬುದು ತಿಳಿಯುತ್ತದೆ ಎಂಬ ವಾದವನ್ನು ಮಂಡಿಸಬಹುದು. ಈ ವಾದವೂ ಗಟ್ಟಿಯಾಗಿ ನಿಲ್ಲುವಿದಿಲ್ಲ. ಈ ಹೆಸರಿನ ಮಕ್ಕಳು ಪುರಂದರ ದಾಸರಿಗೆ ಇದ್ದರೆ ಅಥವಾ ವಿಜಯದಾಸರ ಕಲ್ಪನೆಯೇ ಎಂಬುದು ವಿಚಾರಾರ್ಹ. ಕ್ರಿಶ ೧೫೨೬ ರಲ್ಲಿ ರಚಿತವಾದ ಕಮಲಾಪುರದ ತಾಮ್ರ ಶಾಸನದಲ್ಲಿ ಪುರಂದರದಾಸರ ಮೂರು ಮಂದಿ ಮಕ್ಕಳ ಹೆಸರುಗಳಿವೆ. ಲಕ್ಷ್ಮಣದಾಸ, ಹೇಬಣದಾಸ, ಮಧ್ವಪದಾಸ ಈ ಮೂರು ಮಂದಿಯನ್ನು ವಶಿಷ್ಠಗೋತ್ರ ಸಂಭೂತರೆಂದೂ 'ಶ್ರೀಪುರಂದರದಾಸಜ' ರೆಂದೂ ಗುರುತಿಸಲಾಗಿದೆ. ಈ ಶಾಸನ ನಿರ್ವಿವಾದ ಪ್ರಮಾಣವಾಗಿರುವುದರಿಂದ ವಿಜಯದಾಸರು ಹೇಳುವ ವರದ, ಗುರು, ಅಭಿನವ, ಹೆಸರಿನ ದಾಸರುಗಳು ಪುರಂದರದಾಸರ ಮಕ್ಕಳಲ್ಲ. ಅನಂತರದಲ್ಲಿ ಬಂದ ಕೀರ್ತನೆಕಾರರಾಗಿರಬೇಕು. ಶಾಸನದಲ್ಲಿ 'ಪುರಂದರ ದಾಸಾತ್ಮಜ' ರೆಂದು ಉಲ್ಲೇಖಿತರಾಗಿರುವ ಲಕ್ಷ್ಮಣದಾಸ, ಹೇಬಣದಾಸ ಮತ್ತು ಮಧ್ವಪದಾಸರನ್ನು 'ಧೀಮಾನ್' ಎಂದು ಶಾಸನ ಗೌರವಿಸುತ್ತದೆ. ಬುದ್ಧಿವಂತರೂ, ಮೇಧಾವಿಗಳೂ ಆಗಿದ್ದ ಲಕ್ಷ್ಮಣದಾಸ ಮತ್ತು ಹೇಬಣದಾಸರು ಪ್ರತ್ಯೇಕವಾಗಿ ಕೃತಿಗಳನ್ನು ಬರೆದಿದ್ದಾರೆಯೇ? ಅವರ ಧೀಮಂತಿಕೆ ಸಾಹಿತ್ಯ ರೂಪದಲ್ಲಿ ಅಭಿವ್ಯಕ್ತವಾಗಿದೆಯೇ? ಎಂಬ ಬಗ್ಗೆ ಸ್ಪಷ್ಟ ಆಧಾರಗಳು ಇಲ್ಲ. 'ತೆರಳಿದರು ಹರಿಪುರಕಿಂದು ಪುರಂದರದಾಸರು' ಎಂಬ ಕೀರ್ತನೆ ಗುರುಮಧ್ವಪತಿವಿಠಲರ ರಚನೆ ಎಂದು ನಂಬಲಾಗಿದೆ.

ಡಾ॥ವ.ಅ.ದಿವಾಣಜಿ ಅವರು ಪುರಂದರದಾಸರನ್ನು ಕುರಿತ ತಮ್ಮ ಪ್ರೌಢಪ್ರಬಂಧದಲ್ಲಿ ಪುರಂದರದಾಸರ ಮಕ್ಕಳ ಕೀರ್ತನೆಗಳು ಎಂದು ಗುರುಪುರಂದರವಿಠಲಾಂಕಿತದ ೨೧ಕೀರ್ತನೆಗಳನ್ನೂ ವರದಪುರಂದರವಿಠಲಾಂಕಿತದ ೧೯ ಕೀರ್ತನೆಗಳನ್ನೂ ಗುರುತಿಸಿದ್ದಾರೆ. ಇವೆಲ್ಲವೂ ಪುರಂದರದಾಸರ ಹೆಸರಿನಲ್ಲಿಯೇ ಚಾಲ್ತಿಯಲ್ಲಿವೆ. ಪ್ರಕ್ಷಿಪ್ತಗಳು ಎನ್ನುವುದಕ್ಕೆ ಆಧಾರಗಳು ಇಲ್ಲ. 'ವರದ', 'ಗುರು' ಈ ಪದಗಳನ್ನು ಪುರಂದರವಿಠಲ ಅಂಕಿತಕ್ಕೆ ಪೂರ್ವದಲ್ಲಿ ಬರುವ ವಿಶೇಷಣಗಳೆಂದೇ ಭಾವಿಸಲಾಗಿದೆ. ಅಲ್ಲದೆ ಅಂಕಿತ ಬರುವುದು ಸಾಮಾನ್ಯವಾಗಿ ಕೊನೆಯ ನುಡಿಯ ಕೊನೆಯ ಪಾದದಲ್ಲಿ. ಗುರುಪುರಂದರವಿಠಲ, ವರದ ಪುರಂದರವಿಠಲ ಮತ್ತು ಪುರಂದರವಿಠಲ – ಈ ಮೂರು ಅಂಕಿತಗಳ ದ್ವಿತೀಯಾಕ್ಷರ 'ರ' ಕಾರವೇ ಆಗಿದೆ. ಹೀಗಾಗಿ 'ಗುರು', 'ವರದ' ಎಂಬುದನ್ನು ಬಿಟ್ಟು ಪುರಂದರವಿಠಲ ಎಂಬುದನ್ನು ಮಾತ್ರ ಉಳಿಸಿಕೊಂಡರೂ ಪ್ರಾಸಕ್ಕೆ ಅರ್ಥಕ್ಕೆ ಬಾಧಕವಿಲ್ಲ.

ಹೀಗಾಗಿ 'ಗುರು', 'ವರದ' ವಿಶೇಷಣಗಳ ಬಳಕೆ ಎಲ್ಲ ಕೀರ್ತನೆ ಸಂಗ್ರಹಗಳಲ್ಲೂ ನಿಯತವಾಗಿ ಪಾಲಿತವಾಗಿಲ್ಲ. ಈ ಮಾತು ಡಾ॥ವ.ಅ.ದಿವಾಣಜಿ ಅವರು ಗುರುತಿಸಿರುವ ಕೀರ್ತನೆಗಳಿಗೂ ಅನ್ವಯಿಸುತ್ತವೆ.

ಉಡುಪಿಯ 'ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ'ದಿಂದ ೧೯೧೭ ರಿಂದ ೧೯೩೨ ರ ಅವಧಿಯಲ್ಲಿ ಪಾವಂಜೆ ಗುರುರಾಯರು ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದರು. ಅನಂತರ ಇವು ಪ್ರತಿಯೊಂದೂ ೧೫-೨೦ ಪುನಮುದ್ರಣಗಳನ್ನು ಕಂಡು ೨೦೦೧ ರಲ್ಲಿ ಸಂಯುಕ್ತ ಸಂಪುಟವಾಗಿ ಪ್ರಕಟವಾಯಿತು. ಇದರಲ್ಲಿ ೧೦೨೪ ಕೀರ್ತನೆಗಳು ೧೫೧ ಉಗಾಭೋಗಗಳೂ ಇವೆ. ಇದರಲ್ಲಿ ೫೨ ಕೀರ್ತನೆಗಳು 'ತಂದೆ ಪುರಂದರವಿಠಲ' ಅಂಕಿತದಲ್ಲಿವೆ. ಇವುಗಳಲ್ಲಿ ೨೨ ಕೀರ್ತನೆಗಳು ಖಚಿತವಾಗಿ ಪುರಂದರದಾಸರದು ಅಲ್ಲ. (ನೋಡಿ ಅನುಬಂಧ ೩.ಇ)

ಪುರಂದರವಿಠಲ ಎಂಬ ಅಂಕಿತಕ್ಕೆ ಪೂರ್ವದಲ್ಲಿ 'ತಂದೆ' ಎಂಬ ಸಂಬಂಧವಾಚಕವನ್ನು ಅನೇಕ ಕೀರ್ತನೆಗಳಲ್ಲಿ ಬಳಸಲಾಗಿದೆ. ಹೀಗೆ ಬಳಕೆಯಾಗಿರುವ ಕೀರ್ತನೆಗಳಲ್ಲಿ ಕೆಲವು ಪುರಂದರದಾಸರ ರಚನೆಗಳೇ ಆದರೂ ಎಲ್ಲವೂ ಪುರಂದರದಾಸರದಲ್ಲ. ತಂದೆ ಪುರಂದರವಿಠಲ ಮತ್ತು ಗುರುತಂದೆ ಪುರಂದರವಿಠಲ ಎಂಬ ಅಂಕಿತದ ಇನ್ನೂ ಇಬ್ಬರು ಹರಿದಾಸರಿದ್ದಾರೆ. ಇವರು ೧೯-೨೦ ನೇ ಶತಮಾನದವರು. ಪಾವಂಜೆ ಗುರುರಾಯರ ಸಂಕಲನ ಪ್ರಕಟವಾಗುವ ಹೊತ್ತಿಗೆ ಇವರ ಕೀರ್ತನೆಗಳಲ್ಲೂ ಕೆಲವು ಪುರಂದರದಾಸರ ಪದಗಳಲ್ಲಿ ಸೇರಿಹೋದವು.

"ದಾಸರ ಪದಗಳು
ಶ್ರೀ ತಂದೆ ಪುರಂದರವಿಠಲ
ಶ್ರೀ ರಂಗ ಒಲಿದ ಚಿಕ್ಕದಾಸರ ಕೀರ್ತನೆಗಳು" – ಭಾಗ – ೧"

ಎಂಬ ಶೀರ್ಷಿಕೆಯಲ್ಲಿ ೧೯೩೮ ರಲ್ಲಿ ಕೀರ್ತನ ಸಂಕಲನವೊಂದು ಪ್ರಕಟವಾಗಿದೆ. ಕೀರ್ತನೆಗಳ ಭಾಷೆ ಕನ್ನಡ, ಲಿಪಿದೇವನಾಗರಿ. ಇದರ ಪ್ರಕಾಶಕರು ಸಿ.ಎನ್.ಲಕ್ಷ್ಮಣರಾವ್, ೬೨-ಬಿ ಮುಖ್ಯರಸ್ತೆ, ಕಡಲೂರು. ಇದರ ಮುದ್ರಕರು ಶ್ರೀಕೃಷ್ಣ ಪ್ರೆಸ್, ಉಡುಪಿ. ಪಾವಂಜೆ ಗುರುರಾಯರ ಸಂಪುಟಗಳ ಪುನರ್‌ಮುದ್ರಣಗಳು ನಡೆದದ್ದು ಇದೇ ಅವಧಿಯಲ್ಲಿ. ಈ ಸಂದರ್ಭದಲ್ಲಿ ರಂಗ ಒಲಿದ ಚಿಕ್ಕದಾಸರ ಸಂಸ್ಕೃತ ಲಿಪಿಯ ಕೀರ್ತನೆಗಳು ಲಿಪ್ಯಂತರವಾಗಿ ಪುರಂದರದಾಸರ ಕೃತಿಗಳಲ್ಲಿ ಸೇರಿಹೋದವು.

೧೯೩೮ ರಲ್ಲಿ ಪ್ರಕಟವಾದ ರಂಗ ಒಲಿದ ಚಿಕ್ಕದಾಸರ ಕೀರ್ತನೆಗಳಿಗೆ ಶ್ರೀ ಆರ್.ಭೂವರಾಹಮೂರ್ತಿ ಎಂಬ ಅಡ್ವೋಕೇಟರು ಇಂಗ್ಲಿಷ್‌ನಲ್ಲಿ ಮುನ್ನುಡಿ ಬರೆದಿದ್ದಾರೆ. ಇವರು ಕೂಡ ರಂಗ ಒಲಿದ ಚಿಕ್ಕದಾಸರ ಅಭಿಮಾನಿ ಶಿಷ್ಯರಲ್ಲಿ

ಒಬ್ಬರು. ತಂದೆ ಪುರಂದರವಿಠಲ ಅಂಕಿತದ ಪಿ.ವೈ.ಶಾಮರಾಯರು ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆಂದೂ ಅವರು ಆಶುಕವಿಗಳೆಂದೂ, ಅಂಶಪುರುಷರೆಂದೂ, ಅಪರೋಕ್ಷ ಜ್ಞಾನಿಗಳೆಂದು ಗುರುತಿಸಿದ್ದಾರೆ.

1. This small book contains a few of the thousands of padams which were extempore utterences in inspired moments.
2. It will be impossible to come to any other conclusion than that the genttleman is an 'Amshapurusha' and 'Aparokshi'.

ಈ ಸಂಕಲನಕ್ಕೆ ಶ್ರೀ ಸಿ.ಎನ್.ಲಕ್ಷ್ಮಣರಾಯರು ಬರೆದಿರುವ ಪ್ರಸ್ತಾವನೆಯಿಂದ ದಾಸರ ಬಗ್ಗೆ ತಿಳಿದು ಬರುವ ಸಂಗತಿಗಳು ಹೀಗಿವೆ. ಪಿ.ವೈ.ಶಾಮರಾಯರ ಜನ್ಮಸ್ಥಳ ಕೊಯಮತ್ತೂರು. ಜನಿಸಿದ್ದು ೨೫.೦೪.೧೮೬೧ ರಲ್ಲಿ. ತಂದೆಯ ಹೆಸರು ಯದುಪತಿ ಆಚಾರ್ಯರು. ಶಾಮರಾಯರು ಕೆಲವು ದಿನ ಲೌಕಿಕ ವೃತ್ತಿಯಲ್ಲಿ ಇದ್ದು ಪುರಂದರದಾಸರಿಂದ ಸ್ವಪ್ನಾಂಕಿತ ಪಡೆದರು. 'ಪೂರ್ವದಲ್ಲಿ ಕಲ್ಲು ಹನುಮಗೆ ಅನ್ನ ಉಣಿಸಿದ ಪ್ರಿಯಸುಕಂದ' ಎಂದು ಕರೆದು 'ನೀ ದಾಸನಾಗು' ಎಂದು ಪುರಂದರದಾಸರು ಆಜ್ಞಾಪಿಸಿದರಂತೆ. 'ತಂದೆ ಪುರಂದರವಿಠಲ' ಎಂಬ ಮುದ್ರಿಕೆ ಪಡೆದು ಹರಿದಾಸರಾದರಂತೆ. ಪೂರ್ವಜನ್ಮದಲ್ಲಿ ತಾವು ಪುರಂದರದಾಸರ ಮಗನೆಂದು ಅನೇಕ ಕೀರ್ತನೆಗಳಲ್ಲಿ ಹೇಳಿಕೊಂಡಿದ್ದಾರೆ. (ಕೀ.೧, ಕೀ.೩೨, ಕೀ.೪೪, ಕೀ.೬೨)

ತಂದೆ ಪುರಂದರವಿಠಲದಾಸರ ಹಾಡುಗಳನ್ನು ಬರೆದುಕೊಂಡು ಸಂಗ್ರಹಿಸಿದವರು ಶ್ರೀ ಸಿ.ಎನ್.ಲಕ್ಷ್ಮಣರಾಯರು. ಇವರು ಕೂಡ ದಾಸರ ಶಿಷ್ಯರಲ್ಲಿ ಒಬ್ಬರು. ತಮ್ಮ ಗುರುಗಳ ರಚನೆಗಳ ಬಗ್ಗೆ ತುಂಬ ಅಭಿಮಾನದಿಂದ ಭಕ್ತಿಯಿಂದ ನುಡಿಯುತ್ತಾರೆ. "ಇವರಿಂದ ಸಾವಿರಾರು ಪದಗಳು ರಚನವಾಗಿರುವವು ಮತ್ತು ಪದಗಳು ಬರುವ ವೇಗದಲ್ಲಿ ಬರೆಯಲು ಸಾಧ್ಯವಿಲ್ಲದೆ ಹೋಗಿತ್ತು" ಎನ್ನುತ್ತಾರೆ. ದಾಸರಿಗೆ ಶ್ರೀ ಮಂತ್ರಾಲಯದ ರಾಯರು ಮತ್ತು ತಿರುಕೋಯಿಲೂರಿನ ರಘೂತ್ತಮತೀರ್ಥರು ಒಲಿದಿದ್ದರಂತೆ. ತಮ್ಮ ಉಪಾಸನಾಮೂರ್ತಿ ಮುದ್ದು ಕೃಷ್ಣನ ಬಾಲಲೀಲೆಗಳನ್ನು ಬಣ್ಣಿಸುವುದರಲ್ಲಿ ತಲ್ಲೀನತೆಯ ಸುಖಾನುಭವವನ್ನು ಪಡೆದವರು ಇವರು. ಜಗನ್ನಾಥದಾಸರು 'ರಂಗ ಒಲಿದ ದಾಸರು' ಎಂದು ಪ್ರಸಿದ್ಧರಾದಂತೆ ಶಾಮರಾಯರು ರಂಗ ಒಲಿದ ಚಿಕ್ಕದಾಸರೆಂದೇ ಗೌರವಿಸಲ್ಪಟ್ಟರು.

ತಂದೆ ಪುರಂದರವಿಠಲ ಅಂಕಿತದ ಶಾಮರಾಯರಿಗೆ ಒಬ್ಬ ಶಿಷ್ಯರಿದ್ದರು. ಅವರು 'ಗುರುತಂದೆ ಪುರಂದರವಿಠಲ' ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ತಮ್ಮ ಗುರುಗಳನ್ನು ಕುರಿತು ರಚಿಸಿರುವ ಗುರುಸ್ತುತಿಗಳಲ್ಲಿ 'ದಾಸವರ್ಯರಾದವರ ಪ್ರಿಯಸುತ' ಎಂದು ಸಂಬೋಧಿಸಿದ್ದಾರೆ.

1-5-1939 ರಲ್ಲಿ 78ನೇ ವಯಸ್ಸಿನಲ್ಲಿ ನಿಧನರಾದರು
ಕುಂಭಕೋಣದಲ್ಲಿ 25-4-1861ರಲ್ಲಿ ಜನಿಸಿದರು

'ಮರುತನ ತನಯನ ಅರ್ಚಿಸಿ ಭಕ್ತಿಯಲಿ
ಹರುಷದಿ ಉಣಿಸಿದಿ ತರಳ ತನದಲಿ' ಎನ್ನುತ್ತಾರೆ.

ದಾಸರು ಹಿಂದಿನ ಜನ್ಮದಲ್ಲಿ ಪುರಂದರದಾಸರ ಮಕ್ಕಳೆಂದೂ, ನಂದ ಗೋಕುಲದಲ್ಲಿ ಕೃಷ್ಣನೊಂದಿಗೆ ಆಟವಾಡಿದ ಗೋಪಾಲಕರಲ್ಲಿ ಒಬ್ಬರೆಂದೂ, ಯಮನ ಅಂಶಜರೆಂದೂ ತಿಳಿಸುತ್ತಾರೆ. ಇಷ್ಟು ಬಿಟ್ಟರೆ ಶಾಮರಾಯರ ಬಗೆಗಾಗಲಿ ಅವರ ಶಿಷ್ಯರಾದ ಗುರುತಂದೆ ಪುರಂದರವಿಠಲದಾಸರ ಬಗೆಗೆಯಾಗಲಿ ಯಾವ ಸಂಗತಿಗಳೂ ದೊರೆಯುವುದಿಲ್ಲ. ಅವರ ವಂಶಸ್ಥರನ್ನು ಗುರುತಿಸಲು ಸಾಧ್ಯವಾಗಿಲ್ಲ.

ದೇವನಾಗರಿ ಲಿಪಿಯ ದಾಸರ ಕೀರ್ತನೆಗಳ ಮೊದಲ ಭಾಗವು ಪ್ರಕಟವಾದಾಗ (೧೯೩೮) ದಾಸರಿಗೆ ಎಪ್ಪತ್ತೇಳು ವರ್ಷಗಳೆಂದು ಹೇಳಲಾಗಿದೆ. 'ಬೂದಿಮುಚ್ಚಿದ ಕೆಂಡದಂತೆ ತಮ್ಮ ತಾವು ಹೊರಗೆ ತೋರಿಸಿಕೊಳ್ಳದೆ, ಬಹುಗೋಪ್ಯವಾಗಿ ಬಹು ವೃದ್ಧಾಪ್ಯ ದೆಸೆಯಲ್ಲಿ ಈಗಲೂ ಇರುವರು' ಎಂದು ಶ್ರೀ ಸಿ.ಎನ್.ಲಕ್ಷ್ಮಣರಾಯರು ತಿಳಿಸುತ್ತಾರೆ. ದಾಸರು ಸ್ವಾತಂತ್ರ್ಯ ಪೂರ್ವದ ಸುಮಾರಿನಲ್ಲಿ ವಿಧಿವಶರಾಗಿರಬೇಕು. ದಾಸರಾಗಲಿ ಅವರ ಶಿಷ್ಯರಾಗಲಿ ದಾಸರ ಕೀರ್ತನೆಗಳ ಭಾಗ ೨, ೩ ಇತ್ಯಾದಿಗಳನ್ನು ಸಿದ್ಧಪಡಿಸಿದ್ದರೇ? ಗೊತ್ತಿಲ್ಲ. ದಾಸಸಾಹಿತ್ಯ ಸಂಗ್ರಾಹಕರಾಗಿದ್ದ ಶ್ರೀ ಎಚ್.ಎಸ್.ಶ್ರೀನಿವಾಸಮೂರ್ತಿಗಳು ತಮ್ಮ ಬಳಿ ತಂದೆ ಪುರಂದರವಿಠಲದಾಸರ ಹಸ್ತಪ್ರತಿ ಇದೆಯೆಂದು ಹೇಳಿದ್ದರು. ಉರಗಾದ್ರಿವಾಸವಿಠಲ ಪ್ರಕಾಶನದಿಂದ ೧೯೮೩ ರಲ್ಲಿ ಪ್ರಕಟಿಸಿದ 'ಗುರುಸಾರ್ವಭೌಮ ರಾಘವೇಂದ್ರ ತೀರ್ಥರು' ಸಂಕಲನದಲ್ಲಿ ದಾಸರ ನಾಲ್ಕು ಕೀರ್ತನೆಗಳನ್ನು ಪ್ರಕಟಿಸಿದ್ದಾರೆ.

ಕನ್ನಡದ ಸಂಪರ್ಕವೇ ಇಲ್ಲದ ಕೊಯಮತ್ತೂರು ಮತ್ತು ಕಡಲೂರು ಪ್ರಾಂತ್ಯಗಳಲ್ಲಿ ಇದ್ದ ಶಾಮರಾಯರಿಗೆ ಕನ್ನಡದ ಆಡುಭಾಷೆಯ, ದಾಸಸಾಹಿತ್ಯದ ಪರಿಚಯವಿತ್ತು. ಕನ್ನಡದ ಲಿಪಿಯಲ್ಲಿ ಬರೆಯುವ ಅಭ್ಯಾಸ ಇದ್ದಿರಲಾರದು. ಈಗಲೂ ಮಧುರೈ, ಕುಂಭಕೋಣ, ಕೊಯಮತ್ತೂರುಗಳಲ್ಲಿ ಇರುವ ಅನೇಕ ಮಾಧ್ವರ ಮನೆ ಮಾತು ಕನ್ನಡ. ಬರವಣಿಗೆಯ ವಿಷಯ ಬಂದಾಗ ಅವರು ಕನ್ನಡವನ್ನು ಸಂಸ್ಕೃತ ಅಥವಾ ತಮಿಳು ಲಿಪಿಯಲ್ಲಿ ಬರೆಯುತ್ತಾರೆ. ಕನ್ನಡದ ಕೃತಿಗಳನ್ನು ದೇವನಾಗರಿ ಲಿಪಿಯಲ್ಲಿ ಬರೆದಿರುವುದಕ್ಕೆ ಮುದ್ರಣ ಮಾಡಿರುವುದಕ್ಕೆ ಸಾಕಷ್ಟು ಉದಾಹರಣೆಗಳು ೧೯ನೇ ಶತಮಾನದ ಅಂತ್ಯ ಭಾಗದಲ್ಲಿ ದೊರೆಯುತ್ತದೆ.

೧೯೨೫ ರಲ್ಲಿ ಪ್ರಾರಂಭವಾದ ಶ್ರೀ ಸುಬೋಧರಾಮರಾಯರ 'ಹರಿದಾಸ ಕೀರ್ತನ ತರಂಗಿಣಿ' ಮಾಲಿಕೆಯ ೧೨ನೇ ಸಂಚಿಕೆಗಳಲ್ಲಿ ಪುರಂದರದಾಸರ ೫೪೩ ಕೃತಿಗಳು ಪ್ರಕಟವಾದವು. ಈ ಕೀರ್ತನ ಸಂಗ್ರಹದಲ್ಲಿರುವ ತಂದೆ ಪುರಂದರವಿಠಲ ಅಂಕಿತದ ಕೀರ್ತನೆಗಳು ಎಲ್ಲವೂ ಪುರಂದರದಾಸರದೇ. ಅವು ಶಾಮರಾಯರ ರಚನೆಗಳಲ್ಲ. ಶಾಮರಾಯರ ರಚನೆಗಳು ಈ ಸಂಗ್ರಹದಲ್ಲಿ ಬೆರಕೆಯಾಗಿಲ್ಲ. ಇದಕ್ಕೆ ಕಾರಣ ಹರಿದಾಸಕೀರ್ತನ ತರಂಗಿಣಿಯಲ್ಲಿ ಪ್ರಕಟವಾದ ಪುರಂದರದಾಸರ

ಮಾಧ್ವಮತ ದೀಕ್ಷೆ ಪಡೆದನಂತರ ... ನಲ್ಲಿ ... 1-5-1939ರಲ್ಲಿ ನಿಧನರಾದರು ... 123 ರಲ್ಲಿ ...

ಪದಗಳು ಎಲ್ಲವೂ ಪರಂಪರೆಯಿಂದ ರಕ್ಷಿತವಾಗಿ ಬಂದವುಗಳು. ಪಂಗನಾಮದ ತಿಮ್ಮಣ್ಣದಾಸರ ಶಿಷ್ಯಪರಂಪರೆಯಲ್ಲಿ ಅನೂಚಾನವಾಗಿ ಬರೆದಿಟ್ಟುಕೊಂಡು ಬಂದ ಹಸ್ತಪ್ರತಿಗಳಿಂದ ಸಂಗ್ರಹವಾದವುಗಳು. ದೊಡ್ಡಬಳ್ಳಾಪುರದ ಬಾಲಕೃಷ್ಣದಾಸರ ಮಕ್ಕಳಾದ ದಾಸರ ಲಕ್ಷ್ಮೀನಾರಾಯಣರಾಯರು ಈ ಹಸ್ತಪ್ರತಿಗಳನ್ನು ಸಂರಕ್ಷಿಸಿಕೊಂಡು ಬಂದಿದ್ದರು. ಇವುಗಳನ್ನೇ ಪುನಃ ಪ್ರತಿಮಾಡಿ ಹರಿದಾಸ ಕೀರ್ತನತರಂಗಿಣಿಯಲ್ಲಿ ಪ್ರಕಟಿಸಲಾಯಿತು. ಹೀಗಾಗಿ ಶಾಮರಾಯರ ಕೀರ್ತನೆಗಳು ಇಲ್ಲಿ ಬೆರಕೆಯಾಗಲಿಲ್ಲ. ದಾಸರ ಲಕ್ಷ್ಮೀನಾರಾಯಣರಾಯರಿಗಾಗಲಿ ಈ ಕೀರ್ತನೆಗಳನ್ನು ಪರಿಶೀಲಿಸಿದ ಶ್ರೀ ಬಿ.ನಾಗೇಶರಾಯರಿಗಾಗಲಿ ಶಾಮರಾಯರ ಕೀರ್ತನೆಗಳ ಪರಿಚಯವಿರಲಿಲ್ಲ. ಹೀಗಾಗಿ ಸುಬೋಧ ಮುದ್ರಣಾಲಯದ ಪುರಂದರದಾಸರ ಕೃತಿಗಳಲ್ಲಿ ಪ್ರಕ್ಷೇಪಗಳು ಸ್ವಲ್ಪಮಟ್ಟಿಗೆ ಕಡಿಮೆಯಾದವು.

ಪಾವಂಜೆಯವರ ಸಂಕಲನದಲ್ಲಿ ಬೆರೆತುಹೋದ ತಂದೆಪುರಂದರವಿಠಲ ಅಂಕಿತದ ಕೃತಿಗಳು ಮುಂದಿನ ಸಂಕಲನಗಳಲ್ಲೂ ಸೇರಿಹೋದವು. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚೂರಾಯರು ಸಂಪಾದಿಸಿದ ಸಂಪುಟಗಳು, ಶ್ರೀ ಎಸ್.ಕೆ.ರಾಮಚಂದ್ರರಾಯರ ಸಂಪುಟಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಪುಟಗಳೂ ಸೇರಿದಂತೆ ಮುಂದೆ ಪ್ರಕಟವಾದ ಎಲ್ಲ ಸಂಪುಟಗಳಲ್ಲೂ ಶಾಮರಾಯರ ಕೀರ್ತನೆಗಳು ಪುರಂದರದಾಸರ ಹೆಸರಲ್ಲಿ ಸೇರಿಹೋಗಿವೆ.

ಈ ಪರಿಸ್ಥಿತಿಯಲ್ಲಿ 'ತಂದೆ ಪುರಂದರವಿಠಲ' ಅಂಕಿತದ ಪುರಂದರದಾಸರ ರಚನೆಗಳನ್ನು ಗುರುತಿಸುವುದು ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಅದನ್ನು ಹೀಗೆ ಪರಿಹರಿಸಬಹುದು.

೧) ೧೮೫೦ ರಲ್ಲಿ ಹರ್ಮನ್ ಮೊಗ್ಲಿಂಗ್ ಪ್ರಕಟಿಸಿದ ಸಂಕಲನದಲ್ಲಿ ತಂದೆ ಪುರಂದರವಿಠಲ ಅಂಕಿತದ ೫ ಕೀರ್ತನೆಗಳಿವೆ. ಇವು ಪುರಂದರದಾಸರದೇ.

೨) ಗ್ಯಾರೆಟ್‌ಸಾಹೇಬರ ಅಪ್ಪಣೆ ಪ್ರಕಾರ ೧೮೭೧ರಲ್ಲಿ ಹೊಳಕಲ್ಲು ನರಸಿಂಹಯ್ಯನವರು ಪರಿಷ್ಕರಿಸಿದ ದಾಸರಪದಗಳಲ್ಲಿ ಆರು ಕೀರ್ತನೆಗಳು ತಂದೆಪುರಂದರವಿಠಲ ಅಂಕಿತದಲ್ಲಿವೆ. ಇವು ಪುರಂದರದಾಸರದ್ದೇ.

೩) ಸುಬೋಧ ರಾಮರಾಯರ ಸಂಗ್ರಹದಲ್ಲಿ ಬರುವ ತಂದೆಪುರಂದರವಿಠಲ ಅಂಕಿತದ ಕೀರ್ತನೆಗಳು ಪುರಂದರದಾಸರದ್ದೇ.

೪) ತಂದೆ, ಪುರಂದರವಿಠಲ ಈ ಎರಡೂ ಪದಗಳನ್ನು ಪ್ರತ್ಯೇಕಿಸುವ ಸಿರಿ ಅಥವಾ ಶ್ರೀ ಎಂಬ ವಿಶೇಷಣ ನಡುವೆ ಬಂದರೆ ಅಂಥ ಎಲ್ಲ ಕೀರ್ತನೆಗಳೂ ಪುರಂದರದಾಸರದೇ. 'ತಂದೆ ಶ್ರೀಪುರಂದರವಿಠಲ' ತಂದೆಸಿರಿಪುರಂದರವಿಠಲ' – ಇಲ್ಲಿ 'ತಂದೆ' ಎಂಬ ಸಂಬಂಧವಾಚಕ 'ಶ್ರೀ' ಎಂಬ ವಿಶೇಷಣ ಎರಡೂ ಪುರಂದರವಿಠಲನಿಗೇ ಅನ್ವಯಿಸುತ್ತವೆ.

ತಂದೆ ಪುರಂದರವಿಠಲ ಅಂಕಿತದಲ್ಲಿ ೧೧೧ ಕೀರ್ತನೆ ಮತ್ತು ಸುಳಾದಿ ಖಂಡಗಳು, ೨೦ ಉಗಾಭೋಗಗಳು ದೊರೆತಿವೆ. ಸುಳಾದಿಗಳ ಅಂತ್ಯದಲ್ಲಿ ಬರುವ ಜತೆಗಳಂತಹ ೩೦ ದ್ವಿಪದಿಗಳು ರಚಿತವಾಗಿವೆ. ಪ್ರತಿಯೊಂದು ಜತೆಯೂ ಒಂದು ಸ್ವತಂತ್ರವಾದ ಅಭಿಪ್ರಾಯದ ನಿರೂಪಣೆಯಾಗಿದೆ. 'ಸುಳಾದಿ' ಎಂದು ಕರೆಯಲಾದ ರಚನೆಗಳು ಶುದ್ಧ ಸುಳಾದಿಗಳಲ್ಲ. ೧೫-೨೦ ಪಾದಗಳ ಒಂದೊಂದು ಘಟಕ. ಆದಿಪ್ರಾಸವನ್ನು ಉಳಿಸಿಕೊಂಡು ರಗಳೆಯಂತೆ ನಿರರ್ಗಳವಾಗಿ ಸಾಗುತ್ತವೆ. ಇವು ಸುಳಾದಿಯ ಖಂಡ ಭಾಗಗಳಂತೆ ಇವೆ.

ದಾಸರ ಪೂರ್ವ ಜೀವನದ ವೃತ್ತಾಂತಗಳು ತಿಳಿದಿಲ್ಲವಾದರೂ ದಾಸನಾಗುವುದಕ್ಕೆ ಮುಂಚೆ ಮಾಡಿರಬಹುದಾದ ಕಾರ್ಯಗಳ ಉಲ್ಲೇಖ ಆತ್ಮಶೋಧನೆಯ ರೂಪದಲ್ಲಿದೆ.

ಮರೆತು ಸ್ವಧರ್ಮವ ನೂಕಿದೆ ಕಾಲವ
ಹಿರಿಯರ ನಾ ಬೈದೆ ಮೂರ್ಖನಾಗಿ
ಹರಿನಿಂದೆ ಮಾಡಿದೆ, ಪಾಪಿಷ್ಠರ
ಸರಸದೊಳುನಾನಿದ್ದೆ, ದೇಶದೇಶವ
ತಿರುಗಿ ಹೊಟ್ಟೆ ತುಂಬಿಸಿದೆ ಕಾಸಿಗಾಗಿ
ದುರುಳ ಜನರ ಸೇವಿಸಿದೆ ಬಗೆಯನರಿಯದೆ.

ಇದರಿಂದ ಪಾರುಮಾಡಿದ ಪುರಂದರದಾಸರ ಕರುಣೆಯನ್ನು ಸ್ಮರಿಸುತ್ತಾರೆ. ಮನೋವೇಗವನ್ನು ತಡೆಯಲಾಗದೆ, ಆಶಾಪಾಶವನ್ನು ಕಡಿಯಲಾಗದೆ, ತನುವಿನ ಪ್ರೇಮವನ್ನು ಬಿಡಲಾಗದೆ ಅಸಹಾಯಕತೆಯುಂಟಾದಾಗ ದೇವರಲ್ಲಿ ಶರಣಾಗುತ್ತಾರೆ.

೧) ಜನುಮ ಜನುಮದಿ ಹತ್ತಿದ ಕೊಳಕು
ಮನವ ತೊಳೆವ ಬಗೆ ತಿಳಿಬೇಕು
ವಿಷಯದ ವಾಸನೆ ನೂಕಲಿಬೇಕು
ತಂದೆ ಪುರಂದರವಿಠಲನ ದಯವಿರಬೇಕು — ಕೀರ್ತನೆ ೯೪

೨) ಕಾಶಿಯಾತ್ರೆಯು ಬೇಡ ಕಾಲ ಕಳೆಯಬೇಡ
ಮೋಸ ಹೋಗದೆ ನೆನೆಯಣ್ಣ
ದೋಷರಹಿತ ತಂದೆ ಪುರಂದರವಿಠಲನ
ಸಾಸಿರ ನಾಮವನು — ಕೀರ್ತನೆ ೯

೩) ನಂಬಿಕೆಯಿಲ್ಲದಂಥ ಡಿಂಬವ ಪಡೆದೆ
ಡಂಬಕ ಗೊಂಬೆಯಂತೆ
ಡಂಬಕ ತನವ ಬಿಡಿಸೊ ನಿನ್ನಂಘ್ರಿಯ ತೋರಿಸೊ
ಅಂಬುಜಾಕ್ಷ ತಂದೆ ಪುರಂದರವಿಠಲ — ಕೀರ್ತನೆ ೧೭

– ಇವು ಹರಿದಾಸನಾಗಲು ನಿರ್ಧರಿಸಿ ದಾಸತ್ವಕ್ಕೆ ಶರಣಾದ ಸಂದರ್ಭದ ಮಾತುಗಳು.

ಬಾಲಕೃಷ್ಣನ ಲೀಲಾವಿನೋದಗಳು ಮತ್ತು ದಶಾವತಾರಸ್ತುತಿ ದಾಸರಿಗೆ ಅತ್ಯಂತ ಪ್ರಿಯವಾದ ರಚನೆಗಳು. ಮತ್ಸ್ಯ, ಕೂರ್ಮ ಅವತಾರಗಳ ಅನಂತರ ಅನೇಕ ಕೀರ್ತನೆಗಳಲ್ಲಿ ಮೋಹಿನಿಯ ಅವತಾರದ ಪ್ರಸ್ತಾಪವಿದೆ. ದತ್ತ, ಕಪಿಲ, ವೇದವ್ಯಾಸರ ಅವತಾರಗಳನ್ನೂ ಕೆಲವೆಡೆ ಪ್ರಸ್ತಾಪ ಮಾಡುತ್ತಾರೆ. ಒಂದು ನುಡಿಯಿಂದ ಒಂದು ಕೀರ್ತನೆಯವರೆಗೂ ದಶಾವತಾರ ಉಲ್ಲೇಖದ ವ್ಯಾಪ್ತಿಯಿದೆ. ಕೀ (೪೫)ರಲ್ಲಿ ಮೊದಲ ನುಡಿಯಲ್ಲಿ ಒಂದು ಬಾರಿ, ಎರಡನೆಯ ನುಡಿಯಲ್ಲಿ ಎರಡುಬಾರಿ, ಮೂರನೇ ನುಡಿಯಲ್ಲಿ ಮೂರುಬಾರಿ – ಹೀಗೆ ಒಟ್ಟು ಆರು ಬಾರಿ ದಶಾವತಾರದ ಪ್ರಸ್ತಾಪವಿದೆ. ಕೃಷ್ಣಲೀಲೆಗಳಲ್ಲಿ ಅವನನ್ನು ಬಾಲಕನಾಗಿ ಕಾಣುವ ಬದಲು ಅವನು ದಶಾವತಾರವೆತ್ತಿದ ಮಹಾಮಹಿಮನೆಂಬ ಪೂರ್ವಗ್ರಹಿಕೆಯಿಂದಲೇ ಸ್ತುತಿಸುತ್ತಾರೆ. ಬಾಲ್ಯದ ತುಂಟಾಟಗಳ ಚಿತ್ರಣದ ಜೊತೆಯಲ್ಲೇ ಇವುಗಳನ್ನು ಕೇವಲ 'ಲೀಲೆ' ಎಂದು ಭಾವಿಸುತ್ತಾರೆ. ಎಲ್ಲ ಲೀಲೆಗಳನ್ನು ಮೀರಿದ ಅವಿಕಾರತೆ, ಶುದ್ಧತೆ ಮತ್ತು ನಿತ್ಯತ್ವಗಳು ಶ್ರೀಹರಿಯ ವ್ಯಕ್ತಿತ್ವದ ಲಕ್ಷಣಗಳೆಂದು ಭಾವಿಸುತ್ತಾರೆ.

ಭಾಷೆಯ ಬಳಕೆಯಲ್ಲಿ ಹೊಸಪದಗಳನ್ನು ಸೃಷ್ಟಿಸುವುದು, ಇರುವ ಪದಗಳಿಗೆ ಹೊಸ ಅರ್ಥಕೊಡುವುದು ದಾಸರ ಪದಗಳಲ್ಲಿ ಸಾಮಾನ್ಯ. ಇಂಥ ಅನೇಕ ಉದಾಹರಣೆಗಳು ಇಲ್ಲಿವೆ. ಕುಸುಮಶರಪಿತ, ಶಂಭುಜನಕಪಿತ, ಅಂಬುಜೋದ್ಭವಪಿತ, ಶೂರನಾಮಕಪೌತ್ರ, ದ್ವಿಜವೈರಿವೈರಿ, ತುರಗವಿಹಂಗ, ದ್ವಿಜರಾಜಗಮನ, ಕಿಂಕರರರಸ, ಭಾಮಾಮಣಿಲೋಲ, ಸತ್ಯಾರಮಣ – ಇತ್ಯಾದಿಗಳು ಕೃಷ್ಣನಿಗೆ ಪರ್ಯಾಯವಾಗಿ ಬಳಸಿರುವ ಪದಗಳು.

ಒಂದು ಪದವನ್ನು ಪೌರಾಣಿಕ ನೆಲೆಯ ಹಲವು ಅರ್ಥಗಳಲ್ಲಿ ಬಳಸುವ ವಿಶಿಷ್ಟ ವಿಧಾನವೂ ದಾಸರಪದಗಳ ವಿಶೇಷ. ಒಂದು ರೀತಿಯಲ್ಲಿ ಇವು ಮುಂಡಿಗೆಯ ಖಂಡರೂಪಗಳೆನ್ನಬಹುದು. ಉದಾ:

(೧) ಪಕ್ಷಿ

ಪಕ್ಷಿಗಮನ – ಗರುಡಗಮನನಾದ ಶ್ರೀಹರಿ

ಪಕ್ಷಿಯ ಸಲಹಿದಿ – ಜಟಾಯುವನ್ನು ಸಲಹಿದ ಶ್ರೀರಾಮ

ಪಕ್ಷಿಯ ಶಿಕ್ಷಿಸಿದಿ – ಕಾಕಾಸುರನನ್ನು ಶಿಕ್ಷಿಸಿದ ಶ್ರೀರಾಮ

(೨) ಪಕ್ಷ

ಪಕ್ಷಯಾದವನೆ – ಯಾದವರ ಪಕ್ಷಕ್ಕೆ ಸೇರಿದ ಕೃಷ್ಣ

ಪಕ್ಷವ ಸೀಳಿದಿ – ಕರ್ಣನ ಜನ್ಮವೃತ್ತಾಂತ ತಿಳಿಸಿ ಕೌರವಪಕ್ಷವನ್ನು ಸೀಳಿದವನು

ಪಕ್ಷಐವರ ಪಿಡಿದಿ – ಪಂಚಪಾಂಡವರ ಪಕ್ಷವಹಿಸಿದ ಶ್ರೀಕೃಷ್ಣ

(೩) ಬಾಲ

ಬಾಲನಾಗಿ ಅತ್ರಿ ಸತಿಯಲಿ ಜನಿಸಿದಿ – ಅನುಸೂಯೆಯ ಮಗ ದತ್ತಾವತಾರ

ಬಾಲನಾಗಿ ಸತ್ಯವತಿಗೆ ನೀ ತೋರಿದಿ – ವೇದವ್ಯಾಸ ಅವತಾರ

ಬಾಲನಾಗಿ ತತ್ವ ತಾಯಿಗೆ ಪೇಳಿದಿ – ಕಪಿಲಾವತಾರ

– ಕೀರ್ತನೆ ೪೧

(೪) ಕಂದ

ಕಂದ ಒಲಿದ ದೇವ – ಧ್ರುವ, ಪ್ರಹ್ಲಾದರಿಗೆ ಒಲಿದ ದೇವ

ಕಂದನಾಗಿ ಮಾತಲಾಲಿಸಿ – ದಶರಥನ ಕಂದನಾಗಿ ಪಿತೃ ವಾಕ್ಯಪರಿಪಾಲಿಸಿ

ಕಂದನನೆತ್ತಿ ಲಾಲಿಸಿ – ಕೈಕಸೆಯ ಕಂದನಾದ ವಿಭೀಷಣನನ್ನು ಉದ್ಧರಿಸಿ

ಕಂದನ ಶಿರವ ಎರಡು ಮಾಡಿ – ಶ್ರುತಶ್ರವೆಯ ಕಂದನಾದ ಶಿಶುಪಾಲನ ಶಿರವ ಛೇದಿಸಿ

ಕಂದಗೊಲಿದು ಕಲ್ಲನೇರಿದಿ–ಪುಂಡರೀಕನಿಗೆ ಒಲಿದು ಇಟ್ಟಿಗೆ ಮೇಲೆ ನಿಂತು

– ಕೀರ್ತನೆ ೪೭

ದಾಸರು ಕನ್ನಡವೇ ಬಳಕೆಯಲ್ಲಿ ಇಲ್ಲದ ಪ್ರದೇಶದಲ್ಲಿ ಇದ್ದವರು. ಹರಿದಾಸರ ಕೃತಿಗಳು ಮತ್ತು ದ್ವೈತಸಿದ್ಧಾಂತದ ಸಾಹಿತ್ಯವನ್ನು ಬಿಟ್ಟು ಅವರಿಗೆ ಬೇರೆ ಕನ್ನಡ ಸಾಹಿತ್ಯದ ಪರಿಚಯ, ಅಧ್ಯಯನಕ್ಕೆ ಅವಕಾಶವಿರಲಿಲ್ಲ. ಕುಂಭಕೋಣದ ಮಾಧ್ವರ ಆಡುಭಾಷೆ ಕನ್ನಡದಲ್ಲಿ ಕಾಣಬಹುದಾದ ಗ್ರಾಂಥಿಕವಲ್ಲದ ಪ್ರಯೋಗಗಳು ದಾಸರ ಕೀರ್ತನೆಗಳಲ್ಲೂ ಕಾಣಬಹುದು. ಒಂದಿಪೆ (ವಂದಿಪೆ), ವುಚಿತ (ಉಚಿತ), ವಯ್ಯಲು (ಒಯ್ಯಲು), ಯನ್ನದು (ಎನ್ನದು), ಯಂದಿಗೂ (ಎಂದಿಗೂ), ಯನಗೆ (ಎನಗೆ), ವೋಡುವುದು (ಓಡುವುದು), ಬ್ಯಾಡ (ಬೇಡ), ಯಾಕೆ (ಏಕೆ), ದುಃಖವಾಗ್ಯದೆ (ದುಃಖವಾಗಿದೆ), ಆಶೆ (ಆಸೆ), ಬ್ಯಾಸರ (ಬೇಸರ), ಬರುವದು (ಬರುವುದು), ಇರುವದು (ಇರುವುದು), ಬೇಡುವದು (ಬೇಡುವುದು), ನೋಡುವದು (ನೋಡುವುದು) ಇತ್ಯಾದಿ. ಹೀಗೆ ತಮ್ಮ ಮನೆಯ ಭಾಷೆಯಲ್ಲಿ ಬಳಕೆಯಲ್ಲಿದ್ದ ಪದಜ್ಞಾನದ ಮಿತಿಯಲ್ಲಿಯೇ ಶಬ್ದಗಳ ಬಳಕೆಯಾಗಿವೆ.

ಶಾಮರಾಯರ ಶಿಷ್ಯರಾದ ಗುರುತಂದೆ ಪುರಂದರವಿಠಲದಾಸರ ಬಗ್ಗೆ ಯಾವ ಸಂಗತಿಗಳೂ ತಿಳಿದುಬರುವುದಿಲ್ಲ. ಇವರ ಮೂವತ್ತು ಕೀರ್ತನೆಗಳು ತಂದೆ ಪುರಂದರವಿಠಲರ ಕೃತಿಗಳ ಜೊತೆಯಲ್ಲಿಯೇ ದೇವನಾಗರಿ ಲಿಪಿಯಲ್ಲಿ ಅಚ್ಚಾಗಿವೆ. 'ಭಕ್ತಿಯೇ ಸೋಪಾನ ಮುಕ್ತಿಪದಕೆ' ಎಂಬ ಪೂರ್ವನಿರ್ಧಾರದಿಂದಲೇ ಹರಿದಾಸರಾಗಿ ಭಗವಂತನ ವಿಚಾರದ ಚಿಂತನೆಯಲ್ಲಿ ತೊಡಗಿಸಿಕೊಂಡವರು ಇವರು. 'ಕರುಣಾದಿಗಳು ಹರಿಯ ಅಧೀನ' ಎಂಬ ನಂಬಿಕೆಯಿಂದ ರೂಢಿಸಿಕೊಂಡ ಶ್ರದ್ಧೆ ವಿರಕ್ತಿಗಳಿಂದ ಶ್ರೀಹರಿಯನ್ನು 'ರಾಗ ರಹಿತವಾಗಿ ಪಾಡಿ' ಅರ್ಚಿಸಿದ್ದಾರೆ.

ಅಂತರಂಗದಲ್ಲಿ ಶ್ರೀಹರಿಯನ್ನು ಕಾಣುವುದೇ ಸಾಧಕ ಜೀವಿಯ ಗುರಿ. ಕರ್ಮದೇಹ ಶಾಶ್ವತವಲ್ಲ. ಕರುಣಾದಿಗಳು ನಮ್ಮ ಅಧೀನದಲ್ಲಿ ಇರುವಾಗಲೇ ಹರಿಯನ್ನು ಕಾಣಬೇಕು.

೧) ವಾಸನಾಮಯದಿಂದ ದೇಹ ಭಾವವ ಮರೆತು
ಆಸೆಯಿಂದಲಿ ತನ್ನ ಗುರುಗಳ ಸ್ಮರಿಸಿ
ದೋಷರಹಿತನಾದ ವಾಸುಕಿಶಯನನ
ದೇಶವಾದ ಹೃದಯಾಕಾಶದಿ ನೋಡಲು

೨) ಕ್ಷಣಕೆ ಮಾಡುವ ಕೋಟಿ ಯೋಚನೆಗಳ ಬಿಟ್ಟು
ಕ್ಷಣ ಭಂಗುರವಾದ ವಿಷಯಕೆ ದೂರನಾಗಿ
ಕ್ಷಣಮಾತ್ರ ನೆನೆಯಲು ಕ್ಷಿತಿದೇವಿ ಅರಸನು
ಕ್ಷಣ ಬಿಟ್ಟು ಅಗಲನು ಕಾಣಿದು ನಿಶ್ಚಯ

೩) ಅನುಮಾನುಗಳ ಬಿಟ್ಟು ಶರಣಾಗತನಾಗಿ
ಅನುವಾಗಿ ಭಜಿಸಯ್ಯ ಹನುಮನಯ್ಯನ ನಿತ್ಯ
ಅಣುರೇಣು ಪರಿಪೂರ್ಣ ಘನನೀಲವರ್ಣನು
ತಾನೆ ಹೊಳೆವ ತಂದೆ ಪುರಂದರವಿಠಲ

– ಹೀಗೆ ಅಪರೋಕ್ಷಾನುಭವಕ್ಕೆ ಮಾರ್ಗದರ್ಶನ ನೀಡುವ ಕೀರ್ತನೆಗಳು ಇಲ್ಲಿವೆ. ತಮ್ಮ ಗುರುಗಳು ಸಾಗಿದ ಮಾರ್ಗದಲ್ಲಿಯೇ ಮುಂದುವರಿದಿರುವ ದಾಸರ ಕೃತಿಗಳಲ್ಲಿ ದಶಾವತಾರ ಸ್ತುತಿಗಳು, ಕೃಷ್ಣನ ಬಾಲಲೀಲೆಗಳ ಚಿತ್ರಣ, ಲೌಕಿಕ ನಿರಾಸಕ್ತಿ ಮತ್ತು ಅಪರೋಕ್ಷಾನುಭವದ ಹಂಬಲವನ್ನು ಗುರುತಿಸಬಹುದು. ದೊರೆತಿರುವ ಕೇವಲ ಮೂವತ್ತು ಕೃತಿಗಳ ಆಧಾರದ ಮೇಲೆ ದಾಸರ ಆಧ್ಯಾತ್ಮಿಕ ಮತ್ತು ಸಾಹಿತ್ಯಕ ಸಾಧನೆಗಳನ್ನು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಅವರ ಮತ್ತಷ್ಟು ಕೃತಿಗಳು ದೊರೆಯುವವರೆಗೂ ಕಾಯಬೇಕಾದ್ದು ಅನಿವಾರ್ಯ.

ಡಾ॥ಸುಮತೀಂದ್ರ ನಾಡಿಗರ ಮಾರ್ಗದರ್ಶನದಲ್ಲಿ ನಾನು ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯದ ಬಗ್ಗೆ ಸಂಶೋಧನೆ ಕೈಗೊಂಡು ಆ ಕಾಲದ ಹಸ್ತಪ್ರತಿಗಳ ಮತ್ತು ಮುದ್ರಿತ ಪ್ರತಿಗಳ ಸಂಗ್ರಹದಲ್ಲಿ ತೊಡಗಿದ್ದೆ. ತಮ್ಮಲ್ಲಿದ್ದ ಅಪಾರ ಗ್ರಂಥರಾಶಿಯನ್ನು ಬಳಸಿಕೊಳ್ಳಲು ಅವಕಾಶ ನೀಡಿ ಪ್ರೊ॥ಜಿ.ಅಶ್ವತ್ಥನಾರಾಯಣ ದಂಪತಿಗಳು ನನ್ನ ಸಂಶೋಧನ ಕಾರ್ಯಕ್ಕೆ ಬೆಂಬಲವಾಗಿ ನಿಂತರು. ಅವರ ಸಂಗ್ರಹದಲ್ಲಿ ದೊರೆತ ಅಪರೂಪದ ಕೃತಿ ಸಂಸ್ಕೃತಲಿಪಿಯಲ್ಲಿದ್ದ **'ತಂದೆ ಪುರಂದರದಾಸರ ಕೀರ್ತನೆಗಳು'**. ೧೮.೦೪.೧೯೭೦ ರಲ್ಲಿ ಬಳೆಯ ಪೇಟೆಯ ಹಳೆಯ ಪುಸ್ತಕದ ಅಂಗಡಿಯಲ್ಲಿ ಇಪ್ಪತ್ತೈದು ಪೈಸೆಗೆ ಕೊಂಡು ತಂದ ಹಳೆಯ ಪುಸ್ತಕ ಇದು. ಈ ಕೃತಿಯನ್ನು ಕನ್ನಡಕ್ಕೆ ಲಿಪ್ಯಂತರ ಮಾಡಿ ಪ್ರಕಟಿಸಿದರೆ ಅಮೂಲ್ಯ

ದಾಖಲೆಯಾಗುತ್ತದೆಯೆಂದು ಡಾ॥ಶ್ರೀನಿವಾಸ ಹಾವನೂರು ಅವರು ನೀಡಿದ ಸಲಹೆಯಂತೆ ನಾನು ಮತ್ತು ಪ್ರೊ॥ಜಿ.ಅಶ್ವತ್ಥನಾರಾಯಣ ಅವರು ತಂದೆ ಪುರಂದರವಿಠಲರ ಕೀರ್ತನೆಗಳ ಸಂಪಾದನ ಕಾರ್ಯವನ್ನು ಪ್ರಾರಂಭಿಸಿದೆವು. ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದ ಸಮಗ್ರ ಹರಿದಾಸಸಾಹಿತ್ಯ ಮಾಲಿಕೆಯಲ್ಲಿ ಇದನ್ನು ಪ್ರಕಟಿಸಬೇಕಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದ ಸಾಧ್ಯವಾಗಲಿಲ್ಲ. ಈಗ **ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ** ಈ ಸಂಸ್ಥೆಯ ಶತಮಾನೋತ್ಸವ ಸಂದರ್ಭದಲ್ಲಿ ಮೊದಲಬಾರಿಗೆ ಕನ್ನಡದಲ್ಲಿ ಪ್ರಕಟವಾಗುತ್ತಿದೆ. ಇದಕ್ಕೆ ಕಾರಣಕರ್ತರಾದ ಶ್ರೀ ಎ.ಆರ್.ಪಂಚಮುಖಿ ಅವರಿಗೂ ವಿದ್ವಾನ್ ಆದೋನಿ ವಾಸುದೇವಾಚಾರ್ಯರಿಗೂ ಕೃತಜ್ಞತೆಗಳು. ಈ ಕೃತಿಯ ಅಕ್ಷರ ವಿನ್ಯಾಸವನ್ನು ಮಾಡಿಕೊಟ್ಟ ಶ್ರೀ.ವಿ.ಹರೀಶ್ ಅವರಿಗೂ ಮುದ್ರಣಕಾರ್ಯವನ್ನು ಅಂದವಾಗಿ ಪೂರೈಸಿದವರಿಗೂ ನಾನು ಕೃತಜ್ಞನಾಗಿದ್ದೇನೆ.

– ಡಾ॥ಅನಂತಪದ್ಮನಾಭರಾವ್

ಶ್ರೀ ಕನ್ನಡ ಗ್ರಂಥಕರ್ತರ ಕೋಶ - ವೆಂಕಟೇಶ
ನಾಗ್ಲಿ ಇವರ ಗ್ರಂಥ ಪುಟ 173ರಲ್ಲಿ
ಜನನ 25-4-1861
ಮರಣ 1-5-1939 ಎಂದು ಕೊಟ್ಟಿದೆ.
ಕೋಯಿಮುತ್ತೂರಿನಲ್ಲಿ ಜನನ. ವಿದ್ಯಾಭ್ಯಾಸ
ಶಿಕ್ಷಣ ಪೂರ್ತಿಯಾದನಂತರ ಹೈಸ್ಕೂಲೊಂದ
ರಲ್ಲಿ ಶಿಕ್ಷಕರಾದರು.
ತಂದೆ ಪುರಂದರವಿಠಲ (ಇ) ರಂಗಬಿಂಬ
[illegible]
[illegible]
ರಚಿಸಿರುವರು. ನಾಗರೀ ಲಿಪಿಯಲ್ಲಿ
ಈ ದಾಸರ ಪದಗಳನ್ನು ಎ. ಲಕ್ಷ್ಮಣರಾವ್
ಕಡಲೂರು (ದಕ್ಷಿಣ ಆರ್ಕಾಟ್) ಅವರು
1938ರಲ್ಲಿ ಪ್ರಕಟಿಸಿದ್ದಾರೆ.
(ಈಗ ಪುನರ್ಮುದ್ರಣವೇ 2018ರಲ್ಲಿ
ಪ್ರಕಟವಾಗಿದೆ - ಕನ್ನಡದಲ್ಲಿ)

ತಂದೆ ಪುರಂದರವಿಠಲರ ಕೀರ್ತನೆಗಳ ಕ್ರಮಸೂಚಿ

ಮಂಗಳ ಗೀತೆಗಳು

ಗುರು ತಂದೆ ಪುರಂದರವಿಠಲರ ಕೀರ್ತನೆಗಳು

ತಂದೆ ಪುರಂದರವಿಠಲರ ಕೀರ್ತನೆಗಳು

೧

ಗಣೇಶ ಸ್ತುತಿ

ರಾಗ : ನಾಟಿ ಆದಿತಾಳ

ಏಕದಂತ ವಿನಾಯಕನೆ ನಿನ್ನ
ಏಕಭಾವದಿ ನು ತಿಸುವೆ ನಾನೀಗ ಪ

ವಾಕುಲಾಲಿಸಿ ಸನ್ಮತಿಯ ನೀಡಯ್ಯ
ಆಕುಲ ಬಿಡಿಸೊ ಆಖುವಾಹನನೆ ಅ.ಪ

ನಂಬಿದೆ ನಿನ್ನ ದಿಗಂಬರ ಸುತನೆ
ತಂಬಿಗೆ ತುಪ್ಪದಿ ತೋರಿದಿ ಆತನ
ಸಂಭ್ರಮದಲಿ ನಾ ಗಾನ ಮಾಡಬೇಕೋ
ತುಂಬಿಸು ಮನದೊಳು ಮೃದು ಮಾತುಗಳ ೧

ಮುದ್ದುಗಣಪ ನಿನ್ನ ಶುದ್ಧಭಾವದಲಿ
ಬಿದ್ದು ನಿಮ್ಮಡಿಗಳಿಗೆರಗುವೆ ದಾಸನು
ಗೆದ್ದು ನಾ ಬರುವಂತೆ ವೀಕ್ಷಿಸು ಸರ್ವದಾ
ಸಿದ್ಧಿವಿನಾಯಕ ಸರ್ವಕಾರ್ಯದಲಿ ೨

ಕರಿಮುಖನೇ ನಾ ಸಾರಿದೆನಿನಬಳಿ
ಸೇರಿದವರನು ನೀ ಬಿಡಬಾರದು ಕಂಡ್ಯಾ
ದೂರಮಾಡದೆ ತ್ವರಿತದೆ ಕಾಯೋ ತಂದೆ
ಪುರಂದರ ವಿಠಲನ ನಿಜದಾಸಯ್ಯ ೩

೨

ರಾಗ : ಬೇಹಾಗ್ ಆದಿತಾಳ

ಭರದಿ ನಮಿಸುವೆ ಗಣನಾಥ ನಿನ್ನ ಪ

ಮರೆಯದೆ ಪೊರೆಯೊ ವಿಘ್ನರಾಜ ಅ.ಪ

ಹರಿಭಜನೆಗೆ ಕುಂದು ಬಾರದೆ ನೋಡೈ
ಹರನೆ ಸುತನೆ ಗಣನಾಥ ೧

ಬೇಕಯ್ಯ ಬೇಕಯ್ಯ ಹರಿಯ ಹಾಡಬೇಕೊ
ಅಖುವಾಹನನೆ ಗಣನಾಥ ೨

ಸುರಸೇವಿತ ನಿನ್ನ ಚರಣಕೆ ಎರಗುವೆ
ಕರಿವರವದನನೆ ಗಣನಾಥ ೩

ಪಾಶವ ತರಿದು ನಾ ಶ್ರೀಶನ ಸೇರಬೇಕೋ
ಪಾಶಧರನೆ ಗಣನಾಥ ೪

ವರಸುಕುಮಾರ ನಿನ್ನ ಕರುಣವು ಬೇಕೋ ತಂದೆ
ಪುರಂದರ ವಿಠಲನ ದಾಸ ಗಣನಾಥ ೫

೩

ರಾಗ : ಬೇಹಾಗ್ ಛಾಪುತಾಳ

ವಿಘ್ನರಾಜನೆ ನಿನಗೆ ವಂದಿಪೆನೊ ನಾನು
ವಿಘ್ನವಾಗದೆ ನೋಡು ಹರಿಯ ಪಾಡಬೇಕು ಪ

ಸಿದ್ಧಿವಿನಾಯಕನೆ ಗಗನಾಭಿಮಾನಿ
ಸಿದ್ಧಿಸಬೇಕಯ್ಯ ಎನ್ನಮನದ ಕೋರಿಕೆಯ ೧

ನೀ ದಯಮಾಡಯ್ಯ ಕಡೆಗಣ್ಣಿಂದನೋಡೊ
ಸಾಧುವಂದ್ಯ ನಾ ಪೊಗಳಬೇಕೀಗ ೨

ತಡೆಯಾಗದೆ ಮಧುಧಾರೆಯಂತೆ ವಾಕು
ಒಡನೆ ನುಡಿವಂತೆ ನೀ ಮಾಡಲಿಬೇಕು ೩

ನಿನ್ನವನಾನಯ್ಯ ಎನ್ನವ ನೀನು
ಮನ್ನಿಸಿ ನೀ ಬಂದು ನಿಲ್ಲಬೇಕೀಗ ೪

ತಂದೆ ಪುರಂದರವಿಠಲನದಾಸ
ಸಂದೇಹಪುಟ್ಟದೆ ನೋಡಿಕೊಳ್ಳಯ್ಯ ೫

೪
ಶ್ರೀ ಹರಿ ಸ್ತುತಿ

ರಾಗ : ಭೂಪಾಳಿ ಅಟ್ಟತಾಳ

ಅನಂತನೆ ನಿನ್ನ ಮಹಿಮೆ ಎಂಥದೊ ಪ

ಸಿರಿ ಮೊದಲಾದವರು ಅರಿಯಲಾರದ ಮಹಿಮೆ ಅ.ಪ

ಅಂದು ಕೌಂಡಿಣ್ಯನು ಹಸಿವುತೃಷೆಗಳಿಂದ
ಒಂದು ತೋರದೆ ನಿನ್ನ ಅಡವಿಲಿ ಅರಸಲು
ಬಂದು ವೃದ್ಧಬ್ರಾಹ್ಮಣನಂತೆ ನೀ ತೋರಿದಿ
ಮಂದಿರ ಅನಂತನದು ಎಂದು ಮರೆಯಾದಿ ೧

ಅನಂತನ ಹಾಸಿಗೆ ಮೇಲೆ ಅನಂತನ ಅವಕಂಡ
ವನಜಾಸನೀಯಳ ಬಗಲಲಿ ಕಂಡ
ಹನುಮನ ಅವ ಕಂಡ ಗರುಡನ ಅವ ಕಂಡ
ಮುನಿಗಳು ಅಲ್ಲಲ್ಲಿ ನೆರೆದಿರುವುದು ಕಂಡ ೨

ಶಿರದಲಿ ಕಿರೀಟ ಪೊಳೆವ ಕುಂಡಲಕರ್ಣ
ಕೊರಳಲಿ ನವರತ್ನ ತುಳಸಿಯ ಹಾರ
ತರತರ ಶೃಂಗಾರ ತೋರುವುದನ ಕಂಡ
ವರಶಂಖ ಗದಾ ಚಕ್ರಗಳನೆ ಕಂಡ ೩

ಮಂಗಳಾಂಗನ ಕಂಡ ಸುಂದರಾಂಗನ ಕಂಡ
ಗಂಗೆಯ ಪೆತ್ತಂಥ ತುಂಗಪಾದವ ಕಂಡ
ರಂಗಮಂಟಪ ಕಂಡ ಎಲ್ಲ ಸುರರ ಕಂಡ
ಕಂಗಳಿಗಾನಂದ ಅವನು ಕೊಂಡ ೪

ಅಡ್ಡಬೀಳಲು ಮುನಿ ದೊಡ್ಡ ಮಾತುಗಳಾಡಿ
ಕೊಟ್ಟನು ವರಗಳ ಬೆಟ್ಟವ ಪೋಲುವ
ಬೆಟ್ಟದೊಡೆಯ ನಮ್ಮ ವೆಂಕಟರಾಯನು
ಸೃಷ್ಟಿಗಧಿಪನಾದ ಶ್ರೀಹರಿ ವಿಠಲನು ೫

ಕರುಣದೊಳಗೆ ನಿನಗೆ ಎಣೆಗಾಣೆ ಎಣೆಗಾಣೆ
ಚರಣಸೇವಕನಯ್ಯ ಮೊರೆಯಿಡುವೆನಯ್ಯ

ಕರುಣಾಸಾಗರನೆಂಬ ಬಿರುದು ಬೇಕಾದರೆ
ಕರಪಿಡಿದೆನ್ನನು ಸಲಹಯ್ಯ ವೇಗದಿ ೬

ಭವಸಾಗರದೊಳಗೆ ಮುಳುಗಿಪ್ಪ ಎನಗೆ
ಭುವನಪತಿಯೆ ಕೇಳೋ ಕಷ್ಟಕೆ ನೀನಾಗೆಲೊ
ಭವಸಂಸಾರದಲಿ ಇರಲಾರೆನಯ್ಯಾ ಮಾ
ಧವನೆ ಬಿಡಿಸಯ್ಯ ಕೈಮುಗಿವೆನಯ್ಯಾ ೭

ಎಂಭತ್ತುನಾಲ್ಕುಲಕ್ಷ ಹುಟ್ಟು ಎನಗಿಟ್ಟೆ
ಎಂಬೋದ ಕೇಳಿ ನಾ ಬೆದರಿದೆನೆಯ್ಯಾ
ಒಂಭತ್ತು ವಿಧವಾದ ಭಕುತಿಯ ಎನ್ನೊಳು
ತುಂಬಿ ಸಲಹಯ್ಯ ಎನ್ನ ಬಾಳು ಬೆಳಗಲಯ್ಯ ೮

ಮತ್ಸ್ಯಮೊದಲಾದ ಹತ್ತು ರೂಪವಗೊಂಡು
ಮೆಚ್ಚಿದ ಭಕ್ತರ ಸಲಹುವೆನೆಂದು
ಮುಚ್ಚಾಗಿ ಪೂಜಿಪೆ ಹೆಚ್ಚಾಗಿ ಕರುಣಿಸೊ
ವತ್ಸನು ನಾನೆಂದು ತಂದೆ ಪುರಂದರವಿಠಲ ೯

೫

ಆನಂದ ಭೈರವಿ **ಆದಿತಾಳ**

ಅಪ್ಪಪ್ಪ ನೀ ನೋಡಪ್ಪ ಮೈಯೆಲ್ಲವೂ ಕೆಸರಪ್ಪ
ಕಪ್ಪು ಬಡಿವುದೆನ್ನಪ್ಪ ತೊಳೆವೆನೊ ನೀ ಬಾರಪ್ಪ ೧

ಬಾರಪ್ಪ ನೀ ಬಾರಪ್ಪ ಭಾರ ಹೊರುವುದೇನಪ್ಪ
ಭಾರವೆಲ್ಲ ನಿನದಪ್ಪ ಸುರರ ಕಾವುದೆನ್ನಪ್ಪ ೨

ಎನ್ನಪ್ಪ ಎನ್ನಪ್ಪ ಮೋರೆ ಸೊಟ್ಟು ಯಾಕಪ್ಪ
ಕಾನನ ಗಡ್ಡೆ ಬೇಡಪ್ಪ ಔಷಧಬೇರ ತಿನ್ನಪ್ಪ ೩

ತಿನ್ನಪ್ಪ ತಿನ್ನಪ್ಪ ಭಕ್ತಿರಸದ ಹಣ್ಣಪ್ಪ
ಸಣ್ಣವ ನೀಡುವನಪ್ಪ ತೆರೆದ ಬಾಯ ತೋರಪ್ಪ ೪

ತೋರಪ್ಪ ನೀ ತೋರಪ್ಪ ಮುದ್ದುರೂಪವ ತೋರಪ್ಪ
ಇಂದ್ರಪದವ ನೀಡಪ್ಪ ಬಲಿಗೆ ಕಾವಲಾಗಪ್ಪ ೫

ಆಗಪ್ಪ ಭೃಗುರಾಮಪ್ಪ ವನಚರನುನೀ ಆಗಪ್ಪ
ಭಾಗವತ ಭರತನಪ್ಪ ಪಾದುಕೆ ಅವಗೆ ನೀಡಪ್ಪ ೬

ನೀಡಪ್ಪ ನೀಡಪ್ಪ ಹೆಣ್ಣ ಅವಗೆ ನೀಡಪ್ಪ
ಬಡವನಾದರೇನಪ್ಪ ಸೋದರ ಅಳಿಯನು ಬಿಡನಪ್ಪ ೭

ಬಿಡನಪ್ಪ ಬಿಡನಪ್ಪ ನಿನ್ನ ಚರಣವ ಬಿಡನಪ್ಪ
ಕಡಿವಾಣವ ಪಿಡಿಯಪ್ಪ ಪಾರ್ಥಗೆ ಸಾರಥ್ಯ ಮಾಡಪ್ಪ ೮

ಮಾಡಪ್ಪ ನೀ ಮಾಡಪ್ಪ ಮೋಹಶಾಸ್ತ್ರವ ಕಲಿಸಪ್ಪ
ದಿಟ್ಟ ತೇಜಯನೇರಪ್ಪ ತಂದೆಪುರಂದರವಿಠಲಪ್ಪ ೯

೬

ರಾಗ : ಭೂರಿಕಲ್ಯಾಣಿ **ಚಾಪುತಾಳ**

ಆಡಿದ ರಂಗನಾಡಿದ
ರೂಢಿಯೊಳಗೆ ಮಕ್ಕಳಂತೆ ಪ

ಮಣ್ಣಾಟ ಬೇಡವೊ ಬುಕ್ಕಟ್ಟಿ ಮಾಡಬೇಕು
ಅಣ್ಣಯ್ಯ ಬಾರೆಂದು ಎತ್ತಿಕೊಂಡು
ಎಣ್ಣೆ ಒತ್ತಿ ಬೇಗ ಎರೆದಳು ಗೋಪ್ಯಮ್ಮ
ಕಣ್ಣಿಗೆ ಕಾಡಿಗೆ ಇಟ್ಟಳು ಕೇಳಯ್ಯ ೧

ತಿಲಕವು ಫಣಿಯಲಿ ಸರಿಗೆ ಕೊರಳಲಿ
ಘಳಿರೆಂಬ ಉಡಿಗೆಜ್ಜೆ ಗಂಟೆಗಳು
ಪೊಳೆವ ಪೀತಾಂಬರ ಹೆಗಲಿಂದ ಇಳಿವುದು
ಜಲಜನಾಭನಿಗೆ ಕಡಗ ಕಾಲಸರಗಳು ೨

ಮೂರು ವರ್ಷಗಳ ಮುದ್ದು ರಂಗಯ್ಯನಿಗೆ
ಮೀರಿದ ಕೆಂದುಟಿ ಜೊಲ್ಲು ಬಾಯಿ
ವಾರಿಗೆಯ ಮಕ್ಕಳ ಕೂಡ ಬೀದಿಯಲಿ
ವಾರಿಜನಾಭನು ನಲಿಯುತಲಿರುತಿದ್ದ ೩

ಚಂಡುಬುಗುರಿ ಕಣ್ಣುಮುಚ್ಚಾಲೆ ಕೋಲು
ಗಂಡುಮಕ್ಕಳ ಸಹ ಗಜ್ಜುಗದಾಟ

ಕಂಡವರ ಮನವನು ಅಪಹರಿಸುತಲಿ
ದಂಡ ಪ್ರಣಾಮಗೊಂಬ ವಿರಿಂಚಾದಿಗಳಿಂದ ೪

ಮಣ್ಣನೆತ್ತಿ ತನ್ನ ತಲೆಗೆ ತಿಕ್ಕಿದನು
ಮಣ್ಣಾಯಿತು ಮೈಯು ಪೀತಾಂಬರವು
ಮಣ್ಣುಗಂಟು ಕಟ್ಟಿ ಉಪ್ಪುಕೂಗಿದನು
ಮಣ್ಣಪಡೆದ ತಂದೆ ಪುರಂದರವಿಠಲ ೫

೭

ರಾಗ : ಭೈರವಿ ಆದಿತಾಳ

ಆನಂದಮಯ ಹೇ **ಕೇಶವ** ಜಯ ಜಯ
ಆನಂದಾಚಲವಾಸನೆ ಜಯ ಜಯ ೧

ನಿರ್ದೋಷಾತ್ಮಕ **ನಾರಾಯಣ** ಜಯ ಜಯ
ನಿರ್ದಯ ಮಾಡದ ಕರುಣಾ ಜಯ ಜಯ ೨

ಸರ್ವಸಾರರೂಪ **ಮಾಧವ** ಜಯ ಜಯ
ಶರ್ವಾದಿವಂದ್ಯನೆ ನಮಿಸುವೆ ಜಯ ಜಯ ೩

ನಿಗಮಗೋಚರ **ಗೋವಿಂದ** ಜಯ ಜಯ
ಮಿಗೆ ಬಲವಂತ ಶ್ರೀ ವಿಷ್ಣುವೆ ಜಯ ಜಯ ೪

ಭೀಮನಿಯಾಮಕ **ಮಧುಸೂಧನ** ಜಯ ಜಯ
ಸೋಮಕುಲೋದ್ಭವ ನಂದನಂದ ಜಯ ಜಯ ೫

ಮೂರುಲೋಕದಿಪ್ಪ **ತ್ರಿವಿಕ್ರಮ** ಜಯ ಜಯ
ಭಾರತೀಪತಿ ಅಂತರ್ಗತ ಜಯ ಜಯ ೬

ಮಂಗಳವಿಗ್ರಹ **ವಾಮನ** ಜಯ ಜಯ
ಗಂಗಾಜನಕನೆ ಶರಣಯ್ಯ ಜಯ ಜಯ ೭

ಲಕುಮಿಯ ಪೊತ್ತ ಶ್ರೀ **ಶ್ರೀಧರ** ಜಯ ಜಯ
ಭಕ್ತರಭೀಷ್ಟದಾಯಕ ಜಯ ಜಯ ೮

ಇಂದ್ರಿಯಗಳಿಗೀಶ **ಹೃಷಿಕೇಶ** ಜಯ ಜಯ
ಇಂದ್ರಿಯಗಳ ಜೈಸಬೇಕಯ್ಯ ಜಯ ಜಯ ೯

ಜಲಜನಾಭಿಯುಳ್ಳ **ಪದ್ಮನಾಭ** ಜಯ ಜಯ
ಜಲಜಾಕ್ಷಿ ರುಕ್ಮಿಣೀನಾಯಕ ಜಯ ಜಯ ೧೦

ವಂದಿಪೆ ನಿನಗೆ **ದಾಮೋದರ** ಜಯ ಜಯ
ಬಂಧನ ಬಿಡಿಸೌ ಮುಕುಂದನೆ ಜಯ ಜಯ ೧೧

ಕಡೆಯಲಿ ಜೀವರ ಸೆಳೆವ **ಸಂಕರ್ಷಣ** ಜಯ ಜಯ
ಬಿಡದೆ ಭಕುತಿಯೆ ನೀಡ್ಯೆ ಜಯ ಜಯ ೧೨

ವಾಸುದೇವ ನಿನ್ನ ನಾಮಕೆ ಜಯ ಜಯ
ದಾಸರ ಮನೆಯಲಿ ನಲಿವನೆ ಜಯ ಜಯ ೧೩

ಶಿರಿಯರಸ **ಪ್ರದ್ಯುಮ್ನ**ನೆ ಜಯ ಜಯ
ಪರರ ಬೇಡದಂತೆನ್ನ ಮಾಡ್ಯೆ ಜಯ ಜಯ ೧೪

ಭಕ್ತಿಗೆ ಸಿಲುಕುವ **ಅನಿರುದ್ಧ**ನೆ ಜಯ ಜಯ
ಮುಕ್ತಿದಾಯಕ ಭೂವರಾಹನೆ ಜಯ ಜಯ ೧೫

ವೈಕುಂಠಾದಿಗಳಲಿಪ್ಪ **ಪುರುಷೋತ್ತಮ** ಜಯ ಜಯ
ಈ ಕಾಯವ ನಿನ್ನ ಒಳಮಾಡಿದೆ ಜಯ ಜಯ ೧೬

ಇಂದ್ರಿಯ ಗೋಚರ **ಅಧೋಕ್ಷಜ** ಜಯ ಜಯ
ಇಂದ್ರಾದಿದೇವತೆಗಳಲ್ಲ ನಿನ್ನ ಸೇವಕರ್‍ಯೆ ಜಯ ಜಯ ೧೭

ಹಿರಣ್ಯನ ಕೊಂದ **ನರಸಿಂಹ**ನೆ ಜಯ ಜಯ
ಕರಗಳ ಮುಗಿವೆ ಪರಮಾತ್ಮನೆ ಜಯ ಜಯ ೧೮

ನಾಶರಹಿತನೆ **ಅಚ್ಯುತ** ಜಯ ಜಯ
ನಾಶಕೆ ಮೂಲ **ಜನಾರ್ಧನ** ಜಯ ಜಯ ೧೯

ಪರಮೈಶ್ವರ್ಯವಂತ **ಉಪೇಂದ್ರ**ನೆ ಜಯ ಜಯ
ಪರಕೆ ಸಾಧನ ನಿನ್ನ ನಾಮವು ಜಯ ಜಯ ೨೦

ಪಾಪಮೋಚಕ ಹರಿಯೆ ಜಯ ಜಯ
ಪಾಪಿಯಾದೆನೊ ಕಾಯೋ ಜಯ ಜಯ ೨೧

ದೈತ್ಯವಿನಾಶಕ ಕೃಷ್ಣ ಜಯ ಜಯ
ಪಾಪಿಯಾದೆನೊ ಕಾಯೋ ಜಯ ಜಯ ೨೨

ಯದುಕುಲತಿಲಕ ಶ್ರೀ ಕೃಷ್ಣ ಜಯ ಜಯ
ಮಧುರವೊ ನಿನ್ನ ನಾಮವು ಜಯ ಜಯ ೨೩

ಮಾನುಷವಿಗ್ರಹ ಮತಿಕಾಣೆ ಜಯ ಜಯ
ಮಾನವ ಕೊಟ್ಟಮಹಾತ್ಮನೆ ಜಯ ಜಯ ೨೪

ಅಪ್ರಾಕೃತ ನಿನ್ನ ಪೊಂದಿದೆ ಜಯ ಜಯ
ಯಾಪ್ರಕಾರ ನಿನ್ನದಣಿಸುವೆ ಜಯ ಜಯ ೨೫

ದುಷ್ಟಕಳಿಂಗನ ಮರ್ದನ ಜಯ ಜಯ
ಇಷ್ಟರ ಹೃದಯದಿ ಮಿನುಗುವಿ ಜಯ ಜಯ ೨೬

ಗುಡ್ಡವನೆತ್ತಿದ ಕಿರುಬೆರಳಿಗೆ ಜಯ ಜಯ
ಇಡುವೆನ್ನಯ ಮೊರೆ ಕೇಳಬೇಕೈ ಜಯ ಜಯ ೨೭

ಧರ್ಮಕೆ ಕಾವಲು ನೀನಹುದೈಯ ಜಯ ಜಯ
ಧರ್ಮನ ಬಾಯಲಿ ಸಟಿಯ ತಂದನೆ ಜಯ ಜಯ ೨೮

ಮಾಮನ ಕೊಂದ ಭಾಮಾರಸನೆ ಜಯ ಜಯ
ಸಾಮಾನ್ಯವಲ್ಲವೆಂದು ಬೀರುವೆ ಜಯ ಜಯ ೨೯

ಜರೆಯ ಸುತನ ಬೇಗ ಕೊಲಿಸಿದಿ ಜಯ ಜಯ
ಸೆರೆಯ ತೆಗೆಯಬೇಕೊ ಪಾಡುವೆನೊ ಜಯ ಜಯ ೩೦

ರಾಜಸೂಯದಲಿ ಅಗ್ರಪೂಜೆಗೊಂಡನೆ ಜಯ ಜಯ
ರಾಜಾಧಿರಾಜ ನೀನಹುದಯ್ಯ ಜಯ ಜಯ ೩೧

ವಂಚಕಯೋಧನ ಧ್ವಂಸಕೆ ಜಯ ಜಯ
ವಂಚಕರಿಗೆ ಬಲು ವಂಚಕ ಜಯ ಜಯ ೩೨

ದ್ರೌಪದಿ ಮಾನವ ಕಾದವ ಜಯ ಜಯ
ಕೌಪಿನ ಧರಿಸಿದ ಬದರಿನಿಲಯನೆ ಜಯ ಜಯ ೩೩

ನರಗೆ ಸಾರಥ್ಯವ ಮಾಡಿದಿ ಜಯ ಜಯ
ಭರದಿ ರಥವನೆ ಒತ್ತಿದಿ ಜಯ ಜಯ ೩೪

ತಂದೆ ತಾಯಿ ನೀನೆ ಎನಗೆ ಜಯ ಜಯ
ಸಂದರ್ಶನವ ನೀ ತೋರ್ಯೆ ಜಯ ಜಯ ೩೫

ಅನಿಮಿತ್ತಬಂಧು ನೀ ಸರಿ ಜಯ ಜಯ
ಮನಸಿನ ಡೊಂಕ ತಿದ್ದಬೇಕ್ಯೆ ಜಯ ಜಯ ೩೬

ಪಕ್ಷಿಗಮನ ಸರ್ವೋತ್ತಮ ಜಯ ಜಯ
ಲಕ್ಷ್ಮಿಯ ಪತಿಯೆ ನೀ ಬಾರ್ಯೆ ಜಯ ಜಯ ೩೭

ಗೋವಗಳ ಕಾದ ಗೋಪಾಲ ಜಯ ಜಯ
ಸಾರ್ವಭೌಮ ಪಡೆದ ಪ್ರಭುವೆ ಜಯ ಜಯ ೩೮

ಅನೇಕವತಾರವ ಎತ್ತಿದಿ ಜಯ ಜಯ
ಅನೇಕ ಮಹಿಮನೆ ತುತಿಸುವೆ ಜಯ ಜಯ ೩೯

ನಿನ್ನ ಧ್ಯಾನವು ಮನಕೆ ದೊರಕಿತು ಜಯ ಜಯ
ಎನ್ನ ಜನ್ಮ ಪಾವನವಾಯಿತು ಜಯ ಜಯ ೪೦
ಘನ್ನನಾದೆನೊ ನಾ ಕೇಳ್ಯೆ ಜಯ ಜಯ
ಪುಣ್ಯಪುರುಷ ತಂದೆ ಪುರಂದರವಿಠಲ ಜಯ ಜಯ ೪೧

೮

ರಾಗ : ಆರಭಿ ಆದಿತಾಳ

ಇಂದಿರಾರಮಣ ಗೋವಿಂದ ನಿನ್ನಯ ಪಾದ
ದ್ವಂದ್ವವೆನಗೆ ಸಾಕೆಲೊ ಪ

ಅಂದು ಬ್ರಹ್ಮಾಂಡವನಳೆದಂತಹ ಪಾದ
ಎಂದೆಂದು ಭಕುತರು ಲಾಲಿಸುವ ದಿವ್ಯ ಅ.ಪ

ನಾರಾಯಣ ನಿನ್ನ ನಾಮವೆ ಅಜಮಿಳನ
ಘೋರ ಪಾಪವ ಅಟ್ಟಿತೊ
ಸಾರಿ ನಿನ್ನನು ಭಜಿಪ ಚಾರುಭಕುತರಿಗೆ
ಕೋರಿದ ವರಗಳ ಬೀರುವ ದಾತನೆ ೧

ಮುನಿಗಳು ತಮ್ಮ ತಮ್ಮ ಮನವನೆ ನಿಲ್ಲಿಸಿ
ಘನತರ ಮಹಿಮ ನಿನ್ನ
ನೆನೆಯುತಿರಲು ಅವರ ಕಾವಲಾಗಿರುತಿದ್ದಿ
ಅನಾಥರಕ್ಷಕ ಕಾರುಣ್ಯಮೂರುತಿ ೨

ಒಂದೇ ಮೂರುತಿಯಾಗಿ ಎಂದು ಇರುವನಾಗಿ
ಪೊಂದಿದಿ ಅನಂತರೂಪವೆಲ್ಲ
ಒಂದು ಅರಿಯದ ಎನ್ನ ಕಾಯಬೇಕೋ ಅಣ್ಣ
ತಂದೆ ಪುರಂದರವಿಠಲರಾಯನೆ ೩

೯

ರಾಗ : ಭೂರಿಕಲ್ಯಾಣಿ **ಅಟ್ಟತಾಳ**

ಇತ್ತತ್ತು ಓಡಿ ನೀ ಘಾಸಿಪಡಲಿ ಬೇಡ
ಎತ್ತೂ ಇಹನು ಕೃಷ್ಣನು ಪ
ಶುದ್ಧ ಮನದಿಂದ ಇದ್ದ ಎಡೆಯಲಿ
ಬುದ್ಧಿಯ ಅವನಲಿ ನಿಲ್ಲಿಸಬೇಕಯ್ಯ ಅ.ಪ

ಒಡಲೆಂಬ ಮನೆಯಲಿ ನೀನು ಇರುತಿಪ್ಪಿ
ಕಡಲ ಶಯನ ಕೃಷ್ಣನು
ಒಡಗೂಡಿ ಮರುತನ ಮಾಯವ ಮುಂದಿಟ್ಟು
ತಟಿಯಂತೆ ಪೊಳೆಯುವ ನಿನ್ನ ಎದುರಾಗಿ ೧

ಒಂದೆ ಮನದಿಂದ ನೆನೆಯಲು ಆತನ
ಹಿಂದಿನ ದುಷ್ಕರ್ಮವು
ಸಂದೇಹ ಬೇಡವೊ ಇರುಳು ಓಡುವುದು
ಚೆನ್ನಾಗಿ ಜ್ಯೋತಿಯು ಒಳಗೆ ತೋರುವುದು ೨

ನಾರದ ಮುನಿವಂದ್ಯ ನಾರಾಯಣನಂದು
ನಾರಿ ದ್ರೌಪದಿಯಳಿಗೆ

ಧೀರ ಪ್ರಹ್ಲಾದಗೆ ತೋರಿದ ಬಗೆಯೆಲ್ಲ
ಸಾರಿ ತಿಳಿಯಬೇಕಣ್ಣ ೩

ಸ್ನಾನಮಾಡಲು ಬರಿಯ ದಾನಮಾಡಲು ಸಿಲುಕ
ಮೌನ ಮಂತ್ರಗಳಿಗೆ
ದೀನರಕ್ಷಕ ಸ್ವಾಮಿ ಮಾನದಿಂ ಸಲಹುವ
ಧೇನಿಪ ಸುಜನರ ೪

ಕಾಶಿಯಾತ್ರೆಯು ಬೇಡ ಕಾಸು ಕಳೆಯಬೇಡ
ಮೋಸ ಹೋಗದೆ ನೆನೆ ಅಣ್ಣ
ದೋಷರಹಿತ ತಂದೆ ಪುರಂದರವಿಠಲನ್ನ
ಸಾಸಿರನಾಮವನು ೫

೧೦

ರಾಗ : ಕಲ್ಯಾಣಿ ಝಂಪೆತಾಳ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ ಪ
ಪದುಮನಾಭನೆ ನಿನ್ನ ದಾಸನಾಗುವುದು ಅ.ಪ.

ಸರ್ವಸ್ವತಂತ್ರನೆ ಸರ್ವನಿಯಾಮಕ ದೇವ
ಸರ್ವಶಕ್ತನು ನೀನೆ ಸರ್ವಗುಣವಂತನೆ
ಸರ್ವರೂಪವ ಕೊಂಡು ಮಿನುಗುವ ಸರ್ವೇಶ
ಶರ್ವನುತ ಈಶ ನಿನ್ನ ಪಾಡಿ ನಲಿಯುವುದು ೧

ಅ ಮೊದಲು ಆಗಿರ್ಪ ಶಬ್ಧಗಳು ಪೊಗಳುವ
ಅಮರೇಶವಂದ್ಯ ಅಸಮನು ನೀನೆ
ಒಮ್ಮೆ ನೆನೆಯಲು ಹೃದಯಮಂದಿರದಿ ಪೊಳೆಯುವ
ಬೊಮ್ಮನಯ್ಯಾ ನಿನ್ನ ಕಂಡು ಹಿಗ್ಗುವುದು ೨

ವೇದಗಳು ಎಂಬ ನಯನಗಳಿಗೆ ಗೋಚರ
ವೇದಗಳ ಬಲ್ಲಂಥ ಜ್ಞಾನಿಗಳಿಗೆ ಗೋಚರ
ವಾದಕೆ ಸಿಲುಕದ ನೀ ಎನಗೆ ಗೋಚರನಾಗು
ಭೇದ ಮಾಡದೆ ತಂದೆ ಪುರಂದರವಿಠಲ ೩

೧೧

ರಾಗ : ಕಮಾಚು ಅಟ್ಟತಾಳ

ಎಂಥಾ ಪುಣ್ಯವೆ ಗೋಪಿ ಪೇಳೆ ನಿನಗೆ
ಇಂಥಾ ಕೃಷ್ಣಯ್ಯ ನಿನ್ನ ಸುತನಾಗಿ ಇರುವನಲ್ಲೆ ಪ

ಸೊಲ್ಲುಗಳು ಇಲ್ಲ ಅವನ ಮಹಿಮೆ ಪೇಳೆ
ಕಲ್ಲಾಗಿ ಗುಂಡಾಗಿ ನಿನ್ನ ತೊಟ್ಟಿಲೊಳಿಹನಮ್ಮ ೧

ವನಜನಾಭನ ಎತ್ತುವ ಭಾಗ್ಯವ
ಕಂಡು ಪೊಂಗುವ ಭಾಗ್ಯವ ಹೇಗಮ್ಮ ಪಡದಿಯೆ ೨

ಕ್ಷೀರಸಾಗರದೊಡೆಯ ಓಡುತಲೆ ಬಂದು
ಕ್ಷೀರ ಬೇಡಿ ನಿನ್ನ ಕೊರಳ ಕಟ್ಟುವುದಕೆ ೩

ನಿನ್ನ ಪುಣ್ಯಕೆ ಈಡು ಉಂಟೇನೆ ಪೇಳಮ್ಮ
ನಿನ್ನ ಮಂದಿರದಿ ಶ್ರೀಕೃಷ್ಣಯ್ಯ ನಲಿವನೆ ೪
ಲೋಕದೊಡೆಯ ರಂಗ ಭಕ್ತಿಗೆ ಮೆಚ್ಚಿಬಂದ
ವೈಕುಂಠನಾಥ ತಂದೆ ಪುರಂದರವಿಠಲ ೫

೧೨

ರಾಗ : ಕೇದಾರ ರೂಪಕತಾಳ

ಎನ್ನವರಿಗೆ ಒಲಿದ ಕೃಷ್ಣರಾಯ ನಿನಗೆ ವಂದಿಪೆನೋ
ಉನ್ನಂತ ಕರುಣವುಳ್ಳ ಹರಿಯೆ ಅನ್ಯರಲಿ ಒಪ್ಪಿಸದಿರೆನ್ನ ಪ

ಕಂಡು ದಣಿವುದೆಂದು ರಂಗ ಪಾಂಡವರ ಸಖನೆ ನಿನ್ನ
ಪುಂಡರೀಕವರದ ನಿನ್ನ ತೊಂಡರೊಳು ಸೇರಿಸೆನ್ನ ೧

ಜಗವನಾಳುವ ದೊರೆಯು ನೀನು ಆಳಾದ ಮಹಿಮೆ ಏನು
ನಿಗಮವೇದ್ಯ ಎನ್ನವರಾದ ಮಾಯವನು ಪೇಳಲಾ ನಾ ೨

ಎನ್ನ ಪೂಜೆಗೊಂಬುದಕೆ ತಂದೆ ಪುರಂದರವಿಠಲ ಬಂದ್ಯಾ
ಚಿನ್ನದಾಭರಣಗಳನಿಟ್ಟು ಸಣ್ಣಹೆಜ್ಜೆಯ ಮೆಲ್ಲನಿಡು ೩

೧೩

ರಾಗ : ಕಲ್ಯಾಣಿ ಅಟ್ಟತಾಳ

ಏಕೆ ನಿರ್ದಯನಾಗುವಿ ರಂಗಯ್ಯ ರಂಗ ಪ

ಏಕೆ ನಿರ್ದಯ ರಂಗ ಕಾರುಣ್ಯಪತಿ ಎನ್ನ
ಸಾಕುವುದು ನಿನ್ನ ಭಾರ ಪಾಕಶಾಸನವಂದ್ಯ ಅ.ಪ

ಅರಿತುಪಾಡುವೆನೆಂದರೆ ರಂಗಯ್ಯ ನಿನ್ನ
ಅರಿತವರಾರಯ್ಯ
ಅರಿಯಬಾರದ ನಿನ್ನ ಹೊಂದುವುದು ಹ್ಯಾಗಯ್ಯ
ಅರಿಯದವನು ನಾನು, ದಾರಿ ತೋರಿಸೋ ನೀನು ೧

ಸುಲಭನು ನೀನೆಂದು ನಿನ್ನ ಬಳಿಗೆ
ಬಳಲಿ ಬಂದೆನೊ ದೊರೆಯೆ
ಸುಲಭನೀನಾದರೆ ಒಲಿದು ಸಲಹಬೇಕೊ
ಚೆಲುವ ಮೂರುತಿ ಕೃಷ್ಣ ಎನ್ನ ಬಿಟ್ಟಗಲದೆ ೨

ಎಷ್ಟು ದಿವಸ ಹರಿಯೆ ಈ ಮುಚ್ಚಾಟ
ಕಷ್ಟಪಡಿಸಬೇಡವೋ
ಎಷ್ಟಿದ್ದರೂ ಸರಿ ನಾ ಮಾಡಿದಪರಾಧ
ಅಷ್ಟು ಮರೆತು ಎನ್ನ ಇಷ್ಟದಿ ಕೈಪಿಡಿಯೊ ೩

ಮಾತುಮಾತಿಗೆ ನಿನ್ನ ನಾಮಗಳನ್ನು
ಹೇ ತಾತ ನುಡಿದೆನಲ್ಲದೆ
ನೀತಿಯ ಪೇಳಯ್ಯ ವಾತಜನಯ್ಯನೆ
ದೂತನು ನಾನೆಂದು ದೂರಮಾಡದೆ ಕಂಡ್ಯಾ ೪

ನಂಬಿಕೆ ಇಲ್ಲದಂಥ ಡಿಂಬವ ಪಡೆದೆ
ಡಂಬಕ ಬೊಂಬೆಯಾದೆ
ಡಂಬತನವ ಬಿಡಿಸೊ ನಿನ್ನಂಘ್ರಿಯ ತೋರಿಸೊ
ಅಂಬುಜಾಕ್ಷ ತಂದೆ ಪುರಂದರವಿಠಲನೆ ೫

೧೪

ರಾಗ : ಆನಂದಭೈರವಿ ಆದಿತಾಳ

ಏನಣ್ಣ ನಿನಗೇನಣ್ಣ
ಕಣ್ಣೇಕಣ್ಣ ಮುಚ್ಚಚೊಲ್ಲ್ಯಣ್ಣ
ಏನಣ್ಣ ನಿನ್ನಗೋಳಣ್ಣ
ಕಣ್ಣಿಂದ ನೋಡವೊಲ್ಲ್ಯಣ್ಣ ೧

ಗೂನಣ್ಣ ಬಲು ಗೂನಣ್ಣ
ಗಿರಿಯ ಹ್ಯಾಂಗೆ ನೀ ಹೊತ್ತ್ಯಣ್ಣ
ಹೀನ ಅಸುರರ ಹ್ಯಾಂಗಣ್ಣ
ಮೋಸವ ನೀ ಮಾಡಿದ್ಯಣ್ಣ ೨

ಹಲ್ಲಣ್ಣ ಕೋರೆ ಹಲ್ಲಣ್ಣ
ಭುವಿಯ ಹ್ಯಾಂಗೆ ನೀ ಹೊತ್ತಣ್ಣ
ಒಳ್ಳೆ ಒಳ್ಳೆ ಭಕುತರನ್ನ
ಮೆಚ್ಚಿ ನೀನು ಬಂದ್ಯಣ್ಣ ೩

ಪೋರನ ಮೊರೆ ಕೇಳಿಯಣ್ಣ
ಕಂಭದಿಂದ ಬಂದ್ಯಣ್ಣ
ಘೋರವಾದ ನೋಟವ ನೋಡಿ ಅವ
ನಪ್ಪನ ನೀ ಬಡಿದ್ಯಣ್ಣ್ಯ ೪

ಪುಟ್ಟ ಪುಟ್ಟ ಹೆಜ್ಜೆಣ್ಣ
ಇಟ್ಟು ನೀ ಅದನ್ನ
ಕೊಟ್ಟ ಮಣ್ಣಿನ ಒಂದೇ ಬಾರಿ
ಅಳೆದ್ಯಣ್ಣ ನೀ ಅಳೆದ್ಯಣ್ಣ ೫

ರಾಮಣ್ಣ ಬಡಿಬ್ಯಾಡಣ್ಣ
ರಾಯನೊಬ್ಬನಿಲ್ಲಣ್ಣ
ನಮ್ಮ ರಾಮಣ್ಣ ಹುಟಬೇಕಣ್ಣ
ರಾವಣನ ಬಡಿಬೇಕಣ್ಣ ೬

ಎಲ್ಲಣ್ಣ ನೀ ಹುಟ್ಟಿದ್ಯಣ್ಣ
ಎಲ್ಲಣ್ಣ ನೀ ಬೆಳೆದ್ಯಣ್ಣ
ಕೊಲ್ಲಬಂದ ಹೆಣ್ಣಿನ ಕೊಲೆ ಮಾಡಿದ್ಯಣ್ಣ
ನೀ ಮಾಡಿದ್ಯಣ್ಣ ೭

ಮಾವನ ನೀ ಕಳೆದ್ಯಣ್ಣ
ಮಾನಿನಿಯರ ನೀ ಪಿಡಿದ್ಯಣ್ಣ
ಮಾನವರ ಪಾಲಿಪುದಕ್ಕೆ
ಕುದುರೆಯ ನೀ ಏರಿದ್ಯಣ್ಣ ೮

ವ್ಯರ್ಥವಾಗಿ ಐದಲಣ್ಣ
ವರ್ಷಗಳು ಹೋಯಿತಣ್ಣ
ಮರೆತೇ ಹೋಗದೆ ಕೇಳಣ್ಣ
ನಿನ್ನ ಧ್ಯಾನವೆನಗೆ ನೀಡಣ್ಣ ೯

ಇಲ್ಲಣ್ಣ ಕೇಳು ಇಲ್ಲಣ್ಣ
ನೀನಿಲ್ಲದೆ ಒಂದಿಲ್ಲಣ್ಣ
ಎಲ್ಲಾವು ನೀ ಬಲ್ಲ್ಯಣ್ಣ
ನಿನ್ನ ಬಲ್ಲವರಿಲ್ಲಣ್ಣ ೧೦

ಮೊದಲಣ್ಣ ನೀ ಮೊದಲಣ್ಣ
ಕೊನೆಯಲಿರುವೆ ನೀನಣ್ಣ
ಮೊದಲು ಕೊನೆಗಳು ಇಲ್ಲಣ್ಣ
ತಂದೆ ಪುರಂದರವಿಠಲಣ್ಣ ೧೧

೧೫

ರಾಗ : ಉದಯ **ಚಾಪುತಾಳ**

ಏಳಯ್ಯ ಬೆಳಗಾಯಿತು ಪ

ದಾಸರೆಲ್ಲರು ಬಂದು ಬಾಗಿಲಮುಂದಲ್ಲಿ
ಏಸು ಹೊತ್ತಾಯಿತೊ ಏಳೈ
ಹಾಸಿಗೆ ಉಬ್ಬುಗಳು ಮಾಸಿಹೋದವೋ ರಂಗ
ಸಾಸಿರನಾಮ ನೀ ಏಳೈ ಅ.ಪ

ಕೌರವರ ಸಭೆಯಲಿ ದ್ರೌಪದಿಯ ನಿಂತಿಹಳು
ಕೌರವಾಂತಕ ಕೃಷ್ಣ ಏಳೈ

ಕೌರವರು ದ್ರೌಪದಿಯ ಸೀರೆಯ ಸುಲಿತಾರೊ
ಶೌರೆ ಅಕ್ಷಯನೀಡೋ ಏಳೈ ೧

ಧಾರ್ತರಾಷ್ಟ್ರನ ಸುತರು ಕದನಕೆ ಬಂದಿಹರಂತೆ
ಪಾರ್ಥ ಪೇಳಿದನಯ್ಯ ಏಳೈ
ಪಾರ್ಥಗೆ ಸಾರಥ್ಯ ನೀ ಮಾಡಬೇಕಂತೆ
ಪಾರ್ಥಸಾರಥಿ ಕೃಷ್ಣ ಏಳೈ ೨

ಮಂಗಳಾಂಗ ತಂದೆ ಪುರಂದರವಿಠಲ
ಶೃಂಗಾರ ಮೂರ್ತಿ ನೀ ಏಳೈ
ಅಂಗನೆರೆಲ್ಲರು ಆರತಿ ಪಿಡಿದಿಹರು
ಪೊಂಗಳನೂದೋ ಏಳೈ ೩

೧೬

ರಾಗ : ಉದಯ **ಚಾಪು ತಾಳ**

ಏಳೆನ್ನ ರನ್ನವೆ ಏಳೆನ್ನ ಚಿನ್ನವೆ
ಏಳೆನ್ನ ರನ್ನವೆ ಏಳೈ
ಏಳು ಮುದ್ದು ಕೃಷ್ಣ ಸದ್ದುಮಾಡದೆ ನೀನು
ಏಳು ಏಳು ಏಳು ಏಳೈ ಪ

ಕೋಳಿ ಕೂಗಿತು ಏಳು ಕೋಮಲಾಂಗನೆ ಏಳು
ಕಾಳಮೇಘವರ್ಣ ಏಳೈ
ಬೆಳಗಾಯ್ತು ಏಳು ಬೇಲದಣ್ಣು ಸಕ್ಕರಿ
ಕಲಿಸಿತರುವೆನಯ್ಯ ಏಳೈ ೧

ಬಿಸಿನೀರು ತಂದಿದೆ ಮುಖವ ತೊಳಿಯಬೇಕು
ಹಾಸಿಕೆ ಬಿಟ್ಟು ನೀ ಏಳೈ
ಕಾಶಿಪೀತಾಂಬರ ಉಡಿಸಿ ಅಲಂಕರಿಸಿ
ವಾಸನೆಮೃಗಮದ ಬೊಟ್ಟಿಡುವೆನೊ ೨

ಬಂಗಾರ ಬಟ್ಟಲಲಿ ನೊರೆಹಾಲು ಬಂದದೆ
ಶೃಂಗಾರಮೂರ್ತಿ ನೀ ಏಳೈ
ಅಂಗಳದಲಿ ನವಿಲಾಡುವದು ನೋಡು
ಮಂಗಳವಾದ್ಯವ ಕೇಳೋ ೩

ವಾರಿಗೆ ಮಕ್ಕಳಕೂಡ ಆಡುವದಕೆ
ವಾರಿಜಾಕ್ಷನೆ ನೀ ಏಳೈ
ಹಾರುವ ಕೋಕಿಲ ಮೇಲಾದ ಭಾರದ್ವಾಜ
ಚಾರುಧ್ವನಿಯನು ನೀ ಕೇಳೈ ೪

ಎತ್ತಿಗೊಂಬೆನೊ ನಿನ್ನಯೆತ್ತಿ ಮುದ್ದಾಡುವೆ
ಹೊತ್ತಾಯಿತು ಏಳು ಕೃಷ್ಣಯ್ಯ
ಸುತ್ತುಕೆಲಸವೆಲ್ಲ ಹೆಚ್ಚಾಗಿ ಇರುವದು
ಎದ್ದೇಳು ಎನ್ನ ತಂದೆಪುರಂದರವಿಠಲಾ ೫

೧೭

ರಾಗ : ಯದುಕುಲಕಾಂಭೋಧಿ ಛಾಪುತಾಳ

ಒಂದೇ ಮನದಿ ನಾನಿಂದು ನಮಿಸುವೆ
ಸಿಂಧುಶಯನನೆ ಮಂದಹಾಸನೆ ಪ

ಬಂದ ದುರಿತಗಳೊಂದು ಕೂಡದೆ
ತಂದೆ ಸಲಹಬೇಕೊ ಅ.ಪ

ನಿನ್ನ ಹೊರತು ನಾ ಅನ್ಯರೊಬ್ಬರ
ಇನ್ನು ಕಾಣೆನೊ ಎನ್ನ ಸಾಕುವ
ಚೆನ್ನವಾಗಿ ಪ್ರಸನ್ನನಾಗೆಲೊ
ಘನ್ನ ಮಹಿಮ ನೀನು ೧

ಕೋರಿ ನಿನ್ನನು ಬಾರಿಬಾರಿಗೆ
ಸಾರಿದೆನೊ ವಾರಿಜಾಕ್ಷನೆ
ತೋರು ನಿನ್ನಯ ಚಾರು ಚರಣವ ಅ–
ಪಾರ ಕರುಣಾನಿಧೆ ೨

ತುಂಗ ನಿನ್ನ ಪಾದಾಬ್ಜಭೃಂಗ ನಾ
ಮಂಗಳಾಂಗನೆ ಭಂಗಮಾಡದೆ
ರಂಗ ನಿನ್ನಂತರಂಗ – ಭಕುತರ
ಸಂಗ ನೀಡಬೇಕೊ ೩

ಕಾಮಜನಕ ಸುಧಾಮಮಿತ್ರನೆ
ದಾಮ ಉದರನೆ ನೇಮದಿಂದಲಿ
ರಾಮ ನಿನ್ನಯ ನಾಮಭಜನೆಯ
ಪ್ರೇಮ ಮಾಡಬೇಕೋ ೪

ದೇವ ದೇವನೆ ಸಾರ್ವಭೌಮನೆ
ಯಾವ ದೇಶದಿ ಯಾವ ಕಾಲದಿ
ಜೀವರೆಲ್ಲರ ಕಾವ ದೇವನೆ
ಗೋವಿಂದ ಗೋಪತಿಯೆ ೫
ಈಶ ಎನಗೆಂಬೆ ಜಗದೀಶ ನಿನ್ನನು
ಶ್ರೀಶ ಮನ್ನಿಸೊ ಶೇಷಶಯನನೆ
ದಾಸ ಎನ್ನನು ಘಾಸಿಮಾಡದೆ
ಪೋಷಿಸಬೇಕೋ ನೀನು ೬

ಪರಾಕು ಎಂಬೆ ನಾ ಪರಾಕುಮಾಡದೆ
ಹರಾದಿ ವಂದ್ಯನೆ ಸುರರ ಪಕ್ಷನೆ
ಚರಾಚರದಲಿ ವಿರಾಜಿತ ತಂದೆ
ಪುರಂದರವಿಠಲರಾಯ ೭

೧೮

ರಾಗ : ಯದುಕುಲಕಾಂಭೋಧಿ **ಆದಿತಾಳ**

ಒಮ್ಮೆ ನೆನೆಯಲು ನಮ್ಮ ದೇವ
ಗಮ್ಮನೆ ಓಡಿಬರುವ ಬೊಮ್ಮನಯ್ಯನು ಬೇಗ ಪ

ಪಂಡರಿನಾಥನು ಪಾಂಡವರ ಮಿತ್ರನು
ಕೊಂಡಾಡುವರ ಮನೆ ತೊಂಡನಾಗುವನು ೧

ಒಯ್ಯಾರ ನಡೆಗಾರ ಹೊಯ್ಯಲುಮಾಡುವ ಚೋರ
ಮುಯ್ಯಕೆ ಮುಯ್ಯ ತೆಗೆವ ಅಯ್ಯನಯ್ಯಾನಯ್ಯ ೨

ಉತ್ತಮ ಪುರುಷನು ಮತ್ತೇನೆಂಬೆ ನಾನು
ಎತ್ತ ನೋಡಿದರತ್ತ ತೋರುತಲಿರ್ಪಾ ೩

ಸಚ್ಚಿದಾನಂದರೂಪ ಹೆಚ್ಚಾಗಿ ಸಲಹುವ
ಮುಚ್ಚಾಗಿ ಭಜಿಪರ ಅಚ್ಚುತಾನಂತ ಕೃಷ್ಣ ೪

ಸಂಕರ್ಷಣನಾಮ ತಂದೆಪುರಂದರವಿಠಲನ
ಸಂಕೀರ್ತನೆಯ ಮಾಡಿ ಸುಖವ ಕೇಳಮ್ಮಯ್ಯ ೫

೧೯

ರಾಗ : ಕಮಾಚು ಆಟತಾಳ

ಕಂದ ಬೇಡವೊ ಮಣ್ಣು ತಿನ್ನ ಬೇಡವೊ ಪ

ಕಂದಾ ಬೇಡವೊ ಮಣ್ಣು ತಿನ್ನಲಿ ಬೇಡವೊ
ಸುಂದರಾಂಗನೆ ನಿನಗೆ ಹೊಟ್ಟೆ ನೋಯುವುದಯ್ಯ ಅ.ಪ

ಬೇಗನೆ ಏಳಯ್ಯ ಮಣ್ಣಾಟ ಬಿಡೊ ನೀನು
ಜೋಗಿ ಬರುತಾನಲ್ಲಿ ಅಂಜಿಸುವುದಕ್ಕೀಗ ೧

ತಾಯಿ ಮಾತನು ಒತ್ತಿ ಕರದಲಿ ಮಣ್ಣೆತ್ತಿ
ಬಾಯಲಿ ಇಟ್ಟನು ಬಾಲಕೃಷ್ಣಯ್ಯನು ೨

ಪೆಟ್ಟು ಕೊಡುವೆ ನಿನಗೆ ಸಿಟ್ಟು ಬಹಳ ಇದೆ
ಮುಟ್ಟಬೇಡವೊ ಮಣ್ಣು ಬೆಣ್ಣೆ ತರುವೆನಯ್ಯ ೩

ಅಮ್ಮಯ್ಯ ಕೇಳೆಲೆ ಬಾಯಲಿ ಮಣ್ಣಿಲ್ಲ
ಗುಮ್ಮನ ಕರೆಬೇಡ ಸುಮ್ಮನೆ ಇರುತೇನೆ ೪

ಮಗುವೆ ಬಾಬಾ ಎಂದು ಬಣ್ಣಿಸಿ ಕರೆದಳು
ಮಗುವಿನ ಬಾಯ ಶೋಧಿಸಿದಳು ಬೇಗನೆ ೫

ಬಾಯಲಿ ಕಂಡಳು ಹದಿನಾಲ್ಕು ಲೋಕವ
ಕಾಯ ಮರೆತಳಯ್ಯ ಮರುಳಿಗೆ ವಶವಾಗಿ ೬

ಮತ್ತು ಕಂಡಳು ಅವಳು ಗೋಕುಲವೆಲ್ಲವ
ಅತ್ತ ಕಂಡಳು ತನ್ನ ಕೃಷ್ಣನ ಬಗಲಲಿ ೭

ಗೋಪೇರ ಮನೆಯಲಿ ಗೋಪಾಲಕೃಷ್ಣನು
ಗೋಪೇರ ಮಗನಂತೆ ದುಡುಕು ಮಾಡುತಲಿರ್ದ ೮

ಬಾಲನು ಬೀದಿಯ ಮಣ್ಣೆತ್ತಿ ಉಣುತಿರ್ದ
ಬಾಲೆ ಗೋಪ್ಯಮ್ಮಳು ಮಣ್ಣ ತೆಗೆತಿದ್ದಳು ೯

ಕಂದನು ನೀನಲ್ಲ ಕಂದರ್ಪಜನಕನೆ
ಕಂದನೆ ನಿನ್ನ ಬಾಯ ಮುಚ್ಚಿಕೊಳ್ಳಯ್ಯ ಈಗ ೧೦

ದೇವಾದಿದೇವನೆ ದೇವಕೀತನಯನೆ
ಭಾವಜನಯ್ಯನೆ ಬಾರಯ್ಯ ನಮ್ಮ ಮನೆಗೆ ೧೧

ಜಯಗಳಾಗಲಿ ನಮ್ಮ ಕೃಷ್ಣರಾಯಗೆ ಬಹಳ
ಜಯಗಳಾಗಲಿ ಅವನ ಭಕ್ತರ ವೃಂದಕೆ ೧೨

ಲೀಲಾ ವಿನೋದನು ರುಕ್ಮಿಣೀಲೋಲನು
ಲೀಲೆ ತೋರಿದನಂದು ತಂದೆ ಪುರಂದರವಿಠಲ ೧೩

೨೦

ರಾಗ : ಶಂಕರಾಭರಣ **ಅಟತಾಳ**

ಕರವ ಪಿಡಿಯೋ ಎನ್ನ ಕೃಷ್ಣಯ್ಯ ನೀ ಪ

ಕರವ ಪಿಡಿಯೋ ಎನ್ನ ವೈನದಿ ನೋಡೆನ್ನ
ಕರುಣದಿ ನೀಡೋ ನಿನ್ನ ಚರಣಸ್ಮರಣೆಯನ್ನ ಅ.ಪ

ಆಪದ್ಬಾಂಧವ ಕೃಷ್ಣ । ಕರುಣದಿ ಭವ
ಕೂಪದಿಂದೆತ್ತೋ ಎನ್ನ
ತಾಪತ್ರಯಗಳಿಂದ ನೊಂದೆನೋ । ಪರಿಪರಿ
ಶ್ರೀಪತಿ ನಿನಹೊರತು ಕಾವರ ಕಾಣೆನೊ
ಪಾಪಮೋಚಕ ಹರಿಯೆ ಕೇಳಯ್ಯ । ವಾರೆನೋಟದಿ ವೀಕ್ಷಿಸೆನ್ನನು
ಶಾಪದಿಂದಲಿ ಮೋಚಿಸುವ ಶ್ರೀ ಶ್ರೀ ಕರಾರ್ಚಿತ ನಂದನಂದನ ೧

ಮುನಿಗಣಪ್ರೇಮನೆ । ಕೇಳಯ್ಯ ಶ್ರೀ ಮಾ
ಘನಪುಣ್ಯಧಾಮ

ಅನಘ ನಿನಪದ ಸೇವೆ ಇತ್ತು ಉದ್ಧರಿಸಯ್ಯ
ಜನುಮ ಜನುಮಗಳಲಿ ನಿನ್ನವರೊಳು ಸೇರಿಸೊ
ಮನವು ನಿನ್ನದು ತನವು ನಿನ್ನದು । ಘನತೆ ನಿನ್ನದಾದ ಮೇಲೆ
ಎನ್ನ ಮನೆತನ ವೀಗ ಎಲ್ಲ । ನಿನ್ನದಾಯಿತೊ ಕೇಳೋ ಸೊಲ್ಲ ೨

ಬಾಲಗೋಪಾಲ । ಭಕ್ತವತ್ಸಲ ಲೀಲಾವತಾರ
ಪಾಲಿಸೋ ಪರಮ ಕೃಪಾನಿಧಿ ನೀನೆಂಬೆ
ಪಾಲುಬೆಣ್ಣೆ ಕಳ್ಳ ನಿನ್ನ ಪಾದಪಲ್ಲವ ತೋರೋ
ಸುಲಭ ನೀನು ಹೌದು ಎಂದು । ಕೇಳಿ ಬಲ್ಲೆ ಸತ್ಯವೊ ಅದು
ಒಲಿದು ಮುಂದಕೆ ಬಾರೊ ಎನ್ನ । ತಂದೆ ಪುರಂದರವಿಠಲರಾಯನೆ
೩

೨೧

ರಾಗ : ಕಮಾಚ್ **ತಾಳ : ಆದಿ**

ಕರುಣಾನಿಧಿಯು ನೀನೆ ನೆರೆನಂಬಿದೆ ಪ

ಕರಿರಾಜನು ಬಹಳ ಕಂಗೆಟ್ಟು ಪೋದನೆಂದು
ತ್ವರಿತದಿ ಬಂದು ಅವನ ಸೆರೆಯ ಬಿಡಿಸಿ ಕಾದ ೧

ಚಿಕ್ಕವ ಧ್ರುವರಾಯ ಪೊಕ್ಕನು ಅಡವಿಯ
ಸಿಕ್ಕದ ಭೋಗವ ಇಕ್ಕಿದ ದಾತನೆ ೨

ಕಂಭದಿಂದುದ್ಭವಿಸಿದ ಶಂಭುಜನಕ ಪಿತ
ತುಂಬಿದ ಕೋಪದಿಂದ ಕಂಭ ಒಡೆದು ನಿಂತಾ ೩

ಪಾಪಿ ದುಶ್ಯಾಸನ ದ್ರೌಪದಿಯ ಸುಲಿವಾಗ
ಆಪದ್ಬಾಂಧವ ನೀನು ಅಪಾರ ವಸ್ತ್ರವನಿತ್ತೆ ೪

ಮರಣ ಅವಸ್ಥೆಯೊಳ್ ಇರುತಿದ್ದ ಅಜಾಮಿಳಗೆ
ಕರುಣೆಯಿಂದಲಿ ಒಲಿದ ಕರುಣಾಮೂರ್ತಿಯೆ ನೀನು ೫

ಸುಧಾಮಸಖನೆ ಕೇಳು ಸದಾ ನಿನ್ನಯ ಧ್ಯಾನ
ಒದಗುವಂತೆ ಮಾಡೋ ಯಾದವಪ್ರಭುವೇ ನೀ ೬

ಎನ್ನ ಸಮಯಕೆ ನೀನು ಮನ್ನಿಸಿ ಒದಗಬೇಕೊ
ಅನ್ಯರ ಅರಿಯೆ ತಂದೆ ಪುರಂದರವಿಠಲ ೭

೨೨

ರಾಗ : ಮೋಹನ ಆದಿತಾಳ

ಕರುಣಾಬ್ಧಿ ನೀ ತಂದೆ ಉಳಿಸಿಕೊಳ್ಳಯ್ಯ ಪೆಸರ
ಕರುಣದಿ ಎನ್ನ ಮಾತ ಲಾಲಿಸಯ್ಯ ಪ

ಶರಣರ ಪೊರೆವ ಬಿರುದು ನಿನ್ನದಯ್ಯ
ಕರಪಿಡಿದೆಮ್ಮನು ಹರಕೆಯ ನೀಡಯ್ಯ ಅ.ಪ

ನಾರಿ ಲಕುಮಿಪತಿ ದೇವ ನೀನುತ್ತಮ
ಮೀರುವರ ನಿನ್ನ ಕಾಣೆನಯ್ಯ
ಕೋರಿದ ವರಗಳ ಬೀರುವ ದಾತನೆ
ಭಾರತೀಶ ವಾಯುಮತದಲಿ ಹರಿಸಯ್ಯ ೧

ಐದೇಳು ನಾಮಗಳು ಐದು ಮುದ್ರಾಂಕಿತವು
ಐದು ಭೇದವು ಮತ್ತು ತಾರತಮ್ಯ
ಐದೆರಡು ಅವತಾರ ಎತ್ತಿ ಭಕ್ತರ ಪೊರೆದೆ
ಐದು ಮೂರನೆ ಮಗು ಕೃಷ್ಣಯ್ಯ ನೀಡೆನಗೆ ೨

ಹೊಳೆವ ಸುದರ್ಶನ ಎಡದಲಿ ಶಂಖವು
ಥಳ ಥಳಿಸುವ ದಿವ್ಯ ತುಳಸಿಯ ಹಾರ
ಸುಲಭದಿಂದಲಿ ಒಲಿವ ಚೆಲುವ ರಾಜಗೋಪಾಲ
ಕೊಳಲನೂದುವ ತಂದೆ ಪುರಂದರವಿಠಲ ೩

೨೩

ರಾಗ : ಉದಯರಾಗ ಛಾಪುತಾಳ

ಕರುಣಾವಾತ್ಸಲ್ಯ ಉದಾರದಿ ಗುಣಪೂರ್ಣ
ಧರೆಯೊಳು ಬಂದನು ವರ ವೈಕುಂಠ ಬಿಟ್ಟು ಪ

ನೆರೆದ ಭಕ್ತರ ಕ್ಷೇಮ ವಹಿಸಿದ ಸೂಕರ
ಪರಿಹರಿಸುವ ಎಮ್ಮ ಜನನಾದಿ ಬಾಧೆಯ ಅ.ಪ

ಘನನೀಲ ಆಕಾರ ಪೊಳೆವ ಉನ್ನತಗಾತ್ರ
ಮಣಿಮಯ ಕಿರೀಟ ಹಾರ ಕೇಯೂರಾದಿ
ಕನಕದಿಂದೊಪ್ಪುವ ದಿವ್ಯಮಂಗಳ ನಿತ್ಯ
ಸರಸಿಮಧ್ಯದಲಿ ನಿಂತಿರುವುದ ಕಂಡೆ ನಾ ೧

ನಿತ್ಯ ಸರಸಿಸ್ನಾನ ಅಶ್ವತ್ಥಪ್ರದಕ್ಷಿಣ
ದೈತ್ಯಭಂಜನ ಶ್ರೀಭೂವರಾಹನ ದರ್ಶನ
ನಿತ್ಯ ಮಾಡುವರಿಗೆ ಮುಕ್ತಿ ನಿಶ್ಚಯವಯ್ಯ
ಸತ್ಯವಚನವಿದು ಯುಕ್ತಿಮಾತಲ್ಲವೋ ೨

ಕೋರೆಲಿ ಗಡ್ಡೆಯ ತಿಂದು ಹೊಟ್ಟೆ ಹೊರೆವನಲಿ
ಏನು ಬೇಡಲಿ ಬಾಲಕೃಷ್ಣಯ್ಯ ನೀ ಪೇಳು
ಮೊರೆಹೊಕ್ಕೆನೆಂದರೆ ಮೋರೆ ಡೊಂಕಾಗುವುದು
ಪರ ಬೊಮ್ಮನೆ ಗತಿ ತಂದೆಪುರಂದರವಿಠಲ ೩

೨೪

ರಾಗ : ಶಂಕರಾಭರಣ ಆದಿತಾಳ

ಕರುಣಾಸಾಗರ ನಿನ್ನ ಚರಣಕೆ ವಂದಿಪೆ
ಗರುಡಗಮನ ಕೃಷ್ಣ ಬಾ ಬಾರೊ ಪ
ಹರುಷದಿಂದಲಿ ಎನ್ನ ಸಲಹಬೇಕಯ್ಯ ನೀನು
ಗರ್ವರಹಿತ ಸ್ವಾಮಿ ಬಾ ಬಾರೋ ಅ.ಪ

ಘೋರ ಸಂಸಾರದೊಳು ಬಿದ್ದು ಮಗ್ನನಾದೆ
ಮೀರಿ ಎಲ್ಲವು ಬಗೆ ಕಾಣೆನಯ್ಯ
ಕಾರುಣ್ಯನಿಧಿ ಎನ್ನ ಕರವ ಪಿಡಿಯೊ ಬೇಗ
ನಾರಾಯಣ ಬಂದು ಉದ್ಧರಿಸಯ್ಯ ೧

ಕರಿಯ ಮೊರೆಯ ಕೇಳಿ ತ್ವರಿತದಿ ಬಂದಂತೆ
ಕರಿವರದನೆ ಈಗ ಬಾರಯ್ಯ
ಹರಿಸರ್ವೋತ್ತಮನೆಂದು ನಿನಗೆ ಮೊರೆಹೊಕ್ಕೆನೊ
ಉರಗಾದ್ರಿವಾಸನೆ ಬಾ ಬಾರೊ ೨

ಅಂಡ ಬ್ರಹ್ಮಾಂಡವ ಪೆತ್ತ ಮಹಾದೇವ
ತೊಂಡವತ್ಸಲಸ್ವಾಮಿ ಬಾ ಬಾರೊ

ಪಂಡರೀಪುರನಾಥ ಪುಂಡರೀಕವರದ
ಗಂಡಕೀಸುತ ನೀನು ಬಾ ಬಾರೋ ೩

ವಿಪರೀತಗಳ ಗೈದ ಭೃಗು ನಿನ್ನ ಅಣ್ಣನೆ
ಪಾಪಿ ಮಾಧವ ನಿನ್ನ ತಮ್ಮನೇನೊ
ಅಪರಾಧಿಗಳ ನೀನು ಪೊರೆವುದೆ ಬಿರುದಣ್ಣ
ಕಪಟನಾಟಕಸೂತ್ರಧಾರಿಯೆ ೪

ನಿಗಮಗೋಚರ ತಂದೆಪುರಂದರವಿಠಲ
ಬಗೆ ಬಗೆಯಿಂದ ನಾ ಬೇಡುವೆನೋ
ಅಗಣಿತ ಮಹಿಮನೆ ಅಪ್ರಾಕೃತಕಾಮಿ
ಹಗರಣ ಮಾಡದೆ ಕಾಯೋ ಬಾ ಬಾ ೫

೨೫

ರಾಗ : ಹಿಂದೋಳ ಅಥವಾ ತೋಡಿ **ಆದಿತಾಳ**

ಕೂಸಿನ ಕಂಡಿರಾ ಬಾಲಕೃಷ್ಣನ ಕಂಡೀರಾ ಪ

ಕಾಶಿಪೀತಾಂಬರ ಧರಿಸಿದ ಕೂಸು
ದಾಸರ ಬೆನ್ನಟ್ಟಿ ತಿರುಗುವ ಕೂಸು
ಬಸುರಲಿ ಬೊಮ್ಮನ ಪೆತ್ತಂಥ ಕೂಸು
ಮೊಸರು ಪಾಲು ಬೆಣ್ಣೆ ಮೆಲ್ಲುವ ಕೂಸು ೧

ಶ್ರೀವತ್ಸ ಕೌಸ್ತುಭ ಧರಿಸಿದ ಕೂಸು
ಗೋವರ್ಧನಗಿರಿ ಎತ್ತಿದ ಕೂಸು
ಗೋವಿಂದನೆಂಬ ಪೆಸರುಳ್ಳ ಕೂಸು
ಆವು ಕಾವಲು ಕಾದ ಮುದ್ದುಳ್ಳ ಕೂಸು ೨

ಅಜಗರನಿಂದ ಬಿಡಿಸಿತು ಕೂಸು
ನಂದಗೋಪನ ಪುಟ್ಟ ಕೂಸು
ದ್ವಿಜರಾಜಗಮನನು ಎಮ್ಮ ಕೂಸು
ತಂದೆ ಪುರಂದರವಿಠಲನೆಂಬುವ ಕೂಸು ೩

೨೬

ರಾಗ : ನಾದನಾಮಕ್ರಿಯೆ ಭಾಪುತಾಳ

ಕೃಷ್ಣ ನೀ ಸಲಹೆನ್ನನು ಎನ್ನ ಮುದ್ದು ಪ

ಕೃಷ್ಣ ನೀ ಸಲಹೆನ್ನ ಸಂಕರ್ಷಣ ಬಾಗುವೆ
ಕೃಷ್ಣ ಕೃಷ್ಣ ಕೃಷ್ಣ ಸಣ್ಣವನೈ ನಾನು ಅ.ಪ

ಮೀನರೂಪವಗೊಂಡು ಮುದ್ದುರಂಗಯ್ಯ ಕೃಷ್ಣ
ಏನು ಮಾಡಿದಿಯಪ್ಪ ಅಮೃತವನೆ ಕೃಷ್ಣ
ಕಾನನಕಿಟವಾಗಿ ಸಂಚರಿಸಿದ ಕೃಷ್ಣ
ಜ್ಞಾನಿ ಪ್ರಹ್ಲಾದನು ಕರೆಯಲು ಬಂದ ಕೃಷ್ಣ
ದಾನಕಾಗಿ ಬೇಗ ಕೈಯ ನೀಡಿದ ಕೃಷ್ಣ
ಹೀನ ರಾಯರ ಕುಲದ ಬೇರ ಕಡಿದ ಕೃಷ್ಣ
ಭಾನುಕುಲ ತಿಲಕ ಶ್ರೀರಾಮಚಂದ್ರ ಕೃಷ್ಣ
ಮಾನುಷವಿಗ್ರಹ ನಂದನಂದನ ಕೃಷ್ಣ
ಮಾನಿನಿಯರ ಮಾನ ಗೆಲಿದು ಬಂದ ಕೃಷ್ಣ
ಜಾಣನಾಗಿ ಕುದುರೆ ಏರಿ ಮೆರೆದ ಕೃಷ್ಣ
ಶ್ರೀನಿಧಿ ಶ್ರೀಕೃಷ್ಣ ಸತ್ಯವ್ರತಗೆ
ನೀನೆ ಗತಿಯಾದಿ ಕೃಷ್ಣ । ಸುರರಿಗೆ
ಪಾನ ಮಾಡಿಸಿದ ಕೃಷ್ಣ । ಧರೆಯೊಳು
ಆನಂದಾಚಲದಿ ಕೃಷ್ಣ । ನಿಂತು ನೀನು
ದಾನವರ ವೈರಿ ಕೃಷ್ಣ । ಕೈಯ ನೀಡಿ
ದೀನರಕ್ಷನೆ ಕೃಷ್ಣ । ದೊರೆಗಳು
ಕ್ಷೀಣವಾದರು ಕೃಷ್ಣ । ಕರದೊಳು
ಬಾಣಪಿಡಿದ ಕೃಷ್ಣ । ಕೊಳಲ ಪಿಡಿದು
ಗಾನಮಾಡಿದ ಕೃಷ್ಣ । ಬುದ್ಧನಾಗಿ
ಮಾನವರ ಸಲಹಿದ ಹತ್ತವತಾರ ಕೃಷ್ಣ ೧

ಮೂರುರೂಪವಗೊಂಡ ಮುದ್ದು ರಂಗಯ್ಯ ಕೃಷ್ಣ
ಮೂರೆರಡು ಅರಿಗಳ ತರಿಯಬೇಕೊ ಕೃಷ್ಣ
ಮೂರೈದು ಮದಗಳು ಬೇಡ ಬೇಡ ಕೃಷ್ಣ
ಮೂರಾರು ಭಕುತಿಯ ನೀಡಿ ಸಲಹೊ ಕೃಷ್ಣ
ಮೂರು ಏಳು ಎನಗೆ ಆಗದಯ್ಯ ಕೃಷ್ಣ
ಮೂರು ನಾಲ್ಕು ಎರಡು ಅಂಡಗಳು ಕೃಷ್ಣ

ಮೂರು ಮಾಡುವ ನಿನ್ನ ಉದರದಿ ಇಟ್ಟ ಕೃಷ್ಣ
ಮೂರೈದು ಕ್ರಿಯೆಗಳು ನಿನ್ನದಯ್ಯ ಕೃಷ್ಣ
ಮೂರುಕೋಟಿ ಜೀವರಲಿ ಇರುವ ಕೃಷ್ಣ
ಮೂರು ಸಾವಿರ ಬಾರಿ ನಮಿಸುವೆನೊ ಕೃಷ್ಣ
ಮೂರುಕಾಲದಿ ಕೃಷ್ಣ । ನಿನ್ನ ನಾಮ
ಮೂರು ಕಣ್ಣನು ಕೃಷ್ಣ । ಪಠಿಸುವ
ಶಾರದೇಶ್ವರನು ಕೃಷ್ಣ । ಹಾಡುವನು
ಮೂರುಬಾರಿಗೆ ಕೃಷ್ಣ । ಸುರರನು
ಸಾರಿ ಪೊರೆದ ಕೃಷ್ಣ । ಮನ್ನಿಸಿ ನೀ
ಮೂರು ವಸ್ತುಗಳ ಕೃಷ್ಣ । ಅವುಗಳಲಿ
ಮೀರಿ ಆಸೆ ಕೃಷ್ಣ । ನಾ ಮಾಡದೆ
ಧೀರ ಸಲಹಯ್ಯ ಕೃಷ್ಣ । ಮುಕುಂದನೆ ಅ-
ಪಾರಕರುಣ ಕೃಷ್ಣ । ವಂದಿಪೆನೊ
ದೂರ ಮಾಡದೆ ಎನ್ನ ಕೈಯ ಪಿಡಿಯೊ ಕೃಷ್ಣ ೨

ನಂದನಂದ ನವನೀತ ಚೋರ ಕೃಷ್ಣ
ವೃಂದಾವನದೊಳು ಸಂಚರಿಸಿದ ಕೃಷ್ಣ
ಸುಂದರಾಂಗನೆ ನಿನಗೆ ವಂದಿಪೆನೊ ಕೃಷ್ಣ
ಅಂದು ಕರಿರಾಜಗೆ ಅಭಯವ ಕೊಟ್ಟ ಕೃಷ್ಣ
ಚಂದವಾಗಿ ಗಿರಿಯ ಬೆರಳಲಿ ಇಟ್ಟ
ಬೃಂದ ಗೋವಗಳನೆಲ್ಲ ಚೆನ್ನಾಗಿ ಕಾದ ಕೃಷ್ಣ
ಸಿಂಧೂರಗಮನೆ ದ್ರೌಪದಿಯ ಪೊರೆದ ಕೃಷ್ಣ
ಪೊಂದಿದ ಭಕುತರ ಆಶ್ರಯನೆ ಕೃಷ್ಣ
ಮಂದಹಾಸ ಅರವಿಂದ ನಯನ ಕೃಷ್ಣ
ಮಂದಿರ ಎನ್ನ ಹೃದಯದಲಿ ಕುಣಿ ಕೃಷ್ಣ
ಇಂದಿರೆ ರಮಣ ಕೃಷ್ಣ । ಗೋವಿಂದನಾ
ಕಂದನಲ್ಲವೆ ಕೃಷ್ಣ । ಸಲಹಯ್ಯ
ಒಂದು ಅರಿಯನೊ ಕೃಷ್ಣ । ಬಿಡುವುದು
ಅಂದವೆ ನಿನಗೆ ಕೃಷ್ಣ । ಎನ್ನದೊಂದು
ಕುಂದುಗಳ ಕಳೆಯೊ ಕೃಷ್ಣ । ಭವದಿ ನಾ
ಬೆಂದುಹೋಗದೆ ಕೃಷ್ಣ । ಮಾಡಯ್ಯ ನೀ
ಸಿಂಧುಶಯನ ಕೃಷ್ಣ । ನಿನ್ನ ಸರಿ
ಎಂದು ಕಾಣೆನೊ ಕೃಷ್ಣ । ನಿನ್ನ ಪಾದ-

ದ್ವಂದ್ವ ತೋರೆಲೊ ಕೃಷ್ಣ । ಬೇಡುವೆ ನಿನ್ನ
ಮಂದರೋದ್ಧಾರ ಕೃಷ್ಣ
ತಂದೆ ಪುರಂದರವಿಠಲ ಕೃಷ್ಣ ೩

೨೭

ರಾಗ : ಮೋಹನ ಚಾಪುತಾಳ

ಕೃಷ್ಣ ಬಾರೊ ಕೃಷ್ಣ ಬಾರೊ
ಕೃಷ್ಣಯ್ಯ ನೀ ಬಾರಯ್ಯ ಪ

ಸಣ್ಣಹೆಜ್ಜೆಯನಿಟ್ಟು ಗೆಜ್ಜೆನಾದಗಳಿಂದ ಅ.ಪ

ಮನ್ಮಥಜನಕನೆ ಬೇಗನೆ ಬಾರೊ
ಕಮಲಾಪತಿ ಕಮಲಜಪಿತ ಬಾರೊ
ಅಮಿತ ಪರಾಕ್ರಮ ಶಂಖಾರಿ ಬಾರೊ
ಕಮನೀಯಗಾತ್ರನೆ ಬಾರಯ್ಯ ದೊರೆಯೆ ೧

ಸುರುಳು ಕೇಶಗಳ ಒಲಿವ ಅಂದ
ಭರದ ಕಸ್ತೂರಿತಿಲಕದ ಚಂದ
ಶಿರದಿ ಒಪ್ಪುವ ನವಿಲು ಕಣ್ಗಳಿಂದ
ತರತರದಾಭರಣಗಳ ಧರಿಸಿ ನೀ ಬಾರೊ ೨

ಹಾಲು ಬೆಣ್ಣೆಗಳ ಕೈಯಲಿ ಕೊಡುವೆ
ಮೇಲಾಗಿ ಭಕ್ಷ್ಯಗಳ ಬಚ್ಚಿಟ್ಟು ತರುವೆ
ಜಾಲ ಮಾಡದೆ ನೀ ಬಾರಯ್ಯ ಹರಿಯೆ
ಬಾಲ ಎನತಂದೆ ಪುರಂದರವಿಠ್ಠಲ ೩

೨೮

ರಾಗ : ಗೌಳಿಪಂತು,
ಚಾಪುತಾಳ

ಗಜುಗವನಾಡುತಲಿರ್ದನು ನಮ್ಮ ರಂಗ ಪ
ವ್ರಜದ ಮಕ್ಕಳಕೂಡಿ ಹರುಷದಿಂದಲಿ ಬಲು ಅ.ಪ

ಒಂದನ್ನೆ ಹಾರಿಸಿದ ವೇಗದಿ ಮ
ತ್ತೊಂದರಿಂದಲಿ ತಾ ಬಡಿದ
ಒಂದೆ ಬಾರಿಗೆ ಎಲ್ಲ ಗಜುಗವ ಗೆಲಿದನು ೧

ಬಚ್ಚಿಟ್ಟ ಗಜುಗವ ಹುಡುಕೆಂದು
ಅಚ್ಯುತ ನಗುತ ನಿಂತ
ಬಚ್ಚಿಟ್ಟ ಗಜುಗವು ದೊರಕಲಿಲ್ಲವೊ ಒಂದು ೨

ಕಾಕಾಚಿ ಕೊಂಡ್ಹೋಯಿತು ಎನುತಲಿ ರಂಗ
ಆಕಾಶ ತೋರಿದ
ಬೇಕಾದ ಗಜುಗವ ನಿಮಗೆ ತರುವೆ ಎಂದ ೩

ಗಜುಗದ ಗಿಡಗಳನೇಕ ತೋರಿದನಯ್ಯ
ಗಜುಗ ಗೊಂಚಲುಗಳನೇಕ
ಗಜುಗದ ಗಂಟುಗಳ ಕಟ್ಟಿದರು ಮಕ್ಕಳು ೪

ಪರಿಪರಿ ಗಜುಗದಾಟ ಮಕ್ಕಳ ಸಂಗಡ
ಗೆರೆಯ ದಾಟುವ ಆಟವು
ನೆರೆಹೊರೆ ಮಕ್ಕಳ ಕೂಡೆ ಸಂಭ್ರಮ ಮಾತು ೫

ಬೊಮ್ಮನ ಪಡೆದಂಥ ಚಿಕ್ಕಕೂಸು
ಅಮ್ಮನ ತೊಡೆಯಮೇಲೆ
ಗಮ್ಮನೆ ಮಲಗಿದ ಆಟಂಗಳನೆ ಬಿಟ್ಟು ೬

ಸುರರು ವಂದಿಸಿ ನಿಲ್ಲಲು ಯಕ್ಷ ಕಿನ್ನರರು
ಸ್ವರವೆತ್ತಿ ಸ್ತುತಿಗೈಯಲು
ದೊರೆ ತಂದೆ ಪುರಂದರವಿಠಲನು ಒಪ್ಪಿದ ೭

೨೯

ರಾಗ : ಅಭಂಗಮಟ್ಟು **ಆದಿತಾಳ**

ಕೃಷ್ಣರಾಯ ಬಂದ ಇಲ್ಲಿಗೆ ನಡೆತಂದ
ಬಿನ್ನಣ ಮಾತುಗಳಿಂದ ಮುಗುಳುನಗೆಯ ತಂದಾ ೧

ನೀಲ ಘನನೀಲ ನೇತ್ರವು ವಿಶಾಲ
ಬಾಲಕ ಗೋಪಾಲ ಭಾಮಾಮಣಿಯ ಲೋಲ ೨

ವಸುದೇವತನಯನು ವಸುಧೆಯೊಳು ಖ್ಯಾತನು
ಪಶುಪತಿಗೆ ಪ್ರಿಯನು ಕುಸುಮಶರಗೆ ಪಿತನು ೩

ದ್ರೌಪದಿಗೆ ಅಕ್ಷಯ ನೀಡಿದ ಮಹಾರಾಯ
ಆ ಪರಿ ಎನ್ನಯ್ಯ ಕಾಪಾಡಬೇಕಯ್ಯ ೪

ದುರಿತಗಳಿಗೆ ದೂರ ಪೊರೆವ ಅಕ್ರೂರ-
ವರದ ಅಪಾರ ಕರುಣದಿಂದ ಭಾರ ೫

ಪರಮಮಂಗಳನಾಮ ಕೇಳೆಲೋ ರಘುರಾಮ
ಶರಣರಿಗೆ ಕಾಮ ಪರಬೊಮ್ಮ ಪರಂಧಾಮಾ ೬

ಗಳದಿ ತುಲಸಿಯ ಹಾರ ಪರಿಪರಿ ಶೃಂಗಾರ
ಚೆಲುವ ಭಕ್ತರೆಲ್ಲರ ಕಳೆವೆನೊ ವಿಚಾರ ೭

ಶೇಷಾಚಲವಾಸ ಪೋಷಿಸೊ ಶ್ರೀನಿವಾಸ
ದೋಷವಿನಾಶ ದಾಸರಿಗೆ ದಾಸ ೮

ಸುಜನರಕ್ಷಕನಯ್ಯ ಭುಜಗರಾಜಶಯ್ಯ
ಗಜವ ಕಾದವನಯ್ಯ ಭಜಿಪ ಜನರ ಪ್ರಿಯ ೯

ಗೋವಿಂದ ಎತ್ತಿದನು ಗೋವರ್ಧನಗಿರಿಯನು
ಗೋಗಳ ಕಾದನು ಗೋಕುಲದೊಡೆಯನು ೧೦

ಗಂಗೆಯ ಪೆತ್ತ ರಂಗ ತುರಗವಿಹಂಗ
ರಂಗನ ದಾಸರ ಸಂಗ ಸಂಗ ದುರಿತವು ಭಂಗ ೧೧

ಮಾತುಮಾತಿಗೆ ಶ್ರೀಪತಿ ನುಡಿಯಲು ಪಾರ್ಥಸಾರಥಿ
ಆತ ತೋರುವ ಗತಿ ನನಗೆ ಪರಂಜ್ಯೋತಿ ೧೨

ಹಲವು ರೂಪವಗೊಂಡ ಚೆಲುವೆ ರುಕ್ಮಿಣಿಗಂಡ
ಒಲಿದು ಇಟ್ಟಿಗೆಗೊಂಡ ಪುಂಡರೀಕನ ಕಂಡ ೧೩

ಎನ್ನ ಅಯ್ಯನ ಬಲಿಯಲಿ ಕಂದಗೆ ಮುಂಜಿ ಎನುತಲಿ
ಚಿನ್ನ ಕೇಳಿ ನಗುತಲಿ ವೃದ್ಧನಂತೆ ತೋರುತಲಿ ೧೪

ಮಾತೆ ಬಳಿಗೆ ಬಂದ ನೀತಿ ನುಡಿದು ನಿಂದ
ಸಾಧು ಮಾತುಗಳಿಂದ ಮೂಗುತಿ ಕೊಂಡುಹೋದ ೧೫

ಮಂದಹಾಸದಿಂದ ಇಂದುವದನೆರಿಂದ
ಅಂದು ದ್ವಾರಕಿಯಿಂದ ದಂತಿಪುರಕೆ ಬಂದ ೧೬

ಮುದ್ದು ಪಾದದರ್ಶನ ಪರಕೆ ಅಂದ ಸಾಧನ
ಎತ್ತಿ ಅಪ್ಪಿದ ಕೃಷ್ಣನ ಧರ್ಮರಾಯ ಘನ್ನ ೧೭

ಬಳೆ ಮಾರಲಿ ಬಂದ ಬಳೆಗಾರ ಗೋವಿಂದ
ಒಳ್ಳೊಳ್ಳೆ ಬಳೆಗಳ ಅಂದ ಭಕ್ತಳಿಗಾಗಿ ತಂದ ೧೮

ಕುದುರೆತೊಳೆವ ಕೆಲಸವ ಮಾಡುವ ನಮ್ಮಕೇಶವ
ಕುದುರೆ ಕಟ್ಟಿ ಮೆರೆಸುವ ಭಾವನ ಸಂಗಡ ತಾ ಮೆರೆವಾ ೧೯

ಭೂಸುರನೋರ್ವನು ದಾರಿದ್ರ್ಯಪಡುತ್ತಿದ್ದನು
ವಾಸುದೇವನ ಭೇಟಿಯನು ಮಾಡಿ ಅದನು ಕಳೆದನು ೨೦

ಕೇಳಲು ನಮ್ಮ ಹರಿ ಅವನು ಅವಿಕಾರಿ
ಕಾಳಮ್ಮೆಯನ ಸೇರಿ ಬಾಳಬೇಕೊ ಮೀರಿ ೨೧

ಹಯವನೇರಿ ಬಪ್ಪ ಹಯವದನ ತಿಮ್ಮಪ್ಪ
ಭಯವ ಬಿಡಿಸಿ ತಪ್ಪ ಮರೆವನೊ ಎನ್ನಪ್ಪ ೨೨

ಚಿಕ್ಕವ ಒಬ್ಬನ ಪೊಕ್ಕಳಿಂದ ಪೆತ್ತನ
ರಕ್ಕಸರ ಕಂಟಕನ ನೆನೆಯುತಿರೊ ಚಿನ್ನ ೨೩

ಮಂದರಗಿರಿಯ ಪೊತ್ತನ ಮುದ್ರೆದಾಸರ ಕಾವನ
ವೃಂದಾವನದಿ ಆಡಿದನ ಪೊಂದಿ ಪಾಡೆಲೊ ಅಣ್ಣ ೨೪

ಸವಿದು ಮಂಗಳನಾಮ ಕಳೆಯಲೊ ದುಷ್ಕಾಮ
ಅವನಿಯೊಳಗೆ ಪರಮ ಪಾವನವಯ್ಯ ಜನ್ಮ ೨೫

ಓಂಕಾರಮೂರುತಿ ದಿವ್ಯದಿವ್ಯ ಆಕೃತಿ
ವಾಙ್ಮನಕೆ ಸಾರಥಿ ಆಗಬೇಕೊ ಶ್ರೀಪತಿ ೨೬

ತಂದೆಪುರಂದರವಿಠಲ ನಮ್ಮಂತರಂಗವ ಬಲ್ಲ
ಅಂತರಂಗದ ಗುಟ್ಟೆಲ್ಲ ಅವನಿಗೆ ಒಪ್ಪಿಸಬೇಕಲ್ಲ ೨೭

೩೦

ರಾಗ : ಬಿಲಹರಿ ಆಟತಾಳ

ಗರುಡಗಮನ ಬಂದನೊ
ನೋಡಿರೋ ಬೇಗ ಪ

ಗರುಡಗಮನ ಬಂದ ಧರಣಿಯಿಂದೊಪ್ಪುತ
ಕರೆದು ಬಾರೆನ್ನುತ ವರಗಳ ಬೀರುತ ಅ.ಪ

ಎನ್ನರಕ್ಷಿಪ ದೊರೆ ಇಲ್ಲಿಗೆ ತಾ ಬಂದ
ಚಿನ್ನವ ಪೋಲುವ ವಿಹಂಗಜ ರಥದಲಿ
ಘನ್ನ ಮಹಿಮ ಬಂದ ಭಿನ್ನಮೂರುತಿ ಬಂದ
ಸಣ್ಣಕೃಷ್ಣ ಬಂದ ಬೆಣ್ಣೆಕಳ್ಳ ಬಂದ ೧

ಪಕ್ಷಿವಾಹನ ಬಂದ ಲಕ್ಷ್ಮೀಪತಿಯು ಬಂದ ಕುಕ್ಷಿ
ಯೊಳಗೆ ಜಗವನ್ನಿಟ್ಟವ ತಾ ಬಂದ
ಸೂಕ್ಷ್ಮಸ್ಥೂಲದೊಳು ಇಪ್ಪನು ತಾ ಬಂದ
ಸಾಕ್ಷಿಭೂತನು ಅವ ಸರ್ವೇಶ್ವರನು ಬಂದ ೨

ಸಿಂಧುಶಯನ ಬಂದ ಆನಂದಮೂರುತಿ ಬಂದ
ಬಂದು ನಿಂತು ನಲಿದಾಡಿದನು
ಅಂದು ಸಂದೀಪನ ಕಂದನ ತಂದಿತ್ತ
ತಂದೆಪುರಂದರ ವಿಠಲರಾಯ ಬಂದ ೩

೩೧

ರಾಗ : ಸಾಕಿಮಟ್ಟು ಆದಿತಾಳ

ಗಾಡಿಗಾರ ಕೃಷ್ಣ ನಿನ್ನ ಪಾಡಿ ನಲಿವೆನೊ ಪ

ಕನಕಶೈಲ ಶೃಂಗದಂತೆ ತನುವು ಪೊಳೆವುದು ಕಾಂತಿಯಲಿ
ಮನಕೆ ರಂಜನ ಆತನ ಧ್ಯಾನ ಘನಪುಣ್ಯಸಾಧನ ೧

ಕೃಷ್ಣವರ್ಣನ ಶಿರದಲಿ ಕಪ್ಪುಬಣ್ಣದ ಕೇಶಗಳು
ಕಪ್ಪುಮೇಘಜಾಲಗಳು ಒಪ್ಪು ಇಲ್ಲದಲೆ ೨

ಸುರಳು ಕೇಶಗಳ ಕಟ್ಟಿಹರೋ ಶಿರದ ಮ್ಯಾಲೆ ಒಂದಾಗಿ
ಜರುಗಿ ಕೆಲವು ಓಲಾಡಿದವೊ ಸರಸದಿ ಲಲಾಟದಲಿ ೩

ನಂದಸುತನ ಅಂದವ ಕಂಡು ಕಂದರ್ಪನು ತಾ ನಾಚಿದನೊ
ಸುಂದರವದನನು ಮಂದಹಾಸನು ಇಂದಿರೆ ಅರಸನು ೪

ಕಮಲಮುಖವು ಕಮಲ ನಯನ ಕಮಲನಾಭಗೆ ತಿದ್ದಿದ ನಾಸಿಕ
ಕಮಲಅಲರು ಮುಗುಳುಪಲ್ಲು ಕಮಲಾಸನವಂದ್ಯಗೆ ೫

ಮುದ್ದು ಸುರಿವ ನಿನ್ನ ಮುಖವ ಮುದ್ದು ಮುದ್ದು ರಂಗಯ್ಯ
ಮುದ್ದು ಕೊಡುವೆನೊ ಅಪ್ಪಿ ನಿನ್ನ ಇಂತು ಬಾರೈಯ್ಯ ೬

ಆತನ ಕಂಠ ಸುಕಂಠವೊ ಆತನ ಉರದಲಿ ಶ್ರೀವತ್ಸ
ಮಾತೆ ಲಕುಮಿ ಅಲ್ಲೆವಾಸ ಆತನು ನಮ್ಮ ತಾತ ೭

ಶಂಖಚಕ್ರ ಧರಿಸಿದ ಹಸ್ತ ಅಂಕಿತಮ್ಯೆಯ ಸುರೇಖೆಗಳಿಂದ
ಅಕಳಂಕಭಕ್ತರ ಪೊರೆವೆನೆಂದಾ ಕಿಂಕರರಸನು ೮

ಬೊಜ್ಜೆಯೊಳಗೆ ಮೂರ್ಜಗವನಿಟ್ಟವ ಸಜ್ಜನ ಹೃದಯದಿ ತಾ ಪೊಳೆವ
ಗುಜ್ಜ ರೂಪವಗೊಂಡ ನಮ್ಮ ಕೃಷ್ಣ ಮಜ್ಜಿಗೆ ಒಡೆಯನು ೯

ಇನ್ನು ಜಂಘೆ ಪಾದಗಳು ಸಮಾನವಿಲ್ಲದೆ ತೋರುತದೆ
ದೀನರಕ್ಷಕ ಕರುಣಾಸಾಗರ ಏನೆಂದು ವರ್ಣಿಪೆನೊ ೧೦

ಅಂದುಗೆ ಇಟ್ಟ ನಿನ್ನ ಪಾದದ್ವಯವ ಎಂದಿಗೆ ಕಾಂಬೆನೊ ರಂಗಯ್ಯ
ವಂದಿಪೆ ನಿನ್ನ ನಾಮಾಮೃತಬಿಂದು ಬಿಂದುವ ತೋರಯ್ಯ ೧೧

ಗರುಡಶೇಷ ರುದ್ರಾದಿಗಳು ಭರದಿ ಭಜಿಸುವಂಥಾ ಪಾದ
ನೆರದ ಭಕ್ತರ ಸಲುಹುವ ಪಾದ ಭರದಿ ತೋರಯ್ಯ ೧೨

ಧರಣಿಯ 'ಅಳೆದ' ಪಾದಕೆ ಶರಣು
ತರುಣಿಯ ತಿದ್ದಿದ ಪಾದಕೆ ಶರಣು ಶರಣು ಶರಣೆಂಬೆ ೧೩

ಮೆಟ್ಟಿದ ಪಾದವ ತೋರೊ ಪೊಲಿದು ರಥವ ತುಳಿದ ಪಾದ
ಚೆಲುವಭಕುತರ ಆಶ್ರಯ ಪಾದ ಜಲಜಾಪಾದವ ೧೪

ಯಾವ ಪುರುಷನು ಪುರುಷೋತ್ತಮನೊ ಯಾವ ಪುರುಷಗೆ
ಲಕುಮಿಯು ಸತಿಯೊ
ಯಾವ ಪುರುಷಗೆ ಬ್ರಹ್ಮಾಂಡ ಸಾಧನವೊ ಆ ಸ್ವಾಮಿಗೆ
ನಮೋ ಎಂಬೆ ೧೫

ಗೊಲ್ಲತೇರಿಗೆ ಒಲಿದ ದಾತ ಬಿಲ್ಲುಹಬ್ಬಕೆ ತಾ ಪೋದ
ಮಲ್ಲರ ಮಡುಗಿದ ನಮ್ಮ ರುಕ್ಮಿಣೀ ವಲ್ಲಭ ಇಲ್ಲಿಹನೊ ೧೬

ಯಾವ ಪುರುಷಗೆ ಸುರರು ಕಿಂಕರರೋ ಯಾವ ಪುರುಷಗೆ
ಗರುಡನು ರಥವೊ
ಯಾವ ಪುರುಷಗೆ ಶೇಷಪರ್ಯವೊ ಆ ಸ್ವಾಮಿಗೆ ನಮೋ ಎಂಬೆ ೧೭

ಸಂಕಟಗಳ ಕಳೆದು ನಮ್ಮ ಬಿಂಕದಿಂದಲಿ ತಾ ಒಲಿದ
ಮಂಕುಮತಿಗಳು ಅರಿವರೆ ನಮ್ಮ ಪಂಕಜನಾಭನ ೧೮

ಕೊಟ್ಟ ವರಕೆ ಅಂಜಿ ಬೇಗ ಥಟ್ಟನೆ ಶಿವನಪ್ಪ ಓಡಿದನು
ಪುಟ್ಟ ರೂಪವಗೊಂಡು ನಮ್ಮ ರಂಗ ಸುಟ್ಟನು ಅಸುರರನ್ನು ೧೯

ಧನ್ಯಧನ್ಯರೋ ದಾಸರಾಯರು ಧನ್ಯರೋ ಅವರ ಪೊಂದುವರು
ಧನ್ಯಧನ್ಯರೋ ನಮ್ಮ ಕೃಷ್ಣನ ಧನ್ಯರೋ ಅವನ ನೆನೆವರು ೨೦

ಜಯತು ಜಯತು ಪಂಡರಿನಾಥಗೆ ಜಯತು ಪಾಂಡವಪಕ್ಷಗೆ
ಜಯತು ಜಯತು ಅಂಡಜಗಮನಗೆ ಜಯತು ಜಯಗಳ
ಪಾಡುವೆನೋ ೨೧

ಜಯತು ಮತ್ಸ್ಯ ಕೂರ್ಮಗೆ ಜಯತು ವರಹ ಸಿಂಹಗೆ ಜಯತು
ಜಯತು ವಾಮನ ರಾಮರಾಮ ಕೃಷ್ಣಗೆ ಜಯಗಳ ಪಾಡುವೆನೊ ೨೨

ಜಯತು ಭಾಮ ಅರಸಗೆ ಜಯತು ಮುರಳೀಧರನಿಗೆ
ಜಯತು ಜಯತು ಬತ್ತಲೆನಿಂದಗೆ ಜಯತು ಜಯತು ಕಲ್ಕಿಗೆ ೨೩

ಕರಿಗೆ ವಲಿದ ಎನ್ನ ದೊರೆಗೆ ಗಿರಿಯ ಕೊಡೆಮಾಡಿ ನಿಂದವಗೆ
ತರುಣಿ ದ್ರೌಪದಿಗೆ ಅಕ್ಷಯನಿತ್ತಗೆ ಶರಣರ ಕಾವನಿಗೆ ೨೪

ಗಂಗೆಯ ಪೆತ್ತ ನಿನ್ನ ಚರಣಕೆ ಮಂಗಳ ಮೂರುತಿಗೆ
ಮಂಗಳ ನಿನ್ನ ಮುದ್ದು ವದನಕೆ ಮಂಗಳ ಮಂಗಳ ೨೫

ಮಂಗಳ ತಂದೆ ಪುರಂದರವಿಠಲಗೆ ಮಂಗಳ ದುರ್ಗಾದೇವಿಗೆ
ಮಂಗಳ ಗುರು ಮಧ್ವರಾಯರಿಗೆ ಮಂಗಳ ಮಂಗಳ ೨೬

ಜತೆ –
ಕಾಡಿಗೆ ಕಪ್ಪನೆಲ್ಲ ಮೋರೆಗೆ ಇಕ್ಕಿಗೊಂಡ
ಓಡುವ ಬೀದಿಲಿ ತಂದೆಪುರಂದರವಿಠಲ

೩೨

ಪಾದಸ್ತುತಿ

ಚೆನ್ನದ ತಾವರೆ ಪೋಲುವ ಪಾದಂಗಳ
ಎನ್ನಂಥವರನೆಲ್ಲ ಸಲಹುವ ಪಾದಂಗಳ
ಭಿನ್ನವಿಲ್ಲದ ಭಕುತಿ ನೀಡುವ ಪಾದಂಗಳ
ಸಣ್ಣ ಕೃಷ್ಣಯ್ಯನ ದಿವ್ಯ ಪಾದಂಗಳ ೧

ವರರೇಖೆ ಚಿರರೇಖೆ ಮೆರೆವ ಪಾದಂಗಳ
ಒರಳನೆಳೆದ ಪುಟ್ಟಬಾಲನ ಪಾದಂಗಳ
ಚರಣ ಶರಣರಿಗೆ ಅಭಯ ಪಾದಂಗಳ
ಗರುಡನು ಪೊತ್ತು ತಿರುಗುವಂಥ ಪಾದಂಗಳ ೨

ಕಡಗ ಕಾಲ್ಸರಗಳಿಂದ ಒಪ್ಪುವ ಪಾದಂಗಳ
ಕನ್ನೆಯ ಸೀರೆಯ ಕದ್ದ ಪಾದಂಗಳ
ಕೆಂದಾವರೆಯ ಧಿಕ್ಕರಿಸುವ ಪಾದಂಗಳ
ಕಾಳಿಂಗನ ಪೆಡೆಮೇಲೆ ಕುಣಿದ ಪಾದಂಗಳ ೩

ಯಮುನಾ ತೀರದಲಿ ಆಡಿದ ಪಾದಂಗಳ
ಯಶೋದೆ ತೊಡೆಯಮ್ಯಾಲೊಲಿದ ಪಾದಂಗಳ

ಅಮರಸೇವಿತ ಮುದ್ದುಬಾಲನ ಪಾದಂಗಳ
ಅಕ್ರೂರಗೊಲಿದ ಮಹಾತ್ಮನ ಪಾದಂಗಳ ೪

ಗುಡ್ಡವನೆತ್ತಿ ದಿಟ್ಟದಿ ನಿಂತ ಪಾದಂಗಳ
ಇಟ್ಟಿಗೆ ಮೇಲೆ ನಿಂತ ವಿಠ್ಠಲನ ಪಾದಂಗಳ
ಮುಷ್ಠಿಯ ಮೆಡುಹಿದ ಮಲ್ಲನ ಪಾದಂಗಳ
ಮುಚುಕುಂದನ ಗುಹೆಗಾಗಿ ಓಡಿದ ಪಾದಂಗಳ ೫

ಗೊಲ್ಲಮಕ್ಕಳ ಹೆಗಲೇರಿದ ಪಾದಂಗಳ
ಬಿಲ್ಲಹಬ್ಬಕಾಗಿ ಪೊರಟ ಪಾದಂಗಳ
ಬಲ್ಲಿದ ಕಂಸನ ಕೊಂದ ಪಾದಂಗಳ
ಬಲಭದ್ರಗತಿ ಪ್ರೀತಿಯಾದ ಪಾದಂಗಳ ೬

ವಿಚಿತ್ರ ಮಹಿಮೆ ಉಳ್ಳ ವಿಜಯನ ಪಾದಂಗಳ
ವಿಪ್ರರ ಎಂಜಲ ಬಳಿದ ಪಾದಂಗಳ
ವ್ರಜದ ಗೋಗಳನೆಲ್ಲ ಕಾದ ಪಾದಂಗಳ
ಕುಬ್ಜೆಯ ತಿದ್ದಿ ಸುಂದರಿಗೈದ ಪಾದಂಗಳ ೭

ಮಂದಭಾಗ್ಯರಿಗೆ ದೊರಕದ ಪಾದಂಗಳ
ಕಂದನಾಗಿ ಇಲ್ಲಿ ನಲಿವ ಪಾದಂಗಳ
ಚಂದಮಾಮನ ಕರೆದಾಡಿದ ಪಾದಂಗಳ
ಜಗವ ಮೋಹಿಸುವ ಶ್ರೀಹರಿಯ ಪಾದಂಗಳ ೮

ವಿದುರನ ಮನೆಪೋಗಿ ಪಾಲುಂಡ ಪಾದಂಗಳ
ಬದರಿನಿಲಯ ಮಧ್ವರಮಣನ ಪಾದಂಗಳ
ಭಾವನ ಬಂಡಿಯ ಹೊಡೆದ ಪಾದಂಗಳ
ಬಗೆಬಗೆ ಆಟವ ಆಡಿದ ಪಾದಂಗಳ ೯

ರಾಜಸೂಯವನ ನಡಿಸಿದ ಪಾದಂಗಳ
ರಥವ ಒತ್ತಿ ನರನ ಕಾದ ಪಾದಂಗಳ
ರಣರಂಗದಲಿ ನಿಂತ ಧೀರನ ಪಾದಂಗಳ
ರಂಗಕ್ಷೇತ್ರದಿ ಪವಳಿಸಿದ ಪಾದಂಗಳ ೧೦

ಮನಸಿಗೆ ದೊರಕಿ ದೊರಕದಿಪ್ಪ ಪಾದಂಗಳ
ನೆನೆಸಿದ ಮಾತ್ರದಿ ಬರುವ ಪಾದಂಗಳ
ಮನ್ನಿಸಿ ಅಘಗಳ ಕಳೆವ ಪಾದಂಗಳ
ಎನ್ನ ತಾಯ್ತಂದೆಗೆ ಒಲಿದ ಪಾದಂಗಳ ೧೧

ತಂಬಿಗೆ ನೀರನು ತಂದಿಟ್ಟ ಪಾದಂಗಳ
ನಂಬಿದವರನೆಲ್ಲ ಸಲಹುವ ಪಾದಂಗಳ
ಅಂಬುಜಾಕ್ಷನ ಅದ್ಭುತವಾದ ಪಾದಂಗಳ
ಅನೇಕ ಸ್ತ್ರೀಯರಿಗೆ ಒಲಿದ ಪಾದಂಗಳ ೧೨

ಸುರನದಿಯ ಪಡೆದ ಪಾವನವಾದ ಪಾದಂಗಳ
ಸೂರ್ಯಮಂಡಲವನ್ನ ಹೋಲುವ ಪಾದಂಗಳ
ಸಿರಿಯು ಒತ್ತುವ ನಾರಾಯಣನ ಪಾದಂಗಳ
ಪರಿಮಳಗಂಧ ಸ್ವೀಕರಿಸಿದ ಪಾದಂಗಳ ೧೩

ಭಕ್ತರ ಬೆನ್ನಟ್ಟಿ ತಿರುಗುವ ಪಾದಂಗಳ
ಭವಸಾಗರಕೆ ತಾರಕವಾದ ಪಾದಂಗಳ
ಭಕ್ತರು ವಂದಿಸಿ ಮುದ್ದಿಡುವ ಪಾದಂಗಳ
ಭೋಗಪರ್ಯಂಕದಿ ನಲಿವ ಪಾದಂಗಳ ೧೪

ಸಾಂದೀಪಿನಿ ಮನೆಗೆ ಕಟ್ಟಿಗೆ ಹೊತ್ತ ಪಾದಂಗಳ
ಸಾಧುಗಳ ಪಾಪವ ಕಳೆವ ಪಾದಂಗಳ
ತಂದೆ ತಾಯಿ ಸೆರೆಬಿಡಿಸಿದ ಪಾದಂಗಳ
ತಂದೆ ಪುರಂದರವಿಠಲನ ಪಾದಂಗಳ ೧೫

೩೩

ರಾಗ : ಜುಂಜೂಟಿ **ಆದಿತಾಳ**

ತಂದೆ ಬಾರೋ ತಾಯಿ ಬಾರೋ ಇಂದುವದನ ಬಾರೋ
ನಂದನ ಕಂದನೆ ಬಾರೋ ಆನಂದ ಬಾರೋ
ಕಂದರ್ಪಜನಕ ಬಾರೊ ಕಾಳಿಂದಿರಮಣ ಬಾರೊ
ಸುಂದರಾಂಗನೆ ಪಾರ್ಥಸೂತ ಬಾರೋ ೧

ಮಂದಹಾಸನೆ ಬಾರೊ ಮಾಧವನೆ ಬಾರೋ
ಕುಂದದ ಮಣಿಯೆ ಬಾರೊ ಕಣಿಯೆ ಬಾರೋ

ಎಂದೆಂದು ಎನ್ನೊಡನೆ ಇಪ್ಪ ಸಖನೆ ಬಾರೊ
ವಂದಿಪೆ ನಿನಗೆ ಬಾರೋ ಭವರೋಗವೈದ್ಯ ೨

ಕಂದಿಕುಂದಿ ನಾ ಬಲು ತತ್ತರಿಸುತಿರುವಾಗ
ಅಂದವೆ ನಿನಗೆ ದೊರೆಯೆ ಅಗಲಿ ಇಪ್ಪುದು
ಬಂದು ಒದಗಲಿ ಬೇಕೊ ಬಂಧನ ಬಿಡಿಸೊ ಸ್ವಾಮಿ
ತಂದೆಪುರಂದರವಿಠಲ ದೇವಕಿತನಯನೆ ೩

೩೪

ರಾಗ : ಮೋಹನ ಛಾಪುತಾಳ

ದಹದಹವೆಂದೆನ್ನ ಪಾಪದ ರಾಶಿಯ
ದಹಿಸಯ್ಯ ಕರುಣದಿ ನರಹರಿ ದೊರೆಯೆ ಪ

ಪಾಹಿ ಪಾಹಿ ಈ ಭವದಲಿ ಬೆಂದು ನಾ
ಹಾಹಾಕಾರವ ಕೊಂಡೆನೊ ನೀ ಪೊರೆಯೇನೋ ಅ.ಪ

ಕಡುವೇಗದಲಿ ಕಂಭದೊಳಗೆ ಉದ್ಭವಿಸಿದಿ
ಕಡು ಉಗ್ರರೂಪನೆ ಕರಾಳವದನನೆ
ಸಿಡಿಲಂತೆ ಗರ್ಜಿಸಿ ಪೊಡವಿ ನಡುಗುವಂತೆ
ಪಿಡಿದು ದೈತ್ಯನ ಕೊಂದ ಹೇ ಉಗ್ರನರಸಿಂಹ ೧

ಭಕ್ತಿದಾಯಕ ನೀನು ಭಕ್ತರ ಅಭಿಮಾನಿ
ಭಕ್ತ ಪ್ರಹಲ್ಲಾದನ ಭಕ್ತಿಗೆ ಮೆಚ್ಚಿ ಬಂದಿ
ವ್ಯಕ್ತನಾಗಿ ಮೆರೆದಿ ಜ್ಞಾನಿಗಳ ಹೃದಯದಿ
ಉತ್ಕೃಷ್ಟಮಹಿಮನೆ ಹೇ ಲಕ್ಷ್ಮೀನರಸಿಂಹ ೨

ಧರೆಯೊಳು ಸುಜನರ ರಕ್ಷಣೆಗಾಗಿ ನೀ
ವರಮಂದಿರವ ಬಿಟ್ಟು ಬಯಲ್ಲಿ ನಿಂತಿರುವಿ
ನೆರೆದ ಭಕ್ತರ ಕ್ಷೇಮ ವಹಿಸಿದಿ ಎನ್ನ ತಂದೆ-
ಪುರಂದರವಿಠಲ ಹೇ ಮುದ್ದು ಬಾಲಕೃಷ್ಣ ೩

೩೫

ರಾಗ : ಕಮಾಚ್ ಆದಿತಾಳ

ದೀನಶರಣ್ಯ ಪರಮ ಔದಾರ್ಯ ಪ

ಮಾನಾಪಮಾನವು ನಿನ್ನದೊ ರಂಗಯ್ಯ
ಸಾನುರಾಗದಲಿ ಸ್ತುತಿಸುವೆ ನಾನೀಗ ಅ.ಪ

ತ್ರಿಗುಣಾತೀತ ತ್ರಿಜಗದ್ಭರ್ತ
ತ್ರಿಗುಣಾತ್ಮಕರಿಗೆ ತ್ರಿವಿಧ ಫಲಪ್ರದ
ತ್ರಿಲೋಕವಂದ್ಯನೆ ಪ್ರಥಮಕಾರಣ ೧

ಶ್ರೀನಿವಾಸ ಧೇನಿಪರ ಮನ ಉಲ್ಲಾಸ
ಭಾನುಸಹಸ್ರಭಾಸ ಚಂದ್ರಕೋಟಿ ತೇಜ
ದಾನವಾಂತಕನೆ ಕಾಣೆನೋ ನಿನ್ನ ಸರಿ ೨

ಅಂದೆ ಪೇಳಿದೆ ಬರವೊಲ್ಲೆನೆಂದೆ
ಅಂಧಕಾರಣ್ಯವಾದ ಭವದೊಳು ತಿರುಗುವೆ
ನೊಂದೆನೆಯ್ಯಾ ತಂದೆ ಪುರಂದರವಿಠಲ ೩

೩೬

ರಾಗ : ಕಾಪಿ **ಅಟ್ಟತಾಳ**

ನಂದನಕಂದನ ಇಂದುವದನನ
ಎಂದು ಬಿಗಿದಪ್ಪಿ ಮುದ್ದಿಡುವೆ ನಾ ಪ

ಗುಂಗುರಕೇಶಗಳ ಶಿರದ ಮೇಲಕಟ್ಟು
ರಂಗಯ್ಯನ ಫಣೆಯಲಿ ಕಸ್ತೂರಿ ಬೊಟ್ಟು ೧

ಝುಳಿಝುಳಿರೆನ್ನುತ ಕರ್ಣಕುಂಡಲವು
ಥಳಿಥಳಿಸುವ ದಿವ್ಯ ಪಚ್ಚೆಪದಕವು ೨

ಅಜಾನುಬಾಹು ಅಜನ ಪೆತ್ತ ನಾಭಿ
ವಿಜಯಗೆ ಸಾರಥ್ಯ ಮಾಡಿದ ಕೈಯಿ ೩

ಚಿನ್ನದ ಕಾಪು ಕೈಲಿ ಒಪ್ಪುವುದು
ಸಣ್ಣರಂಗನ ಕರದಿ ಬುಗುರಿ ಇರುವುದು ೪

ಪಟ್ಟೆ ಪೀತಾಂಬರ ಅಡಿಯೆಲೆ ಪೊಳೆಯೆ
ಕಟ್ಟಿದ ತೋಳಬಂದಿ ಕೊರಳೊಳು ಸರಿಗೆ ೫

ಮುತ್ತಿನಹಾರ ಶ್ರೀತುಳಸೀಸರ
ಮತ್ತೆ ನಲಿದಾಡುವ ಅತಿವಿಚಿತ್ರ ೬

ಭಂಗಾರ ಕಾಲ್ಸರ ಅಂಗಾಲ ಬಣ್ಣ
ಮಂಗಳವಿಗ್ರಹನ ಮಣಿವ ಮುಕ್ಕಣ್ಣ ೭

ಕರುಣಾಸಾಗರನು ಏನೆಂಬೆ ನಾನು
ಅರಮನೆಯಲಿ ಆಡುವ ಸಣ್ಣ ಕೃಷ್ಣನು ೮

ಸಾರು ಅನ್ನಕ್ಕೆ ನೀಡಿದ ಕೈಯಿ
ನೀರು ಮಜ್ಜಿಗೆ ಉಂಡ ಪವಳದ ಬಾಯಿ ೯

ಮಲಗಿದ ಮಂಚದ ಮೇಲೋಡಿ ಬಂದು
ಮಲಗಿ ನಿದ್ರೆ ಗೈದಾ ಬೆರಳನು ಸವಿದು ೧೦

ಎಂದು ಇರುವವನು ನಂಬಿದರೆ ಬಿಡನು
ತಂದೆ ಪುರಂದರವಿಠಲರಾಯನು ೧೧

೩೭

ರಾಗ : ನಾದನಾಮಕ್ರಿಯೆ **ಆಟತಾಳ**

ನಳಿನನಾಭನ ನೀನು ಪಾಡೊ । ಬೇಗ
ಒಳಕಣ್ಣಿಂದ ಅವನ । ಕಂಡು ನಲಿದಾಡೊ ಪ

ಹೃದಯ ಆಕಾಶದಲ್ಲಿರುವ । ಅಲ್ಲಿ
ಪದುಮಾಕ್ಷ ಪುರುಷೋತ್ತಮನೆಂಬಾತ
ಆತನು ಬಹುರೂಪದಿಂದ । ಕಾವ
ಆಧಾರವಾಗಿದ್ದ ಸೂಕ್ಷ್ಮಪ್ರದೇಶ ೧

ಎಂಟೊಂದು ಕದಗಳ ಮುಚ್ಚೋ । ಮೇಲೆ
ತಂಟೆಯಿಲ್ಲದ ಮನವ ಅವನಲಿ ಇರಿಸೊ
ಕುಂಡಲಿ ಮಧ್ಯದಿ ನೋಡೋ । ದಿವ್ಯ
ಮಂಟಪದಲಿ ಜ್ಯೋತಿ ಥಳಥಳಿಸುವುದೊ ೨

ಥಳಥಳಿಸುವ ಬಾಲಕೃಷ್ಣ । ಅಲ್ಲಿ
ಬಲು ಕ್ರೀಡೆಗಳನೆಲ್ಲ ಮಾಡಿಸುವನಯ್ಯ
ಒಳಗೆ ಹೊರಗೆ ಪರಿಪೂರ್ಣ । ನಮ್ಮ
ಪುಲ್ಲಲೋಚನ ತಂದೆ ಪುರಂದರವಿಠಲ ೩

೩೮

ರಾಗ : ಮೋಹನ

ಆದಿತಾಳ

ನಾಥ ಎನ್ನಲಿ ಕರುಣಿಸಯ್ಯ
ತಾತಾ ನರಹರಿದೊರೆ ಪ

ಚಟ ಚಟ ಆರ್ಭಟದಿಂದ । ಹರಿ
ಕಟ ಕಟ ಪಲ್ಕಡಿದು ನಿಂದ । ಬಲು
ಗುಡು ಗುಡು ಗರ್ಜನೆಯಿಂದ । ದೇವ
ಹೊಟ್ಟೆ ಬಗೆದು ಚಿನ್ನನ ಕೊಂದ ೧

ಪುಟ್ಟ ಪ್ರಹ್ಲಾದನ ಬಡಿಯೆ । ಹರಿ
ಥಟ್ಟನೆ ಕಂಭವ ಒಡೆಯೆ । ನಿಂತು
ಕೊಟ್ಟಿದ್ದ ವರಕೆ ಸರಿಯೆ । ಬಂದು
ಸಿಟ್ಟಲಿ ಹಿರಣ್ಯಕನ ಬಗೆಯೆ ೨

ಉಕ್ಕುವ ಕೋಪವು ಜ್ವಲಿಸೆ । ಮುದ್ದು
ಚಿಕ್ಕವನ ನಿಜವೆನಿಸೆ । ಹರಿ
ರಕ್ಕಸನು ಬಲು ಬಾಧಿಸೆ । ಬೇಗ
ತ್ವಕ್ಕು ಮುರಿದು ರಕ್ತವನು ಸುರಿಸೆ ೩

ಪಂಕಜಾಕ್ಷಿ ಸಿರಿ ಬರಲು । ಪುಟ್ಟ
ಕಿಂಕರನು ಮುಂದೆ ನಿಲ್ಲಲು । ಕೋಪ
ಬಿಂಕದಿಂದಲಿ ಶಾಂತವಾಗಲು । ನರ–
ಸಿಂಗನು ಕಡುದಯ ಮಾಡಲು ೪

ಲಕುಮಿಯು ಸ್ತೋತ್ರವ ಮಾಡೆ । ಬಲು
ಭಕ್ತಪ್ರಹ್ಲಾದ ಕೊಂಡಾಡೆ । ಬೇಗ
ಅಕಳಂಕ ಕರುಣದಿ ನೋಡೆ । ದೇವ
ಬೇಕಾದ ವರಗಳ ನೀಡೆ ೫

ಜಯ ಜಯ ಭಕ್ತವತ್ಸಲ । ಕೇಳು
ಜಯ ಜಯ ಶ್ರೀ ಭೂಲೋಲ । ಏಳು
ಜಯ ಜಯ ತುಳಸಿಯ ಮಾಲ । ನಮ್ಮ
ಜಯ ತಂದೆ ಪುರಂದರವಿಠಲ ೬

ಜಯ ಜಯ ಕಲ್ಪಧ್ರುವವೊ । ಅಲ್ಲ
ಜಯ ಜಯ ಧ್ರುವದ ಫಲವೂ । ಅಲ್ಲ
ಜಯ ಜಯ ಫಲದ ರಸವೊ । ನಮ್ಮ
ಜಯ ತಂದೆ ಪುರಂದರವಿಠಲನು ಮಗುವು ೭

३೯

ನಿನ್ನ ಒಲುಮೆಗೆ ನಾ ಈಡೇನೋರಂಗ ಪ

ಸಣ್ಣವನು ನಾನಯ್ಯ ಪನ್ನಗಾಚಲವಾಸ ಅ.ಪ

ಅಜಿತನಾಮಕ ನೀನು ಅಲ್ಪಶಕ್ತನು ನಾನು
ಕುಜನದೂಷಕ ನೀನು ಅವರ ಮಿತ್ರನು ನಾನು
ವ್ರಜದ ಸ್ತ್ರೀಯರ ಮನವ ಸೂರೆಗೊಂಡ ಸ್ವಾಮಿ
ಅಜನ ಪೆತ್ತ ನಿನಗೆ ಸರಿಯಾರು ಪೇಳಯ್ಯ ೧

ಅನೇಕ ಅದ್ಭುತ ಚರಿತ್ರ ಪಿಡಿದೆ ನಾ ಹೇಸಿಗೆ ಮಾರ್ಗ
ಅನೇಕ ಭಕ್ತರ ಪೋಷಕ ನಾನವರ ದೂಷಕ
ಅನೇಕ ಬಾಹುಗಳು ಮತ್ತನೇಕ ಪಾದಗಳಯ್ಯ
ಅನೇಕ ದಿವ್ಯಾಭರಣ ವಿಶ್ವರೂಪ ನಿನಗೆ ೨

ಪರಮಪಾವನ ನೀನು ದುಷ್ಟ ತರಳನು ನಾನು
ಕರುಣಾಬ್ಧಿಯು ನೀನು ಕಠಿಣಚಿತ್ತ ನಾನು
ಶರಣೆಂಬೆ ಗಿರಿರಾಯ ನಿನ್ನ ಪೋಲುವರುಂಟೆ
ಮರಳಿ ಪುಟ್ಟದೆ ಮಾಡು ತಂದೆ ಪುರಂದರವಿಠಲ ३

೪೦

ರಾಗ : ಕೇದಾರಗೌಳ ಅಟ್ಟತಾಳ

ನಿನ್ನ ಭಾಗ್ಯವೆ ಭಾಗ್ಯ ಯಶೋದೆ ಕೇಳಮ್ಮ
ಚಿನ್ನದಂತಹ ಮಗನ ಪಡೆದಿರುವೆಯಲ್ಲೆ ಪ

ಅರಳಿದ ತಾವರೆಯೆ ಕಂಗಳು ನೋಡೆಲೆ
ಮರುಳು ಮಾಡುವುದಮ್ಮ ಕೆಂದುಟಿಗಳೆರಡು
ನೀರುಂಡ ಮೇಘವೆ ಕುಟಿಲಕುಂತಳ ಜಾಲ
ಮಾರ ನಾಚುವನಮ್ಮ ಆತನಂದವ ಕಂಡು ೧

ಹೊಟ್ಟೆ ಸೆಳೆದುಕೊಂಡು ಮನೆಯೆಲ್ಲ ಸುತ್ತುವ
ಚೆಟ್ಟಿಗೆ ಉರುಳಿಸಿ ಹಾಲ ನೆಕ್ಕುವನೆ
ಕಟ್ಟಿದ ಕರುವಿನ ಬಾಲ ಪಿಡಿವನಮ್ಮ
ದುಷ್ಟನೆ ಇವ ಬಹಳ ಉರಿವ ಕಟ್ಟಿಗೆ ಎಳೆವ ೨

ಹಸಿವೆಗೆ ಅಳುವನು ಎಂದು ತೊಡೆಯಲಿಟ್ಟು
ಬಿಸಿಹಾಲ ಕುಡಿಸಿದೆನೆ ಯಶೋದೆಯಮ್ಮ
ಶಶಿಮುಖನು ಬಾಯಲಿ ಗಳಗಳ ಮಾಡುತ
ನಸುನಗುತ ಉಗುಳಿದ ಬಾಯ ಹಾಲನೆಲ್ಲ ೩

ಅಂಬುಜನಾಭನು ಸಂಭ್ರಮದಿಂದಲಿ
ಅಂಬೆಗಾಲಿಕ್ಕುತ ನಲಿದಾಡುವ
ತಂಬಿಗೆ ಪಿಡಿದು ತಾ ಏಳುವ ಆಸೆಯಲಿ
ತಂಬಿಗೆ ಉರುಳಲು ತಾನು ಉರುಳುವನೆ ೪

ನಿನ್ನ ಮಗನ ರಹಸ್ಯ ನಿಗಮ ಬಲ್ಲದೇನಮ್ಮ
ಆನಂದ ಮುಕುಂದ ಅನಂತನಾಮ
ನಿನ್ನಲಿ ಕರುಣಿಸಿ ಮಗನಾಗಿ ಬಂದಿಹನೆ
ಪನ್ನಗಶಾಯಿ ತಂದೆ ಪುರಂದರವಿಠಲ ೫

೪೧

ರಾಗ : ಸಾವೇರಿ ಆದಿತಾಳ

ನೀಲಗಾತ್ರನೆ ನಿತ್ಯತೃಪ್ತನೆ ಪಾಲಿಸೋ ನೀ ಎನ್ನ ಪ

ಚಾರುಗಾತ್ರ ನಿನ ಚಾರುಚರಣವ
ಕೋರಿ ಬಂದೆನು ಕೇಳೋ ಕೋಮಲಾಂಗನೆ ಈಗ ಅ.ಪ

ನೀರಲಿಮುಳುಗಿ ಭಾರವ ತಾಳಿದಿ
ಕಾರುಣ್ಯಪತಿ ನೀ ಧಾರುಣೀ ಎತ್ತಿದಿ
ಘೋರ ರೂಪವ ತಾಳಿ ಗುಡಿಗುಡಿಸುತ ನಿಂತಿ
ಮೀರಿ ಬಂದು ವಟುವೇಷವನೆ ಗೊಂಡಿ
ಧೀರನೆ ನಿನ್ನಲಿ ಇದ್ದನ ಕೊಲಿಸಿದಿ
ನಾರನುಟ್ಟು ಹೇ ಕೋದಂಡರಾಮನೆ

ನಾರೇರ ಮರುಳುಮಾಡಿ ನಾರೇರ ಗೊಲಿದನೆ
ಏರಿ ಬೇಗನೆ ಕುದುರೆ ಜಗವೆಲ್ಲ ಮೆರೆದನೆ ೧

ಪಕ್ಷಿಗಮನನೆ ಅಕ್ಷಯ ಕೊಟ್ಟನೆ
ಪಕ್ಷಯಾದವನೆ ಪಕ್ಷಿಯ ಸಲಹಿದಿ
ಪಕ್ಷಿಯ ಶಿಕ್ಷಿಸಿ ಪಕ್ಷವ ಸೀಳಿದಿ
ರಕ್ಷಿಸಯ್ಯ ಎನ್ನ ಅಧೋಕ್ಷಜನೆ
ಪಕ್ಷ ಐವರ ಪಿಡಿದು ಅಕ್ಷಯ ದೈತರ
ಶಿಕ್ಷೆಮಾಡಿ ಮೆರೆದೆ ಉತ್ತಮ ರಥಿಕನೆ
ಲಕ್ಷ್ಯಮಾಡದೆ ರಥ ನೆಲಕೆ ತುಳಿದು ನಿನ್ನ
ಕುಕ್ಷಿ ಒಳಗೆ ಅಖಿಲಾಂಡವ ತೋರ್ದನೆ ೨

ಬಾಲನಾಗಿ ಕೌಸಲ್ಯೆ ಉದರದಲಿ
ಲೀಲೆಗಳಿಂದಲಿ ಹರುಷವಪಡಿಸಿದಿ
ಬಾಲನಾಗಿ ಮತ್ತು ನಂದನಮನೆಯಲಿ
ಪಾಲು ಬೆಣ್ಣೆ ನವನೀತವ ಮೆದ್ಯೊ ನೀ
ಬಾಲನಾಗಿ ಅತ್ರಿ ಸತಿಯಲಿ ಜನಿಸಿದಿ
ಬಾಲನಾಗಿ ಸತ್ಯವತಿಗೆ ನೀ ತೋರಿದಿ
ಬಾಲನಾಗಿ ತತ್ವ ತಾಯಿಗೆ ಪೇಳಿದಿ
ಬಾಳು ಬಾಳು ತಂದೆ ಪುರಂದರವಿಠಲ ೩

೪೨

ರಾಗ : ಯದುಕುಲಕಾಂಭೋದಿ **ತಾಳ : ಆದಿ**

ನೀಲಾನೀಲಾನೀಲ ಮೇಘಶ್ಯಾಮ ಓಡಿ ಬಾ ಬಾ
ನೀಲಾದೇವಿ ಅರಸ ಬಾ ಬಾ ನಿಗಮವೇದ್ಯನೆ ಬಾ ಬಾ ಪ

ದೂರ ದೂರ ದುರಿತಕೆ ದೂರ ದೂರುವೆನೊ ನಿನ್ನ
ಧೀರ ಧೀರ ಕರುಣಾಪಾರ ಸಾರಿ ಪೊರೆಯೋ ಎನ್ನ ೧

ಮುದ್ದು ಮುದ್ದು ಮುದ್ದು ಮುಖವು ಜೊಲ್ಲುಸುರಿವ ಬಾಯಿ
ಮುದ್ದುಮಾತ ಮುದ್ದು ಆಟವ ಹಿಗ್ಗುವಳಾ ತಾಯಿ ೨

ಬಾಯಿ ಬಾಯಿ ಪುಟ್ಟ ಬಾಯಿ ಮಣ್ಣನುಂಡ ಬಾಯಿ
ಬಾಯಿಲಿ ಮಣ್ಣ ಕಾಣಲಿಲ್ಲ ಜಗವ ಕಂಡಳು ತಾಯಿ ೩

ಗೆಜ್ಜೆ ಗೆಜ್ಜೆ ಪಾದಕೆ ಗೆಜ್ಜೆ ಉಡಿಗೆಜ್ಜೆ ಉಡುದಾರ
ಹೆಜ್ಜೆ ಇಕ್ಕುವ ಬೊಜ್ಜೆ ಕೃಷ್ಣಗೆ ವಜ್ರದ ಉಂಗುರ ೪

ಚಿಕ್ಕ ಚಿಕ್ಕ ಚಿಕ್ಕ ಕೂಸು ಕೃಷ್ಣನು ಚಿಕ್ಕಕೂಸು
ಚಿಕ್ಕ ಕೂಸಿಗೆ ಶಕಟನು ಸಿಕ್ಕಲು ಒದ್ದು ಕೊಂದಿತು ಕೂಸು ೫

ಕರಕಮಲವನು ಬೇಗ ಶಿರದಲಿಕ್ಕೊ ಘನ್ನ
ವರಚರಣಕೆ ಮೊರೆಯಹೊಕ್ಕೆ ಕರುಣಾವಾರುಧಿ ನಿನ್ನ ೬

ಸತ್ಯ ಸತ್ಯ ಸತ್ಯಾರಮಣ ಸತ್ಯ ಸಂಕಲ್ಪ
ಸತ್ಯ ಸಮೇತ ತೋರೋ ತಂದೆ ಪುರಂದರವಿಠಲ ೭

೪೩

ರಾಗ : ಮುಖಾರಿ ಅಟ್ಟತಾಳ

ನೋಡಿದೆ ಕೃಷ್ಣರಾಯನ ನೋಡಿದೆ ಪ

ನೋಡಿದೆನೊ ಬ್ರಹ್ಮಾದಿವಂದ್ಯನ
ನೋಡಿದೆನೊ ನಾ ತ್ರಿಜಗದೊಡೆಯನ
ನೋಡಿದೆನೊ ಕರಿರಾಜವರದನ
ನೋಡಿದೆನೊ ಮನದಣಿಯ ಅವನ ಅ.ಪ

ಅಂದು ಕಂದಗೆ ಒಲಿದ ದೇವನ ಕಂದನಾಗಿ ಮಾತ ಲಾಲಿಸಿ
ಕಂದಗೊಲಿದು ಅವನಕೊಂಡು ಕಂದನೆತ್ತಿ ಲಾಲಿಸಿದನ
ಕಂದನ ಶಿರವನು ಎರಡು ಮಾಡಿ ಕಂದಗೊಲಿದು ಕಲ್ಲನೇರಿ
ಕಂದನಾಗಿ ಗೋಪಿಮನೆಯಲಿ ಬಂದು ಮಲಗಿದ ನಂದಕೃಷ್ಣನ ೧

ಕಪ್ಪುಮೈಯನ ಅಪ್ರಮೇಯನ ವಕ್ರ ದಂತಗಳಿಂದಲೊಪ್ಪುತ
ಒಪ್ಪು ಇಲ್ಲದ ದುಷ್ಟ ಅಸುರನ ನಿಗ್ರಹಿಸಿದ ಅಮಿತ ವಿಕ್ರಮ
ಅಪಾರ ಮಹಿಮೆಯ ತೋರಿ ನರಹರಿ ಸುರರಿಗಮೃತವನಿತ್ತ ದೇವನ
ಆಪ್ತನಾದ ಪ್ರಹ್ಲಾದವರದನ ಒಪ್ಪು ಇಲ್ಲದ ಮೂರುತಿಯನ ೨

ದಂತಿಪುರ ವರದೊರೆಯು ಮಂದಬುದ್ಧಿಮಾಡಿ ಐವರ
ಮಂದಗಮನೆಯ ಪಿಡಿದು ತಂದು ಮುಂದೆ ನಿಲ್ಲಿಸಿ ಭಂಗಮಾಡಲು

ಇಂದಿರೇಶ ನೀನೆ ಗತಿಯೆಂದು ವಂದ್ಯಮಾಡಿ ಮುಗಿದು ಮೊರೆಯಿಡೆ
ಬಂದು ಬೇಗದಿ ಸಲಹಿದ ನಮ್ಮ ತಂದೆ ಪುರಂದರವಿಠಲರಾಯನ
೩

೪೪

ರಾಗ : ಸಾಕಿಮಟ್ಟು ಆದಿತಾಳ

ಪಂಡರಿನಾಥಗೆ ನಮಿಸುವ
ತೊಂಡನು ನಾನಯ್ಯ ಪ

ಬಂಡಿಹೊಡೆವ ನಮ್ಮ ರಂಗ
ಪುಂಡರೀಕಗೆ ತಾ ಒಲಿದ
ಗೊಂಡ ಇಟ್ಟಿಗೆ ಮೇಲೆ ನಿಂತ
ಪುಂಡರೀಕಾಕ್ಷನು ೧

ಎನ್ನಯ್ಯನು ಒಂದು ಪೆಟ್ಟನಿಕ್ಕೆ
ಚೆನ್ನಾಗಿ ಒಂದಕೆ ನೂರಾಗಿ
ಚಿನ್ನದ ಬಳೆಯ ಮರೆಯ ಮಾಡಿ
ಬನ್ನಪಡಿಸಿದ್ಯಾ ೨

ಅಂದು ಕುರುಬಗೆ ಒಲಿದ ದಾತಾ
ನಂದತೀರ್ಥರಂತರ್ಗತನಾದ
ತಂದೆ ಪುರಂದರವಿಠಲರಾಯ
ಬಂದೆನ್ನ ಕಾಯಬೇಕೋ ೩

೪೫

ರಾಗ : ಮಧ್ಯಮಾವತಿ ಅಟ್ಟತಾಳ

ಪಾಲಿಸಬೇಕೋ ಎನ್ನ ಪಾವನಚರಿತನೆ
ಫಾಲತಿಲಕನೆ ನಿನ್ನ ಬಣ್ಣಿಪೆನಯ್ಯ ಕ-
ಪೋಲ ಪೊಳೆವ ವದನ ಸುಗುಣಸದನ ಪ

ಬಾಲನಾಗಿ ಲೀಲೆಯಿಂದಲಿ ಜಗವ ಬಾಯಲಿ ತೋರ್ದನೆ ಭವ-
ಜಾಲದಲಿ ಬಿದ್ದೇಳವೊಲ್ಲೆನೊ ಜಾಲಮಾಡದೆ ಈಗ ಬೇಗದಿ ಅ.ಪ

ವಾರಿಜದಳನೇತ್ರ ಕಮಲಾಕಳತ್ರ
ಕ್ಷೀರಸಾಗರಮಂದಿರ ಕೈವಲ್ಯದಾಯಕ
ಶೂರನಾಮಕನ ಪೌತ್ರ ಸುಪವಿತ್ರ
ನೀರಪೊಕ್ಕು ಮೋರೆತೋರದ ಬೇರಕೆದರಿ ಮೀರಿಹರಿಯಾದಿ
ಧೀರವಾಮನ ಪರಶುರಾಮನೆ ನಾರನುಟ್ಟು ನಂದನಂದನ
ತೋರಿದಾಪರಿ ಬೆಣ್ಣೆಯ ಕದ್ದು ಮಾರ್ಜಾಲ ಮರ್ಕಟ ಪಾಲುಮಾಡಿದನೆ
ಜಾರನೆ ಕುದುರೆಯೇರ್ದನೆ ಬಲು ಸಾಧುವಂದಿತ ಬಾದರಾಯಣ
ಸೇರಿದವರ ಪೊರೆವ ಬಿರುದುಳ್ಳ ಕರುಣಾವಾರಿಧಿ ಭಕ್ತವತ್ಸಲ
ತೋರು ನಿನ್ನಯ ಚಾರು ಚರಣವಪಾರಮಹಿಮ ಪುರಾಣಪುರುಷನೆ ೧

ದಶವಿಧರೂಪ ನಿನ್ನ । ನಮಿಪೆ ಏಕಾ-
ದಶರುದ್ರನೆ ನಿನ್ನ । ಮೂರುತಿಯ ದ್ವಾ-
ದಶಾದಿತ್ಯನೆ ಎನ್ನ । ಸಲಹಯ್ಯ ಘನ್ನ
ಪಾಶಬಿಡಿಸೋ ಕಲುಷದೂರನೆ ಕಾಲು ರಹಿತನೆ ಕಾಲು ತೋರ್ದನೆ
ಕೇಶಮ್ಯೆ ಮೃಗರಾಜ ಸುಂದರ ನೃಪರ ವೈರಿ ದಶಕಂಠಘಾತಕ
ಮೊಸರು ಪಾಲು ಬೆಣ್ಣೆ ಕದ್ದು ಮೆದ್ದು ನಾಚಿಕೆ ಬಿಟ್ಟು ನಗುತ ನಿಂತನೆ
ಏಸು ಪೇಳುವೆ ದುಷ್ಟಸಂಹಾರ ಕಾಶ್ಯಪಿಯೊಳು ಮೆರೆದ ಧೀರನೆ
ಈಸಿ ನಗಧರ ಓಡಿ ಕೋಪಿಸಿ ಬೇಡಿ ತರಿದು ಅಡವಿ ಪೋದನೆ
ವಾಸುದೇವನೆ ಕೊಳಲ ಪಿಡಿದನೆ ಭಂಡನೆ ದೊಡ್ಡ ತೇಜಿಯಾರೂಢ ೨

ಬದರಿನಿಲಯಸಂಪನ್ನ । ಶ್ರೀಮಧ್ವರಮಣ
ಬುಧನ ಹೃದಯ ನಿನ್ನ । ಬೇಡಿಕೊಂಬೆ
ಒದಗಿ ಪೊರೆಯಬೇಕೆನ್ನ ಇಂದು ಮುನ್ನ
ವೇದ ತಂದ ಆದಿ ಕಚ್ಛಪ ಕೆದರಿ ಕಂಬದೊಳು ನಿಂತ ತಿರುಕ
ಭೂದಾನ ಗೈದ ದಶರಾತ್ಮಜ ಗೊಲ್ಲ ಬತ್ತಲೆ ಹಯದಿ ಮೆರೆದನೆ
ಮುದ್ದು ಮೀನನೆ ಕೂರ್ಮ ಕ್ರೋಡನೆ ನರಹರೆ ದ್ವಿಜ ಧರಣಿಪಾಲರ
ಸದೆದು ಕಟ್ಟೆಯ ಕಟ್ಟಿದ ಕೃಷ್ಣ ವ್ರತವನಳಿದ ತುರಗವಾಹನ
ಉದಧಿ ಆಡಿದ ಮುಸುಕಿಸೂಕರ ಕ್ರೂರವಂಚಕ ರಾಮ ರಾಮನೆ
ಸೂತನಾದನೆ ಬೌದ್ಧ ಕಲ್ಕಿಯೆ ತಂದೆ ಪುರಂದರವಿಠಲರಾಯನೆ ೩

೪೬

ರಾಗ : ಮಧ್ಯಮಾವತಿ **ಅಟ್ಟತಾಳ**

ಪಾಲಿಸುವುದು ಎನ್ನ । ನಿನ್ನ ಭಾರವಯ್ಯ
ಬಾಲಕನೆಲೊ ನಿನ್ನ । ಒಂದು ಅರಿಯದೆ
ಕಾಲ ಕಳೆದೆನೊ ಘನ್ನ । ಗತಿ ಏನು ಮುನ್ನ ಪ

ಕಾಲನಾಮಕ ನಿನ್ನ ಪೊಗಳದೆ
ವೇಳೆವೇಳೆಗೆ ಅಟ್ಟು ಉಂಡು
ಗೂಳಿಯಂದದಿ ತಿರುಗಿದೆನಯ್ಯ
ವ್ಯಾಳಶಯನನೆ ತಾಳಿ ರಕ್ಷಿಸೊ ಅ.ಪ

ಚೋರನಾದವನೆಲ್ಲ ವೇದಗಳ
ದೂರಮಾಡಿದ ಸೊಲ್ಲ । ಕೇಳಿ ಅವನ
ಧೀರ ಸೀಳಿದಿಯಲ್ಲ । ಭಕ್ತವತ್ಸಲ
ಸೇರಿಸುರಗಣ ದೈತ್ಯರೊಡನೆ
ಕ್ಷೀರ ಕಡೆದು ಅಮೃತಗೊಂಡು
ಸಾರಿ ಬರುತಿರೆ ಅವರು ಬಂದು
ಮೀರಿ ಅದರನು ಕಿತ್ತು ಒಯ್ಯಲು
ಚಾರು ಸುಂದರ ರೂಪಗೊಂಡು
ತೋರಿ ಸುರರಿಗೆ ಅಮೃತ ಬೀರಿ
ಕೋರೆ ಹಲ್ಲುಗಳಿಂದ ಮೇಲಕೆ
ಧಾರುಣಿಯನು ನಿಲಿಸಿದಾತನೆ
ಪೋರಗಾಗಿ ಘೋರ ರೂಪದಿ
ತೋರಿ ಹಿರಣ್ಯನ ಗೋಳು ಗೊಂಡನೆ
ಮೇರು ಶೃಂಗವ ಪೋಲುವಾತನೆ
ಮೂರು ಪಾದವ ಬೇಡಿ ನಿಂತನೆ
ತೋರ ರೂಪವಗೊಂಡು ಬಲಿಯನ
ಮಾರಜನಕನೆ ಅವನ ಸಲಹಿದಿ
ಚಾರುನಿನ್ನಯ ಪಾದಯುಗಳಕೆ
ಬಾರಿ ಬಾರಿಗೆ ನಮಿಸುವೆನಯ್ಯ ೧

ನಿನ್ನ ಪೆತ್ತವಳನ್ನ । ತಲೆಯ ಕಡಿದಿ
ನಿನ್ನ ಪೆತ್ತವರನ್ನ । ಕಡಿದವರನ
ಭಿನ್ನಮಾಡಿದ ಚಿನ್ನ । ತಾಯಿಮಾತನ್ನ
ನಿನ್ನ ಹೊರತು ಲಾಲಿಸಿದವರ
ಇನ್ನು ಕಾಣೆ ಕೌಸಲ್ಯರಾಮ
ಉನ್ನತ ಮಹಿಮನೆ ಎಷ್ಟು ವರ್ಣಿಪೆ
ಚೆನ್ನನಾಗಿ ಯಶೋದೆ ಮನೆಯಲಿ
ಚಿನ್ನವಾಗಿ ಲೀಲೆ ತೋರಿದಿ
ಎನ್ನ ಒಡೆಯ ಶ್ರೀ ಮುದ್ದು ಕೃಷ್ಣನೆ

ಪನ್ನಗವ ಮೆಟ್ಟಿ ನಾಟ್ಯವಾಡಿದ
ರನ್ನ ಮುನಿಗಣವನ್ನ ರಕ್ಷಿಸಿ
ಸನ್ನೆ ತೋರಿ ಸಣ್ಣ ಹೆಣ್ಗಳ
ಘನ್ನ ನೀನು ಭಂಗಮಾಡಿದಿ
ಬೆನ್ನ ಬಿಡದೆ ಅಧರ್ಮಗೊಂಡು
ಜನರು ಕೆಟ್ಟು ತಿರುಗುತಿರಲು
ಬಣ್ಣ ಕುದುರೆಯ ಏರಿ ಮೆರೆದು
ನಿನ್ನವರ ಸಲಹಿದಾತನೆ
ಎನ್ನ ಮನದ ಆಸೆ ಬಿಡಿಸಿ
ಮನ್ನಿಸಯ್ಯ ದೇವ ದೇವನೆ ೨

ಸಂಧಿಮಾಡುವುದೆಂದು । ನೀ ಬೋಧಿಸಲು
ಮಂದಬುದ್ಧಿಯ ದಂತಿಪುರದೊರೆ
ನಿಂದೆ ಮಾಡಿದನಂದು । ತಾ ಕೇಡತಂದು
ವಂದ್ಯಮಾಡಿ ಬೇಡಿಕೊಳ್ಳಲು
ಇಂದಿರೇಶ ನೀ ಪಾಲ ಕುಡಿದು
ನಿಂದು ವಿದುರಗೆ ಕರುಣ ಮಾಡಿ ಆ
ನಂದದಿಂದಲಿ ಮೆರೆದ ಮೂರುತಿ
ಬಂದ ದುರಿತಗಳೆಲ್ಲ ಕಳೆದು
ಎಂದು ಸಾಕುವ ಎನ್ನ ತಂದೆ
ಅಂದು ತರುಣಿಜನಿಂದ ಕುಂತಿಗೆ
ಒಂದು ವರವನು ಕೊಡಿಸಿದಾತನೆ
ಬಂಧುಗಳನಾ ನೋಡಿ ಧುರದಲಿ
ಬೆಂದು ಮನದಲಿ ನಿಂತ ನರನಿಗೆ
ಸುಂದರಾಂಗನೆ ವಿಶ್ವರೂಪವ
ಅಂದವಾಗಿ ತೋರಿದಯ್ಯ
ಇಂದು ಕಾಂತಿಗಳಿಂದ ಪೊಳೆವ
ಗೋವಿಂದ ತರಿದೆ ಭೂಮಿಭಾರವ
ತಂದೆಪುರಂದರವಿಠಲ ನಿನ್ನ
ಸಂದರ್ಶನವನು ತೋರಿ ಸಲಹಯ್ಯ ೩

೪೭ ಊಂಜಲ್

ರಾಗ : ಭೈರವಿ **ಝಂಪೆತಾಳ:**

ಪೊಂಬಣ್ಣ ಮೀನಾಗಿ ಅಂಬುಧಿಯೊಳಗಾಡಿ
ಅಂಬುಧಿಯೊಳಿಟ್ಟ ಆ ವೇದಗಳ ಎಳದಿ
ಅಂಬುಜೋದ್ಭವನ ಪಿತ ಆನಂದದಿಂದ
ಅಂಬುಧಿಯೊಳ್ ಮಲಗಿದಿಯೊ ಆಲದೆಲಯಮ್ಯಾಲೆ ೧

ಸುರರ ಪಕ್ಷವ ಪಿಡಿದು ಕ್ಷೀರವನು ಕಡದು
ಶರಧಿಯೊಳ್ಪೊಕ್ಕು ನೀ ಗಿರಿಯ ತಾಳಿದಿ
ಕರದಿ ಅಮೃತವಗೊಂಡು ನಿನ್ನವರಿಗಿತ್ತಿ
ಪರಮ ಪಾವನ ಕೂರ್ಮ ನಿನಗೆ ನಮಿಸುವೆನೊ ೨

ದಿತಿದೇವಿ ಜಾತನು ಭುವಿಯ ಕೊಂಡೊಯ್ಯೆ
ಎತ್ತಿ ಅದನ ತಂದಿ ಸೂಕರ ರೂಪ
ಮತ್ತು ಭಕುತರಿಗಾಗಿ ಅಲ್ಯಲ್ಲಿ ನಿಂತಿ
ತುತಿಸುವೆನೊ ನಾ ನಿನ್ನ ಮಂಗಳಾಕಾರ ೩

ಮನಸ್ಸು ಕಲ್ಲುಮಾಡಿ ತನಯನ ಬಡಿಸೆ
ಮನಮುಟ್ಟಿ ಆತನು ನಿನ್ನ ಕೂಗಿದನು
ಸನಕಾದಿ ಮುನಿವಂದ್ಯ ಬಂದು ಬ್ಯಾಗದಲಿ
ಮುನಿದು ದೈತ್ಯನ ಕೊಂದ್ಯೊ ಪ್ರಹ್ಲಾದವರದಾ ೪

ಪೊಡವಿಯೊಳು ಮೂರಡಿಯ ದಾನವನು ಕೊಂಡು
ಪೊಡವಿಯ ನೀನೊಂದು ಅಡಿಯಮಾಡಿದಿ
ಅಡಿಯ ಮತ್ತೊಂದೆತ್ತಿ ಅಂಬರವನಳದಿ
ತಡಿಯದಲೆ ಬಲಿಯನ ವತ್ತಿ ಇರಿಸಿದಿ ೫

ನಿಖಿಳ ಲೋಕೋದ್ಧಾರ ಭಕ್ತಜನ ಪರಿಪಾಲ
ಅಖಿಳ ವೇದಗಳಿಂದ ನುತಿಸಲು ಪಾತ್ರ
ಸಕಲರಾಯರಿಗೆ ನೀ ಗಂಟಲಗಾಣ
ಏಕಮೂರ್ತಿಯಾಗಿ ಮೆರೆದ ಭೃಗುರಾಮ ೬

ತಾಯಿ ಮಾತನು ಕೇಳಿ ಅರಣ್ಯವನಪೊಕ್ಕು
ತಾಯಿ ಸೀತೆಯ ಖಳನು ಕದ್ದು ವೈಯಲು
ವಾಯುಸುತನಿಂದಲಿ ಸುದ್ದಿಯನ ತಿಳಿದು
ಕಾಯವನ ಸೀಳಿ ನೀ ದಶಮುಖನ ಕೊಂದ್ಯೋ ೭

ನೆತ್ತಿಯೊಳು ಯಶೋದೆ ಸಂಪಿಗೆ ತೈಲ
ವತ್ತಿ ಎರದಳು ಬ್ಯಾಗ ಅಳಬ್ಯಾಡವೆಂದು
ಮುದ್ದುಕೃಷ್ಣಾ ನಿನಗೆ ಕಪ್ಪನಿಕ್ಕಿದಳು
ಎತ್ತಿ ಮುದ್ದಿಸಿ ನಿನ್ನ ತೊಟ್ಟಿಲಿಟ್ಟಳು ೮

ಬುದ್ಧನಾಗಿ ಮೆರೆದ ಪ್ರಬುದ್ಧನಿಗೆ ಜೋಜೋ
ಕುದುರೆಯನೇರಿದ ಕಲ್ಕಿಗೆ ಜೋಜೋ
ಬುಧಜನರ ಹೃದಯದಲಿ ಮಿನುಗುವಗೆ ಜೋಜೋ
ತಂದೆ ಪುರಂದವಿಠಲರಾಯಗೆ ಜೋಜೋ ೯

೪೮

ಬಾಗಿಲ ತೆಗೆಯೆ ಭಾಮಮಣಿಯೆ
ಭಾಗೀರಥಿ ಪಿತಬಂದನೆ
ಬಾಗಿಲ ತೆಗೆಯ ಬಾರದು ಕಾರಣ
ಬ್ಯಾಗನೆ ಪೇಳಯ್ಯ ಕೃಷ್ಣ
ಬಾಗಿಲ ತೆಗದರೆ ಬಗೆಯಲ್ಲ ಪೇಳುವೆ
ಬ್ಯಾಗನೆ ಬಾಗಿಲ ತೆಗೆಯೆ
ಬಾಗಿಲ ತೆಗೆದಳು ಬಾ ಎಂದು ಕರೆದಳು
ಬಾಗುತ ಎದುರಲಿ
ತಂದೆ ಪುರಂದಲವಿಠಲರಾಯನು
ಎಂದಿಲ್ಲದ ಹರುಷವಗೊಂಡನು

೪೯

ರಾಗ : ಶಂಕರಾಭರಣ

ಆಟತಾಳ

ಬಾರಯ್ಯ ರಂಗ । ಬಾರಯ್ಯ ಕೃಷ್ಣ
ಬಾರಯ್ಯ ಸ್ವಾಮಿ ಬಾರಯ್ಯ ಪ.

ನಾರಾಯಣ, ನಾರಾಯಣ, ಹರಿ,
ನಾರಾಯಣ ಹರಿ ಗೋವಿಂದ
ವಾರಣ ಭಯವ ನಿವಾರಣ ಮಾಡಿದ
ನಾರಸಿಂಹನೆ ಎನ್ನ ಹೃದಯ ಮಂದಿರಕೆ ಅ.ಪ

ಮೊದಲಿಂದ ಬರಬಾರದೆ ನಾನು ಬಂದೆ
ತುದಿಮೊದಲಿಲ್ಲದೊಂದು ಅದು ಅಪನಿಂದೆ

ಇದು ಗೆದ್ದು ಕಳೆದುಪೋಪುದು ಹೇಗೆ ಮುಂದೆ
ಪದುಮನಾಭನೆ ತಪ್ಪು ಕ್ಷಮಿಸಯ್ಯ ತಂದೆ ೧

ಹೊನ್ನು, ಹೆಣ್ಣು, ಮಣ್ಣಿನಾಸೆಯೊಳಿದ್ದು
ಪುಣ್ಯ ಪಾಪಂಗಳ ನಾನರಿತಿದ್ದು
ಅನ್ಯಾಯವಾಯಿತು ಇದಕೇನು ಮದ್ದು
ನಿನ್ನ ಧ್ಯಾನವ ಕೊಡೋ ಹೃದಯದೊಳಿದ್ದು ೨

ಇಂದೆನ್ನ ಪೂರ್ವಪಾಪಂಗಳ ಕಳೆದು
ಮುಂದೆನ್ನ ಜನ್ಮ ಸಫಲವನೆಗೈದು
ತಂದೆ ಪುರಂದರವಿಠಲ ನೀನೊಲಿದು
ಎಂದೆಂದಿಗಾನಂದ ಸುಖವನ್ನೆ ಸುರಿದು ೩

೫೦

ರಾಗ : ಸೌರಾಷ್ಟ್ರ **ಆಟತಾಳ**

ಬಾಲಕೃಷ್ಣನೆ ಬಾರೊ ಬೇಗ ಬಾರೊ ಪ

ಬಾಲಕೃಷ್ಣನೆ ಬಾರೊ ಕಾಲಗಡಗವನಿಡುವೆ
ಕೋಲು ಬುಗುರಿ ಚೆಂಡು ನಿನಗೆ ಇಟ್ಟಿರುವೆ ಅ.ಪ

ಅಣ್ಣಯ್ಯ ಬಲರಾಮ । ಬೇಡುವೆನಯ್ಯ
ಅಣ್ಣಯ್ಯ ನೀ ಬಾರೆಲೊ
ಎನ್ನ ಸಾಕುಮಾಡದೆ ಓಡಬೇಡವೋ ಈಗ
ಬಣ್ಣಿಸಿ ತೂಗುವೆ ಗಮ್ಮನೆ ಮಲಗೊ ೧

ಯೋಗಿಗಳರಸನೆ । ನಿನಗೆ ನಾ
ಜೋಗುಳ ಪಾಡುವೆನೊ
ನಾಗಭೂಷಣ ಬಂದು ಅಂಜಿಸುವ ನಿನ್ನನ್ನು
ಹೋಗೆ ಹಣಿಕ್ಹಾಕುವ ಕಣ್ಣು ಮುಚ್ಚುಕೊಳ್ಳೊ ೨

ಭಕ್ತವತ್ಸಲನೆನಲೇ । ನಿನ್ನ ನಾ
ಮಗುವೆಂದು ಕರೆಯಲೋ
ಅಗಣಿತಮಹಿಮನೆ ಜಗವ ಮೋಹಿಪ ರಂಗ
ಮಗುವಲ್ಲವೋ ತಂದೆ ಪುರಂದರವಿಠಲಯ್ಯ ೩

೫೧

ರಾಗ : ಶಂಕರಾಭರಣ **ಅಟ್ಟತಾಳ**

ಬಿಲ್ಲುಗಾರನಾದನು ರಂಗಯ್ಯ ರಂಗ ಪ
ಬಿಲ್ಲುಗಾರನಾಗಿ ಎನ್ನ ಕಾವಲಾದ
ಬಲ್ಲವರ ಭಾಗ್ಯವೊ ಎಲ್ಲವರಿತ ಸ್ವಾಮಿ ಅ.ಪ

ಸಾಟಿಯಿಲ್ಲದ ಪರಿ ತಲೆಯಲಿ ಕಟ್ಟಿಹ
ನೀಟಾಗಿ ಧರಿಸಿದ ಅಂಗಿಗಳು
ನೋಟಕೆ ಆಶ್ಚರ್ಯ ಕಾಲಲ್ಲಿ ತೊಟ್ಟಿದ್ದು
ಜಾಣುಮಾಡುತ ಎನ್ನ ಬೆನ್ನಹಿಂದೆ ನಿಂತನು ೧

ನಡುವಿಲಿ ಸುತ್ತಿಹ ಬಣ್ಣದ ಪಟ್ಟೆಯ
ಎಡದಲಿ ಪೊಳೆವುದು ಬಿಲ್ಲೆ ಒಂದು
ಒಡೆಯ ಎನ್ನಣ್ಣಯ್ಯ ಕರಗಳ ಕಟ್ಟಿಹ
ಬೆಡಗುಮಾಡುತ ಎನ್ನ ಬೆನ್ನಹಿಂದೆ ನಿಂತನು ೨

ಒಂದೊಂದು ರೂಪದಿ ಒಂದೊಂದು ಭಕುತಗೆ
ಒಂದೊಂದು ಕಾಲದಲಿ ತೋರುತಲಿ
ಕಂದ ಕೃಷ್ಣಯ್ಯ ಎನ್ನ ತಂದೆ ಪುರಂದರವಿಠಲ
ಇಂದಿಲ್ಲಿ ಬಂದನು ಬಿಲ್ಲೆಗಾರನಾಗಿ ೩

೫೨

ರಾಗ : ಸಾಕಿ **ಆದಿತಾಳ**

ಭವಸಂತಾಪವ ಯಾರು ಕಳೆವರೋ ಕೃಷ್ಣ ನಿನ್ನ ಹೊರತು ಪ

ಪಡೆದ ಹಿರಿತನಗಳನೆ ಬಿಟ್ಟು ಪೊಡವಿಯೊಳಗೆಲ್ಲಾಡುವೆನೊ
ಒಡೆಯ ಬಿಡಿಸೊ ಕರುಣದಿ ಬೇಗ ಸಂಸಾರವ ೧

ಸಾರವರಿಯೆ ನಿನ್ನಪದಸೇವೆ ವಿಚಾರ ನಿನ್ನ ಮತ್ತರಿಯೆ
ಸಾರಭೋಕ್ತಾ ಈ ಸಂಸಾರ ನಿಸ್ಸಾರವಾಗಿದೆ ೨

ಅಯ್ಯ ನಿನಗೆ ವಂದಿಪೆನೊ ನಾ ಕೈಯಪಿಡಿಯೊ ಕೃಷ್ಣಯ್ಯ
ಜಯಾ ಜಯ ನಿನ್ನದೊ ತಂದೆ ಪುರಂದರವಿಠಲಯ್ಯ ೩

೫೩
ಪದ್ಯ

ಮೀನರೂಪವಗೊಂಡು ವೇದವನ ತಂದೆಯೊ
ಆನಂದದಿಂದಲಿ ಸುರರಿಗೆಲ್ಲ
ದಾನವಾಂತಕ ನೀನು ಅಮೃತವ ಬೀರಿದೆ
ಕಾನನ ಚರಿಸಿದೆ ಶ್ರೀಮುಷ್ಣನಿಲಯ
ಧ್ಯಾನಮಾಡಲು ಘೋರ ಕಂಭದಲಿ ಬಂದೆಯೋ
ದಾನಕಾಗಿ ಕೈ ನೀಡಿದವನೆ
ಹೀನರಾಯರ ತಲೆಯ ಬಾರಿ ಬಾರಿಗೆ ತರಿದೊ
ವಾನರ ಸೈನ್ಯಗಳ ನಡಿಸಿದಾತ
ಆನಂದಸುತನಿಗಾಗಿ ಆನಂದದಿಂದಲಿ
ನೀನಾಗಿ ಮಲಗಿದೊ ಮುದ್ದು ಕೃಷ್ಣಾ
ಏನು ವರ್ಣಿಪೆ ನಿನ್ನ ಎನಿತು ದಣಿಸುವೆನೊ
ಮಾನವನು ನಾನಯ್ಯ ಸರ್ವ ಶೂನ್ಯ
ಕಾಣೆನೊ ಕಾಣೆನೊ ನಿನಗೆ ಸರಿಕಾಣೆನೊ
ಬಾಣನ ಬಾಹುಗಳ ಛೇದಿಸಿದನೆ
ಮಾನವನು ಬಿಟ್ಟಂಥ ಮಾಹಾನುಭಾವ
ದೀನರಕ್ಷಕಸ್ವಾಮಿ ಕಲ್ಕಿ ನೀನೆ
ಭಾನು ಕೋಟಿಯಂತೆ ಪೊಳೆವ ದೇವ
ನೀನೆ ಗತಿಯೆಂಬೆ ತಂದೆ ಪುರಂದರವಿಠಲ ಶ್ರೀಃ

೫೪

ರಾಗ : ಕಾನಡಾ **ಅಟ್ಟತಾಳ**

ಮುಟ್ಟಬಾರೊ ಎನ್ನನು ಹೇ ಮುದ್ದುರಂಗ ಪ

ಮುಟ್ಟಬಾರೊ ಎನ್ನ ಪುಟ್ಟ ಪಾದವನೆತ್ತಿ
ಮೆಟ್ಟಿ ಇಲ್ಲಿಗೆ ಈಗ ಮೆಲ್ಲನೆ ನಡೆದು ಬಾರೋ ಅ.ಪ

ಅಪ್ಪಚ್ಚಿ ತರುವೆನಯ್ಯ ಬೇಕಾದಷ್ಟು
ಅಪ್ಪವು ಹಾಲು ಮತ್ತು ಬೆಣ್ಣೆಯ ಕೊಡುವೆನೊ
ಚಪ್ಪಾಳೆಯಿಕ್ಕುತ ಮುಂದೆ ಮುಂದಕೆ ಬಾರೋ ೧

ಅರವಿಂದನಯನ ಆನಂದರೂಪ
ದುರುಳ ದೈತನ ಕೊಂದ ಮುಚುಕುಂದವರದನೆ
ಬಾರದೇನೋ ನಿನಗೆ ನಡೆವುದಕೆ ಈಗ ೨

ನಡೆ ನಡೆದು ನೊಂದೆನೋ ಕೇಳಯ್ಯ ಭವ
ಅಡವಿಯ ದಾಟವೊಲ್ಲೆ ಮೃಡಸಖ ಬೇಡುವೆ
ಕಡೆಗಾಣಿಸೋ ತಂದೆ ಪುರಂದರವಿಠಲಯ್ಯ ೩

೫೫

ರಾಗ : ಜುಂಜೂಟಿ **ಛಾಪುತಾಳ**

ಮುಟ್ಟಬೇಡವೊ ಎನ್ನನು ಕೃಷ್ಣಯ್ಯ ನೀ ಪ

ದುಡುಕುಮಾಡಲಿ ಬೇಡವೊ ದೂರ ನಿಲ್ಲೋ ಅ.ಪ

ದೊರೆತನದ ಬಾಳು ಮತ್ತು ಕೇಳೈ ಕೃಷ್ಣ
ಹಿರಿತನ ಪೆರ್ಮೆಯುಳ್ಳ
ದೊರೆಮಗನಾದರೇನು ಸಲ್ಲದೊ ಈ ಕಾರ್ಯ
ಸೆರಗಬಿಡೆಲೋ ರಂಗ ಚರಣಕೆ ಎರಗುವೆ ೧

ಮೊಸರುಹೆಡಿಗೆ ಶಿರದಲಿ ದೇವಕಾರ್ಯ
ಮೀಸಲು ಪಾಲ್ಬಣ್ಣೆಯೋ
ಕುಸುಮನಾಭನೆ ನಿನ್ನ ಮನೆತನಕೆ ಆಗದೊ
ವಸುಧೆಯೊಳಗೆ ನಿನ್ನ ದಂಡಿಪರಿಲ್ಲವೆ ೨

ಪೆತ್ತವರಿಲ್ಲವೇನೋ ನಿನಗೆ ಮತ್ತು
ಹಿತವ ಒರೆವರಿಲ್ಲವೆ
ಮುತ್ತಿನಗಿಡ ತೋರ್ದ ಮುದ್ದುರಂಗಯ್ಯ ಕೃಷ್ಣ
ಹೊತ್ತಾಯಿತೊ ಬಿಡು ತಂದೆ ಪುರಂದರವಿಠಲ ೩

೫೬

ರಾಗ : ಹಿಂದುಸ್ತಾನಿತೋಡಿ **ಛಾಪುತಾಳ**

ಯಾರೆನಗಾಗುವರೊ ನೀನಲ್ಲದೆ
ಯಾರಲಿ ಬೇಡುವೆನೊ ಹೇ ಗಿರಿರಾಯ ಪ

ಗುರುಕುಲವಾಸ ಕಳಿಯೆ ಹೇ ಗಿರಿರಾಯ
ಗುರುದಕ್ಷಿಣೆ ಕೊಡುವೆನೆಂದಿ
ಪುತ್ರಶೋಕದಿ ಕಂಗೆಟ್ಟು ಗುರುಪತ್ನಿಗೆ
ಪುತ್ರನ ತಂದಿತ್ತ ಸಾಹಸಿ ನೀನಲ್ಲದೆ ೧

ಮುಚ್ಚಾಗಿ ಕತ್ತಲೆಯೊಳು ಮಲಗಿದ್ದ
ಮುಚುಕಂದ ರಾಯನಿಂದ
ತುಚ್ಚ ದೈತನ ಕೊಲ್ಲಿಸಿ ಆ ರಾಯನ ಕಾದವರಾರು
ಅಚ್ಚುತ ಮುಚುಕುಂದವರದ ನೀನಲ್ಲದೆ ೨

ದ್ರೌಪದಿಯ ಸೆಳೆತಂದು ಗಿರಿರಾಯ
ಪಾಪಿಗಳ ಮಾಡಿದ್ದೆಲ್ಲ
ಆಪದ್ಬಾಂದವ ನೀನು ಅರಿತು ಮಾನವ ಕಾದಿ
ಕೃಪಾಳೊ ಕೃಪಾಳೊ ಎನ್ನಸ್ವಾಮಿ ನೀನಲ್ಲದೆ ೩

ಉತ್ತರೆ ಗರ್ಭದೊಳು ಇದ್ದ ಶಿಶು
ಹತ್ಯೆಗಾಗಿ ಅಸ್ತ್ರದಿಂ
ದೊತ್ತಲು ಚಕ್ರದಿ ವತ್ತಿ ಕಾದವರಾರು
ಭಕ್ತವತ್ಸಲ ಯನ್ನ ತಂದೆ ನೀನಲ್ಲದೆ ೪

ಮಂದಮತಿ ನಾನಯ್ಯ ಹೇ ಗಿರಿರಾಯ
ಅಂದದಿ ಪೊಗಳಲರಿಯೆ
ಕಂದನ ಮಾತಿಗೆ ತಾಯಿ ಹಿಗ್ಗುವ ಪರಿ
ತಂದೆ ಪುರಂದರವಿಠಲ ನೀ ಒಪ್ಪಿಕೋ ೫

೫೭

ರಾಗ : ಸೌರಾಷ್ಟ್ರ ಝಂಪೆತಾಳ

ಯಶೋದೆಯು ಪಡೆದ ಚಿನ್ನದ ಮರಿಯಾನೆ
ಕಂಸನೆಂಬ ಮದದಾನೆಯ ಕೊಂದ ಮದ್ದಾನೆ ೧

ಭಜಿಪ ಜನರಿಗೆಲ್ಲ ನಿಜಭಾಗ್ಯ ನೀಹೌದು
ನಿಜಪೂರ್ಣ ಸುಖ ನಿನ್ನ ಭಜಿಪ ಬಗೆ ಅರಿಯೆ ೨

ಧ್ಯಾನಮಾಡಲರಿಯೆ ಸತ್ಕರ್ಮಗಳನರಿಯೆ
ಜ್ಞಾನಮಾರ್ಗವನರಿಯೆ ಜ್ಞಾನಿಗಳರಸ ೩

ಕರುಣಾಬ್ಧಿ ನೀನೆಂದು ಮೊರೆ ಇಡುವೆ ನಾನೀಗ
ಪೊರೆವ ಭಾರವು ನಿನ್ನ ಬಿಡವಲ್ಲದಣ್ಣಾ ೪

ತಂದೆ ತಾಯಿಯು ನೀನು ಪೊಂದಿದ ಕುಲದೈವ
ಎಂದೆಂದು ಎಂದು ನಾ ತಿಳಿದೆನೊ ದೇವ ೫

ಪುಟವಿಕ್ಕಿದ ಚಿನ್ನ ಎನ್ನ ಹೃದಯ ಸಂಪುಟದಿ
ತಟಿಯಂತೆ ಪ್ರಭೆಯಿಂದ ಮಿನುಗುವ ಜ್ಯೋತಿ ೬

ನಿನ್ನ ಮಾಯವು ಕೇಳು ಎನ್ನ ಸುತ್ತಿಹದಲ್ಲ
ಯನ್ನ ಮನವು ನಿನ್ನ ಪಾದ ಸುತ್ತುವುದು ೭

ಶಾಪದಿಂದಲಿ ನಾನು ಸಂತಾಪ ಪಡುವೆನೊ
ಶಾಪಮೋಚಕನೆ ಯನ್ನ ಉದ್ಧರಿಸಬೇಕೋ ೮

ದಾಸರ ಸುರಧೇನು ಕಲ್ಪತರು ನೀ ಎನಗೆ
ಯೇಸು ಕಂತೆಯ ಕೊಟ್ಟೆ ತಂದೆ ಪುರಂದರವಿಠಲ ೯

೫೮

ರಾಗ : ಭೂರಿಕಲ್ಯಾಣಿ **ಝಾಪುತಾಳ**

ರಕ್ಷಿಸೊ ದೊರೆ ಶೇಷಾಚಲವಾಸ ಭಕ್ತರ ಪೋಷ
ಎನಗೀಯೊ ಲೇಸ ಪ

ದೇವರೊಳುತ್ತಮನ್ಯಾರೆಂದು ನೋಡಬೇಕೆಂದು ಮುನಿ ಒಬ್ಬ ಬಂದು
ದೇವ ನಿನ್ನಯ ವಕ್ಷಸ್ಥಳವೆಂದು ನೋಡದೆ ಬಂದು ನಿನ್ನ ಒದ್ದನೊ ಅಂದು
ದೇವಕೀತನಯ ಮನ್ನಿಸಿ ಅಂದು ಅವನ ಕಾಲ ಬಳಿ ಬಂದು ಒತ್ತಿದಿಯಂದು
ಗೋವಿಂದ ಸರ್ವೋತ್ತಮನೆಂದು ಕೈ ಎತ್ತಿಕೊಂಡು ಕೂಗಿದನಂದು ೧

ಹತ್ತೆರಡೆಂಟನೆ ಯುಗದಲಿ ಕಲಿ ಅದರಲಿ ವೆಂಕಟಾಚಲದಲಿ
ಹುತ್ತದಲಿ ನಿನಗೆ ಮನೆಯಲ್ಲಿ ನೀನಿರುವಲ್ಲಿ ದೇವಿ ಬಂದಳಲ್ಲಿ
ಮತ್ತು ಮುಚ್ಚಿದ ಸ್ಥಳದಲಿ ನೋಡುವಳಲ್ಲಿ ನಿನ್ನ ಕಂಡಳು ಬಿಲದಲಿ
ಇತ್ತಳು ಪೂಜೆಯ ದಿನದಲಿ ಹರುಷದಲಿ ನಿನ್ನ ಮುಚ್ಚು ಬೈಲಲಿ ೨

ವೆಂಕಟಾದ್ರಿ ಎಂಬ ಅಚಲವೊ ಅದರ ಮಹಿಮೆಯೊ ಪೇಳುವುದೆನ್ನ ತರವೆ
ಸಂಕಟವೆಲ್ಲವು ಪೋಪುದು ಮೀರಿಬಹುದು ಬಲು ಪಾವನ ಸ್ಥಳವೊ
ಶಂಕೆ ಇಲ್ಲದ ಸುರರು ಇಪ್ಪರೊ ಸೇವೆ ಮಾಳ್ಪರೋ ಜೀವ-
ಜಡವಾಗಿ ಇಹರೋ
ಪಂಕಜಸರೋವರಗಳಿಪ್ಪುದನೇಕ ತೀರ್ಥವೋ ಸ್ವರ್ಣನದಿತೀರವೋ ೩
ಸಾಟಿ ಇಲ್ಲದ ದಿವ್ಯ ಮೂರುತಿ ಹೇ ಖಗಪತಿ ಪಾರ್ಥಸಾರಥಿ
ಬೇಟೆಗಾಗಿ ನೀನು ಸಾರಿದಿ ಅವಳ ನೋಡಿದಿ ಲಾವಣ್ಯಕೆ ಸಿಲುಕಿದಿ
ನೀಟಾದ ಕೊರವಿವೇಷವ ಪೋತಿ ಕಣಿಪೇಳಿದಿ ಏನು ಮಾಯವ ಮಾಡಿದಿ
ಕೋಟಿ ಮನ್ಮಥಾಕಾರಾ ಬೈಸಿದಿಯವನ ಧಿಕ್ಕರಿಸಿದಿ ವೇದವತಿಯ
ಕೈಪಿಡಿದಿ ೪

ಶ್ರೀಕೃಷ್ಣ ಕೃಷ್ಣ ಕಮಲನಾಥ ಹೇ ಶ್ರೀನಾಥ ವಸುದೇವನ ಜಾತ
ಆಕೃತಿ ಬಹುಗೊಂಡ ಜಗನ್ನಾಥ ಸುರಮುನಿನುತ ನಮ್ಮ ಪದ್ಮಿನಿನಾಥ
ಆ ಕ್ರೋಡನು ಅಲ್ಲಿ ಸ್ಥಳವಂತ ಅವನ ಕೇಳಿದಿ ಅಂದು-
ಕೊಂಚ ಸ್ಥಳಬೇಕೆನುತ
ಆಕ್ರಮಿಸಿಕೊಂಡು ಮೆರೆವಂಥ ಅಲ್ಲಿ ಇರುವಂಥ ವೆಂಕಟಾಚಲನಾಥ
೫

ಬೇಡಿದ ವರವನು ನಿನ್ನನು ವೃದ್ಧ ವಿಪ್ರನು ಕೌಮಾರತ್ವವನು
ನೀಡಿದಿ ಅವನಿಗೆ ಅದನು ತೊಂಡಮಾನನು ನಿನ್ನ ಬೇಡಿದ್ದು ಏನು
ಬೇಟೆಗಾರ ಒಯ್ದು ವಿಪ್ರನ ಸತಿಸುತರ ನೀಡಬೇಕೆಂದನು
ಕಾಷ್ಠವಾಗಿದ್ದ ಅಸ್ಥಿ ಅದರನ ತರಿಸಿದಿ ನೀನು ನೀಡಿದಿ ಅವರನು ೬

ಹಲವು ಜನ್ಮಗಳೆತ್ತಿ ಬಳಲಿದೆ ಭವದಿ ಮುಳುಗಿದೆ ನಾ ನಿನ್ನ ನೆನೆಯದೆ
ಸುಲಭದಿ ಕಡೆಗಾಂಬ ಆ ಬಗೆ ನಾನರಿಯದೆ ಕಂಗೆಟ್ಟು ತಿರುಗಿದೆ

ಸಲಹುವ ಬಿರುದು ನಿನ್ನದಾಗ್ಯದೆ ನೀ ಮರೆಯದೆ ಕರುಣಿಸೋ ದೊರೆಯೆ
ಚೆಲುವ ನಿನ್ನ ಪಾದಯುಗಳವೆ ಎನಗೆ ಗತಿ ಅದೆ ಮತ್ತೊಂದು ನಾನರಿಯೆ
೭

ಧ್ಯಾನಮಾಡುವ ಬಗೆ ಅರಿಯನೋ ಮಂದಚಿತ್ತನೊ ನಾನೇನು ಮಾಡುವೆನು
ಜ್ಞಾನ ಪಾಲಿಪ ದಾತನು ನೀನು ಮತ್ತಲ್ಲವೇನೊ ನಾ ನಿನ್ನ ಸೇವಕನು
ಜ್ಞಾನಿಗಳು ಹುಟ್ಟು ಜ್ಞಾನಿಗಳೇನೋ ಪೇಳೆನೊ ತಡೆಮಾಳ್ಪುದೇನೊ
ನೀನೆನಗೆ ಧ್ಯಾನ ಕೊಡಬಾರದೇನೊ ಮನದಾಗದೇನೊ ನಾ-
ಬೇಡಿಕೊಂಬೆನೋ ೮

ಸಾರಿದೆ ನೀನೆ ಗತಿಯೆಂದು ಕೇಳೋ ದಯಾಸಿಂಧು ಎನಗೆ ನೀ ಇಂದು
ಕೋರಿದ ವರವ ಕೊಡುವಿ ಎಂದು ಬೇಡಿದೆ ಬಂದು ನಿನ್ನ ಚರಣ-
ಎರಡಿಂದು
ತೋರಯ್ಯ ತೋರಯ್ಯ ಎನಗಿಂದು ಕೈಮುಗಿವೆನಿಂದು ಬೇಡವೊ ಮತ್ತೊಂದು
ವಾರಿಧಿಶಯನನೆ ಮನತಂದು ಎನ್ನ ಸಾಕಿಂದು ತಂದೆಪುರಂದರವಿಠಲ
೬

೫೯

ರಾಗ : ಕಾನಡ ರೂಪತಾಳ

ರಾಮನಾಮ ಪೊಗಳೊ ಪೊಗಳೊ
ಕಾಮನಯ್ಯನ ಪೊಗಳೊ ಪೊಗಳೊ ಪ

ಗಿರಿಜೆಯರಸ ಪಠಿಸುತ್ತಿಪ್ಪ
ಪರಮಮಂಗಳ ರಾಮಮಂತ್ರ
ಕರೆದು ಎಂಜಲ ಕೊಟ್ಟವಳನು
ಸರಸದಿಂದ ಸಲಹಿದ ಶ್ರೀ ೧

ಪವನಸುತಗೆ ಒಲಿದ ನಾಮ
ಭವಾಬ್ಧಿಗೆ ಒಲಿದ ನಾಮ ತಾರಕನಾಮ
ಅಭಯ ಕೊಟ್ಟು ಕರಣದಿಂದ
ವಿಭೀಷಣನ ಪೊರೆದ ನಾಮ ೨

ರಾಮನಾಮ ಸದಾ ಧ್ಯಾನ
ನೇಮದಿಂದ ಮಾಡುವರನ
ಕಾಮಿತಾರ್ಥವಿತ್ತು ಪೊರೆವ
ತಂದೆ ಪುರಂದರವಿಠಲ ೩

೬೦

ರಾಗ : ಬಿಲಹರಿ ತಾಳ : ಜಂಪೆ

ವಿಪರೀತವಾಗ್ಯದೆ ವಿಜಯದೇವ ಪ
ಈ ಪರಿಯ ನಾಶಕೆ ಸ್ಥಳಕೊಟ್ಟವರು ಯಾರೋ ಅ.ಪ

ಮಾತ್ಸರ್ಯದಲಿ ಪುಟ್ಟಿ ಮಾತ್ಸರ್ಯದಲಿ ಬೆಳೆದು
ಮಾತ್ಸರ್ಯದಿಂದಲೆ ಹತವಾದರು

ಆಶ್ಚರ್ಯ ಆಶ್ಚರ್ಯ ಒಂದು ಮನೆ ಮಕ್ಕಳು
ಹೆಚ್ಚಾಗಿ ಪೇಳುವದಿನ್ನೇನು ಕುರುಕುಲ ಹಾಳೂ ೧

ನಾಶಕೆ ಶಕುನಿಯೊ ಶಲ್ಯ ದ್ರೋಣಾಚಾರ್ಯ
ಭಾಸ್ಕರನ ಸುತ ಕರ್ಣ ಮುದಿಭೀಷ್ಮ
ವಸುಧೆಯೊಳು ಇವರೆಲ್ಲಾ ಕಾರಣವು ಆಗುವರೆ
ಈ ಸಾವು ತಪ್ಪಿಸಲು ಯಾರಿಂದ ಸಾಧ್ಯವೊ ೨

ಮೂಲಕಾರಣ ನೀನು ಜಗವನುಂಡದೇವಾ
ಅಲ್ಲವೆಂಬ ಸೊಲ್ಲು ಸಲ್ಲದೈಯ
ಬಲ್ಲವರ ಸಾಕ್ಷಿಯು ಬಲವಾಗಿ ಇರುತಿಹದು
ಕೊಳ್ಳೇಗಾರ ತಂದೆ ಪುರಂದರವಿಠಲ ೩

೬೧

ರಾಗ : ಪುನ್ನಾಗವರಾಳಿ **ಆದಿತಾಳ**

ವೇಣುಗಾನವಿನೋದ ನಮೋ ನಮೋ
ಆಣಿಮುತ್ತು ಮರಿಯಾನೆ ನಮೋ ನಮೋ
ಕಾಣೆ ನಿನಗೆ ಎಣೆ ನಮೋ ನಮೋ
ಜಾಣ ಬಾಲಗೋಪಾಲ ನಮೋ ನಮೋ ೧

ಕೋಟಿ ಮನ್ಮಥಾಕಾರ ನಮೋ ನಮೋ
ಆಟ ಸಾಕು ಏಳು ಬಾರೋ ನಮೋ ನಮೋ
ಭೇಟಿ ಎನಗೆ ಕೊಡುವುದೆಂದೊ ನಮೋ ನಮೋ
ವಟುರೂಪ ವಾಮನ ನಮೋ ನಮೋ ೨

ಬೆಟ್ಟದೊಡೆಯ ಶ್ರೀ ದಿಟ್ಟ ನಮೋ ನಮೋ
ಬಡ್ಡಿ ಕೇಳ್ವ ತಿಮ್ಮಶೆಟ್ಟಿ ನಮೋ ನಮೋ
ಅಡ್ಡವಾದರೂ ಕೊಂಬ ನಮೋ ನಮೋ
ದೊಡ್ಡದೇವ ಬಡ್ಡಿದೇವ ನಮೋ ನಮೋ ೩

ವಾರಿಜಾಕ್ಷ ಮುರಾರಿ ನಮೋ ನಮೋ
ಹಾರಪದಕ ಅಲಂಕಾರ ನಮೋ ನಮೋ
ಮೀರಿ ಪುಟ್ಟಿದೆನ್ನ ಮಾಡೋ ನಮೋ ನಮೋ
ಮೀರಿದ ದೈತ್ಯರ ಕೊಂದೆ ನಮೋ ನಮೋ ೪

ಶುದ್ಧ ಜ್ಯೋತಿಸ್ವರೂಪ ನಮೋ ನಮೋ
ಶ್ರದ್ಧೆ ನಿನ್ನಲಿ ಎನಗೆ ಕೊಡಿಸೊ ನಮೋ ನಮೋ
ಬಿದ್ದು ಭವದಿ ಬಾಧೆಪಡುವೆ ನಮೋ ನಮೋ
ಮುದ್ದು ಮಾಡ್ಯೆ ಉದ್ಧರಿಸ್ಯೆ ನಮೋ ನಮೋ ೫

ಅಂಗನೆಯರ ಅರಸ ನಮೋ ನಮೋ
ಸುಂಕ ಕೇಳ್ವ ಎನ್ನ ದೊರೆಯೆ ನಮೋ ನಮೋ
ಶಂಕೆ ಇಲ್ಲದ ಮಹಿಮ ನಮೋ ನಮೋ
ಸಂಕಟಹರ ವೆಂಕಟೇಶ ನಮೋ ನಮೋ ೬

ಮಂದಹಾಸ ಮುಕುಂದ ನಮೋ ನಮೋ
ಬೃಂದಗೋವಗಳ ಕಾದೆ ನಮೋ ನಮೋ
ಬಂದು ಸಲಹೊ ಎನ್ನ ಸ್ವಾಮಿ ನಮೋ ನಮೋ
ತಂದೆ ಪುರಂದರವಿಠಲ ನಮೋ ನಮೋ ೭

೬೨

ರಾಗ : ಭೈರವಿ **ಆದಿತಾಳ**

ಶ್ರೀ ಮುದ್ದು ಬಾಲಕೃಷ್ಣ ಶ್ರೀ ರಾಜಗೋಪಾಲ. ಪ

ಶ್ರೀ ಮನೋನಾಯಕನ ಸೇವಕನಾಗೆಲೊ ಅ.ಪ

ಮೊಲೆಹಾಲು ಮರೆಯಲಿಲ್ಲ ಕೇವಲ ಅವ ಬಾಲ
ಛಲಮಾಡಿ ಹೊಟ್ಟೆಗೆಂಬ ಒಲ್ಲೆನೆಂದರೆ ಬಿಡನು
ಜೊಲ್ಲುಬಾಯಲಿ ಮುದ್ದು ಮಾತುಗಳಾಡಿ ಎಲ್ಲರ ಮೋಹಿಪ ೧

ವಾರಕೊಂದು ತೊಡಿಗೆ ಇಟ್ಟು ನೋಡಿ ಹಿಗ್ಗುವಳು ಯಶೋದೆ
ಮಾರನಯ್ಯಗೆ ಕಪ್ಪನಿಡುವಳು ಕಣ್ಣ ದೃಷ್ಟಿ ಕಳೆಯಲು
ವಾರಿಜಾಕ್ಷನು ನಿದ್ರೆಗೆ ಅಳುವನೆಂದು ತೂಗುವಳು ಬಣ್ಣಿಸಿ ೨

ಮನೆಬೆಣ್ಣೆ ಆಗದೇನೊ ಕದ್ದಬೆಣ್ಣೆಯೆ ರುಚಿಯೇನೋ
ಚಿಣ್ಣಿಕೋಲು ಚೆಂಡು ಬುಗರಿ ಕೈಬಿಡಬಾರದೆ
ಮನೆಗೆದ್ದು ಓಡಿಬಾರೋ ಪಾಲು ಅನ್ನವ ಉಣಿಸುವೆನೊ ೩

ಶಿಶುವಾಧ ಶೇಷತಾಯಿ ಅಶೇಷ ಭಕ್ತರಪೋಷ
ಕಂಸಾದಿ ದುಷ್ಟರ ವಧೆಗೆ ದೇವಕಿಯಲಿ ಜನಿಸಿದ

ವಸುಧೆಯ ಭಾರವ ಕಳೆಯೆ ಭಾರತವ ನಡೆಸಿದ ೪

ಹುಟ್ಟು ಸತ್ತು ಸತ್ತು ಹುಟ್ಟಿ ಪಟ್ಟೆನೋ ಬಲು ಕಷ್ಟವ
ಕಟ್ಟೆಗ್ಹಾಕಬಾರದೇನೊ ಇಷ್ಟದಾಯಕ ಗೊಲ್ಲನೆ
ಕೊಟ್ಟಕೊನೆಯಲಿ ಇಪ್ಪ ತಂದೆ ಪುರಂದರವಿಠಲ ೫

೬೩

ರಾಗ : ಶಂಕರಾಭರಣ ಛಾಪುತಾಳ

ಸಂಭ್ರಮ ಕೇಳಯ್ಯ ಈ ಸಂಭ್ರಮ
ಸಂಭ್ರಮವನು ನೀನು ಕೇಳೊ
ಗುಣಿಸಬಾರದ ಬಗೆಯಲಿಪ್ಪುದು
ಗುಣಿಸಬಾರದ ಬಗೆಯಲಿಪ್ಪುದು । ಆಹಾ ಪ

ಪರಮ ಸದ್ಗುಣಸ್ತೋಮ ನಿಜಪೂರ್ಣ ಸುಖಧಾಮ
ಪರಮೇಷ್ಠಿಸುತ ಪ್ರೇಮ ವಿಠಲ ನಿಂತಿಪ್ಪ ಈ ಅ.ಪ

ಪುಂಡರೀಕನ ಮೆಚ್ಚಿ ಬಂದಾ । ನಮ್ಮ
ತೊಂಡವತ್ಸಲ ಪಾಂಡುರಂಗ । ಬೇಗ
ಗೊಂಡ ಇಟ್ಟಿಗೆ ಮೇಲೆ ನಿಂತ । ತನ್ನ
ಭಂಟನ ನೆಂಟ ತಾನೆಂಬ । ಆಹಾ
ಅಂಡಜರಮಣ ಬ್ರಹ್ಮಾಂಡವ ಪೆತ್ತವ
ಗಂಡುಕೇಸರಿಯಾದ ಪಾಂಡವರ ಸಖನಯ್ಯಾ ೧

ಚತುರ್ಭುಜದಿಂದೊಪ್ಪುವಾತ । ಅವ
ಪಾರ್ಥನ ರಥಕ್ಕಾದ ಸೂತ । ಧೀರ
ರಥರ ಮುರಿದಂಥ ಭೂಪ । ಬಲು
ಭೂತನಾಥನಿಗೆ ತಾತ । ಆಹಾ
ಆತನೇ ಪರಬೊಮ್ಮ ಈಶ ಸರ್ವೇಶನು
ನಾಥ ಶ್ರೀನಾಥ ಜಗನ್ನಾಥನಹುದಯ್ಯ ೨

ಕೋಟಿಸೂರ್ಯಪ್ರಕಾಶ । ಅನೇಕ
ಕೋಟಿ ಜೀವರಲಿವಾಸ । ಅಲ್ಲಿ
ತಟಿಯಂತೆ ಮಿನುಗುವ ಶ್ರೀಶ । ಕಪಟ
ನಾಟಕಸೂತ್ರ ನಿರ್ದೋಷ । ಆಹಾ

ಸಾಟಿ ಇಲ್ಲದ ಮೂರ್ತಿ ಸಟೆ ಇಲ್ಲದೆ ನೆನೆವರ
ದಾಟಿಸುವನು ಕೇಳು ಭವಸಾಗರದಿಂದ ೩

ಮೆರೆವುದು ಕೌಸ್ತುಭಹಾರ । ಮೇಲೆ
ಉರುಟು ಪಚ್ಚೆಯ ಪದಕಸರ । ಅಲ್ಲಿ
ತರತರವಾದ ಶೃಂಗಾರ । ಕಂಬು
ಕೊರಳಿಗೆ ಸರಿಗೆ ಜನಿವಾರ । ಆಹಾ
ಉರದಲಿ ಶ್ರೀವತ್ಸ ತುಳಸಿ ವೈಜಯಂತಿ ಮಾಲೆ
ಶರಣರ ಸಂತೈಸುತ ಕರುಣ ನಿಂದಿಪ್ಪ ಈ ೪

ಗೋಪಿಜನರ ಮಧ್ಯೆ ನಿಂದ । ನಮ್ಮ
ಗೋಪಾಲಕೃಷ್ಣ ಮುಕುಂದ । ಭಕ್ತರ
ತಾಪ ಪರಿಹರಿಸುವೆನೆಂದ । ಸಂ
ತಾಪಗೊಳ್ಳುವ ಕರುಣದಿಂದ । ಆಹಾ
ಕೋಪಿಸಿ ಸುರಪತಿ ಕವಿದು ಭೋರ್ಗರೆಯಲು
ಆಪದ್ಬಾಂಧವ ಕೃಷ್ಣ ಗಿರಿಯ ಬೆರಳಲಿಟ್ಟು ೫

ಸುಂದರವಾಗಿಪ್ಪವದನ । ಅದು
ಅಂದಕೆ ತಕ್ಕ ಒಳ್ಳೆ ಸದನ । ನಾಚಿ
ಕಂದರ್ಪ ತಲೆತಗ್ಗುವುದನ । ಕೇಳು
ಮಂದಹಾಸದಿ ಒಪ್ಪುತಿಹನ । ಆಹಾ
ಒಂದು ಕರವನೆತ್ತಿ ಕಟಿಯ ಮೇಲಿಟ್ಟಿಹ
ಸಿಂಧುಶಯನ ಅಭಯಕರವ ತೋರುವ । ಈ ೬

ವೈಕುಂಠನಾಥ ನಮ್ಮ ರಂಗ । ಸರ್ವ
ಲೋಕದೊಡೆಯ ನರಸಿಂಗ । ಕೇಳು
ಏಕಾಂತಭಕ್ತರ ಅಂತರಂಗ । ಧೀರ
ನೇಕ ದೈತ್ಯರ ಗರ್ವಭಂಗ । ಆಹಾ
ಗೋಕುಲದಲಿ ಜನಿಸಿ ಲೀಲೆಯಿಂದೊಪ್ಪುವ
ಶ್ರೀಕರಪೂಜಿತ ದೇವವರೇಣ್ಯನು ೭

ಭಕ್ತವತ್ಸಲನೆಂಬ ಬಿರುದು । ಉಳ್ಳ
ಉತ್ಕೃಷ್ಟ ಮಹಿಮನವನಹುದು । ಶುದ್ಧ

ಸತ್ವ ಸ್ವರೂಪನ್ನ ನೆನೆದು । ನೀನು
ಮುಕ್ತಿನಿಶ್ಚಯ ಪೊಂದಬಹುದು । ಆಹಾ
ವ್ಯಕ್ತಸ್ವರೂಪನು ಅವ್ಯಕ್ತಮೂರುತಿ
ಮುಕ್ತಹಾರಪದಕ ವರ ಪೀತಾಂಬರ ಪೊತ್ತ ೮

ನೀರಲಿ ಆಡಿ ಎದ್ದಾನ । ದೇವ
ಸುರರ ದೊಡ್ಡವರ ಮಾಡಾನ । ಪೊಡವಿ
ಬೇರನೆಲ್ಲ ಸವಿದಾನ । ಕಂಬ
ಎರಡುಮಾಡಿ ಪೊರಟಾನ । ಆಹ
ಧರೆಯನಳೆದ ರಾಮ ತರುಣಿಯ ತಂದನು
ತರುಗಳ ನೆರಳಲಿ ಕರುತುರುಗಳ ಕಾದ ೯

ಪಾರಿಜಾತವನು ತಂದ । ಕೃಷ್ಣ
ನಾರಿ ಭಾಮಾಮಣಿಗೆಂದ । ಬಟ್ಟೆ
ಧರಿಸಲೊಲ್ಲೆನೆಂದು ನಿಂದ । ಕೋಟಿ
ಮಾರನ ಧಿಕ್ಕರಿಸುವ ಚಂದಾ । ಆಹಾ
ಏರಿ ಉನ್ನತವಾದ ಕುದುರೆಯ ನಡೆಸಿದ
ಬಾರಿಬಾರಿಗೆ ಸಾಧುಜನರ ಕಾವುದಕೆ ೧೦

ಕುಂಕುಮಾಂಕಿತ ಊರ್ಧ್ವಪುಂಡ್ರ । ಮೆರೆಯೆ
ಪಂಕಜನಾಭ ಶೃಂಗಾರ । ವಾದ
ಕಂಕಣ ತೋಳಬಂದಿ ಉಂಗುರ । ವಿಟ್ಟ
ವೆಂಕಟರಮಣನ ಭಕ್ತರ । ಆಹಾ
ಶಂಕರವಂದಿತ ಸುರಸೇವಿತ ಕರುಣ
ಪಂಕದೊಳಿಡುವ ಶ್ರೀತಂದೆ ಪುರಂದರವಿಠಲ ೧೧

೬೪

ರಾಗ : ಕಮಾಚ ಆದಿತಾಳ

ಸಣ್ಣವನಿವನ್ಯಾರಮ್ಮ ಪೇಳೆಲೆ ತಂಗಿ ಪ
ಕಾಣದ ಮಾಣಿಕ್ಯ ಕಂಡನೆ ನಾನಿಲ್ಲಿ ಅ.ಪ

ಒಬ್ಬರ ಸುತನಲ್ಲ ಭಕ್ತವತ್ಸಲನಕ್ಕ
ಉಬ್ಬಿ ನೆನೆವರಲಿ ಸುತ್ತಿ ನಲಿದಾಡುವ ೧

ಭವಾದಿಗಳಿಗೆ ತಾತ ಭವಕೆ ತಾರಕನೀತ
ಧವಳ ಗಂಗೆಯ ಪೆತ್ತ ಶ್ರೀವತ್ಸದಿಂದ ಒಪ್ಪುವ ೨

ಮುದ್ದು ಸುರಿವ ಬಾಲ ಸಜ್ಜನ ಪರಿಪಾಲ
ಹದ್ದುವಾಹನ ತಂದೆ ಪುರಂದರವಿಠಲ ೩

೬೫

ರಾಗ : ಆನಂದಭೈರವಿ ತಾಳ : ಚಂಪೆ

ಸತ್ಯಸಂಕಲ್ಪ ಜೋಜೋ । ಶ್ರೀಕೃಷ್ಣ
ನಿತ್ಯನಿರ್ಮಲನೆ ಜೋಜೋ
ಅತ್ಯಂತ ಕರುಣ ಜೋಜೋ । ಭಕ್ತರಿಗೆ
ಪ್ರತ್ಯಕ್ಷದೈವ ಜೋಜೋ ೧

ಹಲವು ರೂಪವನೆ ಎತ್ತಿ । ಪ್ರೀತಿಯಲಿ
ಚೆಲುವ ಭಕ್ತರನು ಕಾದಿ
ಛಲಮಾಡದೆ ತೊಟ್ಟಿಲೊಳು । ಮಲಗೈಯ
ಬಲಭದ್ರಪ್ರಿಯ ಜೋಜೋ ೨

ಗೋವರ್ಧನೆತ್ತಿದನೆ ಜೋಜೋ । ಶರಣಯ್ಯ
ಕಾವದೇವನು ನೀನೆ ಜೋಜೋ
ಗೋವಿಂದಗೋಪಾಲ ಜೋಜೋ । ಸರ್ವೇಶ
ಶರ್ವಾದಿವಂದ್ಯ ಜೋಜೋ ೩

ಹತ್ತು ಅವತಾರಗೊಂಡು । ಕಪಿಲ
ದತ್ತಾತ್ರೇಯ ಹಯಗ್ರೀವನಾದಿ
ಎತ್ತೆತ್ತು ತುಂಬಿರುವ ಮೂರ್ತಿ । ಸತ್ಕೀರ್ತಿ
ಮುತ್ತಯ್ಯ ನಿನಗೆ ಜೋಜೋ ೪

ನಿಜಪೂರ್ಣಸುಖನೆ ಜೋಜೋ । ಕೃಷ್ಣಯ್ಯ
ದ್ವಿಜವೈರಿವೈರಿ ಜೋಜೋ
ದ್ವಿಜಗಮನ ಕೃಷ್ಣ ಜೋಜೋ ।
ಸುಜನ ರಕ್ಷಕನೆ ಜೋಜೋ ೫

ಶ್ರೀರಂಗಶಾಯಿ ಜೋಜೋ । ಎನಕಂದ
ಶ್ರೀಭೂರಮಣನೆ ಜೋಜೋ
ಕ್ಷರಾಕ್ಷರಪುರುಷ ಜೋಜೋ । ವಂದಿಪೆನೊ
ಕ್ಷೀರಸಾಗರಶಯನ ಜೋಜೋ ೬

ಎನ್ನಮುದ್ದು ಮೊಗುವೆ ಜೋಜೋ । ಕೃಷ್ಣ
ನಿನ್ನಮಾಯಕೆ ಸಿಲುಕಿದೆನೊ ಜೋಜೋ
ಚಿನ್ಮಯಗಾತ್ರನೆ ಜೋಜೋ । ಶ್ರೀರಂಗ
ಮನ್ಮಥನ ಜನಕ ಜೋಜೋ ೭

ಉಡುದಾರ ಉಡಿಗೆಜ್ಜೆ ರಂಗ । ಅದರಲ್ಲಿ
ಎಡೆಎಡೆಗೆ ಮಾಗಾಯಿ ತಡೆಯು
ಕಡಗ ಉಲ್ಲು ಅಂದಿಗೆ । ಇಡುವೆನೊ
ಕಡಲಶಯನ ನಿನಗೆ ಜೋಜೋ ೮

ಕಂಕಣವು ಸರಪಳಿದೋರೆ । ಮುದ್ದಾದ
ಮುಂಗೈ ಮುರಾರಿ ಮುತ್ತು
ಶೃಂಗಾರದರಳುಂಗುರ । ಬೆರಳಿಗೆ
ರಂಗ ನಿನಗಿಡುವೆ ಜೋಜೋ ೯

ಸರಿಗೆ ಅಸಲಿಪದಕವು । ಮ್ಯಾಲೊಂದು
ತೋರಮುತ್ತಿನ ಮಾಲೆಯು
ಮೆರೆವ ಕೌಸ್ತುಭಹಾರವು । ಇಡುವೆನೋ
ಸುರವಂದ್ಯ ಮಲಗೈ ಜೋಜೋ ೧೦

ಕೋಟಿಸೂರ್ಯಪ್ರಕಾಶದಿಂದ । ಹೊಳೆವ ಲ
ಲಾಟಕೆ ಹರಳು ಬೊಟ್ಟು
ಸಾಟಿ ಇಲ್ಲದ ಮೂರುತಿ । ಇಡುವೆನೋ
ಭೇಟಿಗಾಗಿ ಬಾಡುವೆ ಜೋಜೋ ೧೧

ಮಂಡೆಯಲಿ ತಕ್ಕ ಕುಂಚಿ । ಅದಕೆ
ತಂಡ ತಂಡದಾಭರಣವು
ಪುಂಡರೀಕಾಕ್ಷ ನಿನ್ನ । ಎತ್ತಿ ನಾ
ಕಂಡು ಧಣಿವೆನೊ ರಂಗಯ್ಯ ೧೨

ಆನಂದ ಸಾಗರನೆ ಜೋಜೋ । ಎನ್ಮೊಗುವೆ
ಆನಂದಸುತನೆ ಜೋಜೋ
ಆನಂದ ಮೂರುತಿ ಜೋಜೋ । ಮಲಗೊ ನೀ
ತಂದೆ ಪುರಂದರವಿಠಲ ಜೋಜೋ ೧೩

೬೬

ರಾಗ : ಬೇಗಡೆ **ಆದಿತಾಳ**

ಹಣ್ಣುಕೊಂಡನು ಬಾಲಕೃಷ್ಣನು ಪ

ಹಣ್ಣುಬೇಕು ಎಂದು
ಸಣ್ಣ ಕೃಷ್ಣ ಬಂದು
ಕಣ್ಣನೀರ ತಂದು ಬೆಣ್ಣೆಕಳ್ಳ ನಿಂತ ಅ.ಪ

ದುಡುಕು ಮಾಡಿದ ಪಿಡಿ ನೆಲ್ಲನೆ ಕೊಂಡ
ಕಡುವೇಗದಿಂದ
ಮಡದಿ ಬಳಿಗೆ ಬಂದ
ಸಡಗರದಿಂದ ಪಿಡಿನೆಲ್ಲನೆ ಕೊಟ್ಟ ೧

ಇಟ್ಟಳೆ ಹಣ್ಣ ಕೃಷ್ಣನ ಕೈಯಲಿ
ಇಟ್ಟಳೆ ಮತ್ತೊಂದು
ಕೊಟ್ಟಳೆ ಮುತ್ತೊಂದು
ಪಟ್ಟಳೆ ಭಯ ಬಂದು ಕಂಗೆಟ್ಟಳೆ ಮನನೊಂದು ೨

ದಾತ ನೋಡಿದ ನಾರಿ ಮಣಿಯ ಮನವ
ಆತ ತೋರಿದ
ಎಂಥಾ ಮಾಯ ಮಾಡಿದ
ನಾಥ ಕೊಟ್ಟನೆಲ್ಲು ಮಣಿಗಳಾಯಿತಲ್ಲೊ ೩

ತಿರುಗಿಪೋದನು ಮುದ್ದು ಕೃಷ್ಣನು
ತಿರುಗಿ ತಿರುಗಿ ನೋಡಿ
ಮರುಳಿಗೆ ಆಳಾಗಿ
ತಿರುಗಿ ಬಂದವಳು ಹಣ್ಣು ಕೂಗಿದಳು ೪

ನಿನ್ನ ಹೊರತು ಅನ್ಯರನು ಕಾಣೆ
ಸಣ್ಣ ಕೃಷ್ಣ ಬಂದು
ಎನ್ನ ಸಲಹೊ ಇಂದೆ
ಘನ್ನ ಮಹಿಮ ತಂದೆ ಪುರಂದರವಿಠಲ ೫

೬೭

ರಾಗ : ಶಂಕರಾಭರಣ ಅಟ್ಟತಾಳ

ಹರಿಯೇ ಪರದೈವ ಪ

ಹರ ವಿರಿಂಚಾದಿಗಳು ಅವನ ಸೇವಕರಯ್ಯ ಅ.ಪ

ಒಬ್ಬನು ನಮ್ಮ ಹರಿ ಒಬ್ಬೊಬ್ಬರಲಿರುವ
ಒಬ್ಬರ ವಶವಲ್ಲ ಸರ್ವ ಸ್ವತಂತ್ರ
ಒಬ್ಬರ ನುಡಿಗಳಿಗೆ ಉಬ್ಬಿ ನಲಿದಾಡುವ
ಒಬ್ಬರಿಗೆ ಬಲು ದೂರನಾಗುವನೊ ೧

ಒಬ್ಬರ ಬೇಡಿಸುವ ಒಬ್ಬರಿಂದ ಕೊಡಿಸುವ
ಒಬ್ಬೊಬ್ಬರಿಗೆ ಅನ್ನ ಉಣಿಸುವನೋ
ಒಬ್ಬರ ಸೇವೆಗೆ ಒಲಿದು ನಿಲ್ಲುವನಯ್ಯ
ಒಬ್ಬರ ಹಿಂದೆಹಿಂದೆ ತಿರುಗುವನಯ್ಯ ೨

ಒಬ್ಬನೇ ಮಲಗಿರುವ ಆಲದ ಎಲೆಮೇಲೆ
ಒಬ್ಬೊಬ್ಬರನ್ನು ತನ್ನ ಉದರದಲಿಟ್ಟು
ಒಬ್ಬನೇ ನಿಲ್ಲುವ ಶಾಶ್ವತ ಮೂರುತಿ
ಒಬ್ಬನೇ ಪರದೈವ ತಂದೆ ಪುರಂದರವಿಠಲ ೩

೬೮

ರಾಗ : ನಾದ ನಾಮಕ್ರಿಯ ರೂಪತಾಳ

ಹುಚ್ಚು ಹಿಡಿದಿತೆ ನಿನಗೆ ಪ

ಅಚ್ಚುತ ನಿನ್ನ ಎಚ್ಚರಿಸುವೆ ಅ.ಪ

ಹುಚ್ಚು ಬಂದರೆ ನೀರಲಿ ಬೀಳುವಿ
ಕಲ್ಲುಗುಂಡು ಹೊರವಿಯಲ್ಲೊ
ಕಚ್ಚಿ ಕಚ್ಚಿ ಗೆಡ್ಡೆ ತಿಂಬ
ಹುಚ್ಚು ಹಿಡಿಯೆ ಹೆಚ್ಚು ಕೋಪ ೧

ಭಿಕ್ಷಕೆಹೋಗುವ ಹುಚ್ಚ ನೀನು
ಶಿಕ್ಷಿಸಿ ರಾಯರ ಬಡಿದಿಯಲ್ಲೊ
ಭಕ್ಷಿಸಿ ಯಂಜಲ ಬಹಳ ನೀನು
ರಕ್ಷಕನಾದಿ ಗೋವುಗಳಿಗೆ ೨

ಬತ್ತಲೆಯಾಗುವ ಹುಚ್ಚು ಉಂಟೆ
ಧನ್ವಂತ್ರಿ ಬರುವ ವೈದ್ಯನಾಗಿ
ಮದ್ದು ಕುಡಿದಾಮ್ಯಾಲೆ ಕುದುರಿ
ಹತ್ತು ತಂದೆ ಪುರಂದರವಿಠಲ ೩

೬೯

ರಾಗ : ಆನಂದ ಭೈರವಿ **ಛಾಪುತಾಳ**

ಹೊಯ್ಯೋ ಹೊಯ್ಯೋ ಹೊಯ್ಯೋ ಡಂಗುರವ
ಅಯ್ಯ ಕೃಷ್ಣಯ್ಯನು ಪರನೆಂದು ಪ
ಭಯವ ಬಿಡಿಸಿ ಸುರರ ಕಾದವನಾರಯ್ಯ
ಜಯನಾಮಕತಂದೆ ಪುರಂದರವಿಠಲನಲ್ಲದೆ ಅ.ಪ

ಹರಿಗೆ ಹಾಸಿಗೆ ಆಗಬೇಕು ಎಂದೆನುತಲಿ
ಹರನು ಏಸು ಕಾಲ ತಪಗೆಯ್ದೆ
ಸಿರಿಮೊದಲಾದವರು ನುತಿಸುವ ಆ ವಸ್ತು
ಪರವಸ್ತು ಎನ ತಂದೆ ಪುರಂದರವಿಠಲ ೧

ತಾಮಸ ಪುರಾಣ ತಾಮಸ ಜೀವರಿಗೆ
ನೇಮಿಸಿ ಇಹನು ಕೃಷ್ಣಯ್ಯ
ಕ್ಷೇಮ ಬಯಸಲು ನೀನೊದರಯ್ಯ ಪರನೆಂದು
ಕಾಮಿತಾರ್ಥವನೀವ ತಂದೆ ಪುರಂದರವಿಠಲನು ೨

ಎಷ್ಟು ಅರಸಲು ಸಮರು ಆತಗೆ ಇಲ್ಲವೋ
ಅಷ್ಟು ಕರುಣಿಯ ಕಾಣೆನು
ಇಷ್ಟರ ಮನೆಯಲಿ ಕುಣಿಕುಣಿದಾಡುವ
ಅಷ್ಟಲಕ್ಷ್ಮಿಯರೊಡನೆ ತಂದೆ ಪುರಂದರವಿಠಲ ೩

೭೦
ಮಹಾಲಕ್ಷ್ಮಿ

ರಾಗ : ಶಂಕರಾಭರಣ ಅಟತಾಳ

ಪಾಲಿಸೆ ಎನ್ನನು ಲಕುಮಿ ಅವ್ವ ಪ
ಪಾಲಿಸೆ ಎನ್ನನು ಲಾಲಿಸಿ ಅನುದಿನ
ಮೇಲೆ ಕರುಣವಿತ್ತು ಕ್ಲೇಶವ ಬಿಡಿಸಮ್ಮ ಅ.ಪ

ವರವೈಕುಂಠವ ಬಿಟ್ಟ ಅವ್ವ ನೀ
ಧರೆಗೆ ನೀ ಬಂದಿಯಮ್ಮ
ನೆರೆದ ಭಕ್ತರಿಗಾಗಿ ಕೊಲ್ಲಾಪುರದಿ ನಿಂತಿ
ವರಗಳ ಬೀರುತಲೊಪ್ಪದಿ ಅಮ್ಮಯ್ಯ ೧

ನೆಲೆಯಾಗಿ ವಾಸವಮ್ಮ ಕೇಳಮ್ಮ
ಜಲಜನಾಭನ ಹೃದಯಮಂದಿರದಿ
ನೆಲೆಯಾಗಿ ನಿಂತುನಿನ್ನೊಡೆಯ ಎನ್ನ ಹೃದಯದಲಿ
ನೆಲೆಯಾಗಿ ನಲಿವಂತೆ ಮಾಡಲು ಬೇಕೆ ತಾಯಿ ೨

ಭಕ್ತರ ನಿಧಿಯೇ ನೀ ಚಂಚಲಾಕ್ಷಿ
ಶಕ್ತಿವಂತಳು ನೀನಮ್ಮ
ಮುಕ್ತಿದಾಯಕ ತಂದೆ ಪುರಂದರವಿಠಲನ್ನ
ಭಕ್ತಿಯಿಂದ ಭಜಿಪ ಮುದ್ದು ರಮಾದೇವಿ ೩

೭೧

ರಾಗ : ಯದುಕುಲ ಕಾಂಭೋದಿ ಅಟ್ಟತಾಳ

ಸಮೀರಾದಿಗಳು ವಂದಿಪ ಚರಣಾಬ್ಜಭೃಂಗಳೆ
ಪ್ರೇಮದಿ ಕರೆವನೆ ಕರುಣೆಯಿಂದಲಿ ಈಗ ಪ

ತಾಮಸಮಾಡದೆ ಬಾರೆನ್ನ ಮನಮಂದಿರಕೆ
ಕಮಲವಾಸಿನಿ ತಾಯೆ ಕಾಮಿತದಾಯಕಿ ಅ.ಪ

ಕ್ಷೀರವಾರಿಧಿಕನ್ಯೆ ಕ್ಷೀರಾಬ್ಧಿಮಂದಿರೆ
ಕ್ಷೀರಸಾಗರದೊಡೆಯ ನಿನ್ನ ಪತಿಯು

ಸೇರಿಸೆನ್ನ ಭಕ್ತರ ವೃಂದದಿ
ಮೀರಿದ ಕರುಣವೆ ಭರಣವೆ ಬಾರಮ್ಮ ೧

ದಿಗಂಬರನ ಪಡೆದನ ಪಡೆದವನ ಸೆರೆಯಲಿ
ತಗಲಿ ಹೃದಯದಲಿ ಅಖಂಡ ಸಂಭ್ರಮ ಕಂಡು
ನಿಗಮವೇದ್ಯಳೆ ನೀ ಆನಂದಾಬ್ಧಿಯೊಳಿರೆ
ಕೂಗುವ ಮೊರೆ ಕೇಳು ಅಕ್ಷರನಾಮಕಳೆ ೨

ಮಣಿಮಯಾ ಭರಣಗಳ ಧರಿಸಿದ ಮಣಿಯೆ ದಿವ್ಯ
ಕಣಿಯೆ ನವಮಣಿಯೆ ಮುದ್ದು ಕನಕದ ಲತೆಯೆ
ಮನದ ವಿಷಾದವನು ಕ್ಷಣದಿ ಅಗಲಿಸುವಂಥ
ಮನಮೋಹನ ತಂದೆ ಪುರಂದರವಿಠಲ ರಾಣಿ ೩

೭೨
ವಾಯುದೇವರು

ಅಂಜನದೇವಿಗೆ ಸುತನಾಗಿ ಜನಿಸಿದ
ಹನುಮ ನಿನಗೆ ನಮೋ ನಮೋ ಪ

ಕಂಜಾಕ್ಷಿ ಸೀತೆಗೆ ಉಂಗುರವಿತ್ತ ನಿನ್ನ
ಚರಣಕಮಲಕೆ ನಮೋ ನಮೋ ಅ.ಪ

ದುರುಳ ಅಕ್ಷನ ಕೊರಳನು ಕೊಯ್ದು ಧುರಧೀರ ನಮೋ ನಮೋ
ಭರದಿ ಲಂಕಾಪುರವನು ಅನಲಗೆ ಆಹುತಿ ಇತ್ತನೆ ನಮೋ ನಮೋ
೧

ನಂದನ ಕಂದನ ಸುಂದರವದನನ ನೆಂಟಾ ನಿನಗೆ ನಮೋ ನಮೋ
ಅಂದು ಸತಿಗೆ ಸೌಗಂಧಿಕ ತಂದಿತ್ತ ಕುಂತಿಯ ಕುಮಾರ ನಮೋ ನಮೋ
೨

ಯತಿಯಾಗಿ ಶ್ರೀಪತಿ ಪ್ರೀತಿಯ ಪಡೆದ ಮಧ್ವರಾಯ ನಿನಗೆ ನಮೋ ನಮೋ
ಗತಿ ತೋರುವ ತಂದೆ ಪುರಂದವಿಠಲನ ದಾಸಾಗ್ರಣಿಯೆ ನಮೋ ನಮೋ
೩

೭೩

ರಾಗ : ಬಿಲಹರಿ ಆಟತಾಳ

ಏಕೆ ಉಣವೊಲ್ಲಿ ಅಪ್ಪ ಶ್ರೀ ಹನುಮಂತ ಪ

ಏಕೆ ಉಣವೊಲ್ಲಿಯೋ ತಾಯಿ ಕಳುಹಿಕೊಟ್ಟ
ಬೇಕೆಂದು ನಿನಗೆ ನಾ ತಂದ ಶಾಲ್ಯಾನ್ನವ ಅ.ಪ

ತಪ್ಪು ಮಾಡಿದೆನೆನೋ ತಾಳಬಾರದೆ ನೀನು
ಅಪ್ಪನು ಊರಿಗೆ ಹೋಗುವಾಗ
ತಪ್ಪದೆ ನಿನಗೆ ಅನ್ನವ ಉಣಿಸೆಂದ
ಅಪ್ಪಣೆ ಎನ್ನ ಶಿರದಿ ಇರುವದು ಕಾಣಯ್ಯ ೧

ದಯಮಾಡೊ ದಯಮಾಡೊ ಬಾಯ ತೆರೆಯೊ ನೀನು
ತಾಯಿ ಕಳುಹಿಕೊಟ್ಟ ಪಾಯಸ ಉಣಿಸುವೆ
ಕಾಯಿ ಸೂಪಕವೊ ಬೇಕಾದ ತುಪ್ಪವೊ
ಪ್ರಿಯದಿ ಉಣಿಸುವೆ ತಂದ ಪದಾರ್ಥವ ೨

ತಂದೆ ಉಣಿಸಲು ನೀನು ಉಣುವುದು ಏನಯ್ಯ
ನಾನು ಉಣಿಸಲು ನೀನು ವಲ್ಲೆಯೇನೊ
ಸಂದೇಹ ಬ್ಯಾಡವೊ ಪ್ರಾಣವು ನಿಲ್ಲದು
ಮುಂದೆ ಕಿತ್ಹಾಕುವೆ ಎನ್ನ ನಾಲಿಗೆಯ ೩

ಪ್ರಾಣವು ದೊಡ್ಡದಲ್ಲ ತಂದೆ ಮಾತೆ ದೊಡ್ಡದು
ಕಾಣೆನೀ ಬಾಯತೆರೆವ ಬಗೆಯ ಕಾಣೆ
ಏನು ಪೇಳಲಿ ನಾನು ಪ್ರಾಣವು ನಿಲ್ಲದು
ಪ್ರಾಣೇಶ ನೀ ದೂರು ಒಪ್ಪಿಕೊಳ್ಳಬೇಕೊ ೪

ಕಂಡನು ಮನದೃಢವ ಕಲ್ಲಹನುಮರಾಯ
ಉಂಡನು ಬಾಯ್ತೆರೆದು ತೇಗಿ ನಿಂತ
ತೊಂಡವತ್ಸಲ ತಂದೆ ಪುರಂದವಿಠಲದ್ದಾಸ
ತೊಂಡನು ಯೆನ್ನ ಆಳುಮಾಡಿಕೊಂಡ ೫

೭೪

ರಾಗ : ನಾಟಕುರಂಜಿ **ತಾಳ : ಆದಿತಾಳ**

ಪವನರಾಯನೆ ನಿನ್ನ ಸ್ಮರಣೆಮಾತ್ರದಿ ಸರ್ವ
ಭವಭಯವು ತ್ಯಜಿಸಲ್ಪಡುವದಯ್ಯ ಪ

ಜೀವರೊಳು ಉತ್ತಮನೆ ಪಂಚಪ್ರಾಣನೆ ಘನ್ನ
ದೇವ ನೀನಲ್ಲದೆ ಕಾವರ ಕಾಣೆನೊ ಅ.ಪ

ಅನಿಲನಾಮಕ ನಿನ್ನ ಅನುಕಾಲ ನೆನೆವಂತೆ
ಅನಲಪ್ರಿಯನೆ ನೀ ಮನ್ನಿಸಯ್ಯ
ಜನನಾದಿಗಳ ಬಿಡಿಸಿ ಶ್ರೀವನಮಾಲಿಯ ತೋರೊ
ದಿನವ ನಡಿಸುವ ನಮ್ಮ ಭಾರತಿರಮಣನೆ ೧

ಪ್ರತಿ ಜೀವರಲಿರುವ ವೈಶ್ವಾನರ ಪರಮಾತ್ಮ
ಯುಕ್ತನಾಗಿಪ್ಪನು ನಿನ್ನ ಎರಡು ರೂಪದಿಂದ
ಚತುರ್ವಿಧ ಅನ್ನವು ನಿಮ್ಮಿಂದ ಪಚನವಯ್ಯ
ಉದ್ಧರಿಸುವ ದೇವ ಬಿದ್ದೆ ನಿನ್ನ ಅಡಿಗಳಿಗೆ ೨

ಪಂಚಭೇದವು ಮೇಲೆ ತಾರತಮ್ಯದ ಪ್ರ-
ಪಂಚದಲರುಹಿದ ಗುರುರಾಯ
ಕೊಂಚವು ಎಣಿಸಬೇಡ ಅನ್ಯನಲ್ಲವೋ ನಾನು
ಪಂಚಬಾಣನಯ್ಯ ತಂದೆ ಪುರಂಧವಿಠಲನ ದಾಸ ೩

೭೫

ರಾಗ : ನವರೋಜ **ಆದಿತಾಳ**

ಭಾರತಿಪತಿಯೆ ನೀನು ಮೂರನೆ ಬಾರಿಯಲಿ
ಧಾರುಣಿಯಲಿ ಬಂದ್ಯೊ ಮುರಾರಿಯ ಸೇವೆಗೆ ಪ

ಚಾರು ನಿನ್ನಯ ಪಾದ ಸೇರಿದೆ ಗತಿಯೆಂದು
ಸಾರಿ ಪೊರೆವುದೆನ್ನ ಭಾರವು ನಿನ್ನದೊ ಅ.ಪ

ವಾಸುದೇವನ ಆಜ್ಞೆ ತಾಳಿ ಈ ವಸುಧೆಯೊಳು
ವಾಸಮಾಡಲಿ ಬಂದ್ಯೊ ಮಧ್ಯಗೇಹನ ಮನೆಯಲಿ

ವಾಸುದೇವನೆಂಬ ನಾಮದಿ ಪ್ರಖ್ಯಾತ
ಏಸು ಲೀಲೆಗಳಿಂದ ಒಪ್ಪೊತಲಿರುತಿದ್ದಿ
ವಾಸುದೇವನ ಪೂಜೆಗಾಗಿ ಮಂಡೆಯ ನೀನು
ಲೇಸಾಗಿ ಬೋಳಿಸಿಕೊಂಡ ಬಾಲನೆ
ವಾಸುದೇವನ ಮಂಕುಮಾಡಿದ ಅಮಿತಬುದ್ಧಿ
ವಾಸವವಂದಿತ ವ್ಯಾಸರ ಶಿಷ್ಯನೆ ೧

ಗೋಪಿಚಂದನದಲಿ ಗೋಪಾಲ ಮೂರುತಿಯು
ಗೋಪಿಯ ತೊಟ್ಟಿಲಂತೆ ಮಲಗಿರ್ದ ಓಡದಲಿ
ಗೋಪಿಸುತನ ದಾಸ ನೀ ಕರೆಯಲು ಆ ಓಡ
ಪಾಪಮೋಚಕ ಉದಧಿದಡವ ಸೇರಿತು ಅದು
ಗೋಪಿಚಂದನ ಗಡ್ಡೆಯನು ವಹಿಸಿಕೊಂಡು
ಗೋಪಿಗಳರಸನೆ ಪೊಗಳುತ ಸಾರಲು
ಗೋಪಿಚಂದನ ಗಡ್ಡೆ ಬಿದ್ದ ಎಡೆಯಲಿ
ಸ್ಥಾಪಿಸಿದಿ ಆತನ ನಲಿಯುತ ನೀನಿಂತು ೨

ಬಂಟರಿಗೆ ಬಂಟನೆನಿಪ ಶ್ರೀಮುದ್ದುಕೃಷ್ಣನಿಗೆ
ಬಂಟನಾಗಿ ಬಾಳಿದಿ ಆನಂದ ತೀರ್ಥರಾಯ
ಬಂಟರಾಗಿ ಮಾಡಿದಿ ನೀ ಎಂಟುಮಠದ ಯತಿಗಳ
ಗೆಂಟು ಕಳಿಸಿ ಬರುವುದಕೆ ನಾಲ್ಕು ಮಠದ ಯತಿಗಳು
ಎಂಟೊಂದು ಮೇಲ್ಮೂರು ಊರ್ಧ್ವಪುಂಡ್ರಗಳ ಧರಿಸಿ
ಎಂಟೆರಡು ಮತ್ತೈದು ಮತವನೆ ಕಿತ್ತೈದಿ
ಎಂಟುಮೂರು ತತ್ತ್ವಗಳಿಗಭಿಮಾನಿ ದೇವನೆ
ಎಂಟುನಾಲ್ಕು ಲಕ್ಷಣಗಳ ಕೂಡಿದ ಶುಭಗಾತ್ರ ೩

ಸುತ್ತಿ ಸುತ್ತಿ ಬೋಧಿಸಿದಿ ಶುದ್ಧ ದ್ವೈತವನೆ ನೀನು
ಸುತ್ತಿಕೊಂಡವು ನಿನ್ನನು ಕೀರ್ತಿ ಪ್ರತಾಪಗಳು
ಸುತ್ತಿಕೊಂಡರು ನಿನ್ನ ಚರಣವ ಎಣಿಕೆ ಬಾರದ ಭಟರು
ಸುತ್ತಿ ಓಡಿದರು ದೈತ್ಯರು ನಿನ್ನ ಭೀತಿಯೊಳಗೆ
ಸುತ್ತುತಲಿರುತಿಪ್ಪ ಅಂಡ ಪಿಂಡಗಳಲಿ
ಸುತ್ತಿ ಸುತ್ತಿ ಬರುವಿಯೋ ಹರಿಯ ಚರಣಗಳ
ಸುತ್ತಿ ಸುತ್ತಿ ಬಾರದಂತೆ ಮಾಡಿ ಸಲಹೋ ಎನ್ನ
ಸುತ್ತಿ ಸುತ್ತಿ ಬಾಗುವೆನೊ ಮತ್ತು ನಿನಗೆ ಮಧ್ವರಾಯ ೪

ಪೊಂದಿಸಿದೆ ಮೂವತ್ತೇಳು ಮೂಲಗ್ರಂಥಗಳನ್ನೆಲ್ಲ
ಪೊಂದಿ ಮೂರು ರೂಪಗಳನು ಏಕ ಕಾಲದಿ ನೀನು
ಪೊಂದಿ ರಾಮಕೃಷ್ಣ ವ್ಯಾಸರ ಅಂದದಿಂದ ಪೂಜೆಗೆಯ್ಯೆ
ಪೊಂದಿದವ ಕಣ್‌ಗೊಂಡ ಕಂಡು ಬೆರಗಾದನಯ್ಯ
ಪೊಂದಿದವರಿಗೆಲ್ಲ ಸುರತರುವಾಗಿರ್ಪೆ
ಪೊಂದಿದೆ ಕಾಮಧೇನು ಚಿಂತಾಮಣಿಯು ನೀನೆ
ಪೊಂದಿದೆ ನಿನ್ನ ಚರಣ ಉಭಯಗಳನು ನಾನು
ಅಂದವಾಗಿ ಸಲಹಯ್ಯ ತಂದೆ ಪುರಂದರವಿಠಲದಾಸ ೫

೭೬

ರಾಗ : ಸೌರಾಷ್ಟ್ರ **ಅಟ್ಟತಾಳ**

ಮಧ್ವರಾಯ ನಿನ್ನ ಚರಣಕೆ ವಂದಿಪೆ । ಮಧ್ವರಾಯ
ಸತ್ತ್ವಗುಣಗಳಿತ್ತು ಎನ್ನ ಉದ್ಧರಿಸಯ್ಯ । ಮಧ್ವರಾಯ ಪ
ಬಾಲಸಂನ್ಯಾಸಿಯ ರೂಪವ ಧರಿಸಿದ್ಯೋ । ಮಧ್ವರಾಯ
ಬಾಲಗೋಪಾಲನ ದಾಸನು ನೀನಹುದೊ । ಮಧ್ವರಾಯ ೧

ಜೀವದೇವನು ಒಂದೆಂಬ ವಾದಿಗಳ । ಮಧ್ವರಾಯ
ದೇವಕಿತನಯನ ದಯದಿಂದ ಗೆಲಿದೆಯೋ । ಮಧ್ವರಾಯ ೨

ವಾಸುದೇವನೆ ಪರಬೊಮ್ಮನೆಂದಿನಿಸಿದ್ಯೋ । ಮಧ್ವರಾಯ
ವಾಸವಾಗಿರುತಿಪ್ಪೆ ದಾಸರ ಹೃದಯದಿ ॥ ಮಧ್ವರಾಯ ೩

ಹರಿಯಸೇವೆಗಾಗಿ ಮೂರು ಬಾರಿಗೆ ಬಂದ್ಯೋ । ಮಧ್ವರಾಯ
ಪರಮ ಗುರು ನೀನು ಹೌದಯ್ಯ ಹೌದಯ್ಯ । ಮಧ್ವರಾಯ ೪

ಕುರುಕುಲ ಸಾಮ್ರಾಜ್ಯವೆಲ್ಲವ ಅಳಿದ್ಯೋ । ಮಧ್ವರಾಯ
ಅರಿತು ನಿನ್ನವರಿಗಿತ್ತು ಮೆರೆದಿಯೋ । ಮಧ್ವರಾಯ ೫

ಎನ್ನ ಜನುಮನ ಪಾವನ ಮಾಡಯ್ಯ । ಮಧ್ವರಾಯ
ನಿನ್ನ ಚರಣವ ಹೊಂದಿದೆ ಹೊಂದಿದೆ । ಮಧ್ವರಾಯ ೬

ಧರೆಯೊಳಗೆ ಬಂಧುಗಳು ನಿನ್ನಹೊರತೆನಗಿಲ್ಲ । ಮಧ್ವರಾಯ
ಧರಣಿಪಾಲಕನೆ ಎನ್ನ ಪಾಲಿಸಬೇಕೋ ॥ ಮಧ್ವರಾಯ ೭

ವೇದವ್ಯಾಸರಲಿ ಶಿಷ್ಯನಾಗಿ ನೀನಿಂತೆಯೋ । ಮಧ್ವರಾಯ
ಮೋದದಿಂದಲಿ ಗ್ರಂಥರತ್ನಗಳ ಪಡೆದಿಯೋ ॥ ಮಧ್ವರಾಯ ೮

ನಂಬಿದವರನ್ನೆಲ್ಲ ಬಿಡವಲ್ಲೆಯೊ ಬಿಡವಲ್ಲೆಯೊ । ಮಧ್ವರಾಯ
ಅಂಬುಜಾಕ್ಷ ತಂದೆ ಪುರಂದರವಿಠಲನದಾಸ । ಮಧ್ವರಾಯ ೯

೭೭
ಭಾರತೀದೇವಿ

ರಾಗ : ಶಂಕರಾಭರಣ ಅಟ್ಟತಾಳ

ಭಕ್ತಿ ಭಿಕ್ಷವ ನೀಡಮ್ಮ ಭಾರತೀ ದೇವಿ ಪ
ಭಕ್ತಿ ಭಿಕ್ಷವನಿತ್ತು ನಿನ್ನಪತಿಯಂತರ್ಗತನ ತೋರೆ
ರಕ್ತಿಯಿಂದಲಿ ಅವನ ಭಜಿಸುವಂತೆ ಮಾಡೆ ಅ.ಪ

ಕಾಳವೇಣಿಯೆ ಎನ್ನ ಜನನಿಯೆ ಎನ್ನ ಹೃದಯ
ಆಲಯದಲಿ ಅವನ ಕಂಡು ನಲಿಯುತಲಿ
ಲಾಲಿಸಿ ಅನುದಿನ ಮೈಮರೆತು ಕುಣಿಯಬೇಕೆ
ಮೇಲೆ ಅವನ ಕರುಣ ಎನ್ನಲಿ ಇರಬೇಕೆ ೧

ನೋಡುವುದನವರತ ಕೊಂಡಾಡುವುದನವರತ
ಪಾಡುವುದನವರತ ಅವನ ಓಲಗವ
ಮೃಡವಂದ್ಯಳೆ ಎನಗೆ ಕರುಣಿಸಬೇಕಮ್ಮ
ಮಾಡದೆ ತವಕ ನೀ ಬೇಡಿಕೊಂಬನೆ ತಾಯಿ ೨

ಅನಿಲನ ನಾಯಕಿಯೆ ಕಾಳಿ ದ್ರೌಪದಿ ಶೀಲೆ
ಕುರುಕುಲದಡವಿಗೆ ದಾವನಾಮಕನ ಪ್ರಿಯಳೆ
ಘನತೆಯು ನಿನ್ನದು ಸನ್ಮತಿ ಇತ್ತು ಎನ್ನ ತಂದೆ-
ಪುರಂದರವಿಠಲನ ದೃಢದಿ ಪೂಜಿಪಳೆ ೩

೭೮
ಸರಸ್ವತಿ

ರಾಗ : ಶಂಕರಾಭರಣ ಅಟ್ಟತಾಳ

ಪಾಲಿಸೆ ಸರಸ್ವತಿ ಅವ್ವ ನೀ ಪ
ಲಾಲಿಸಿ ಎನ್ನನು ಕಾಪಾಡಬೇಕಮ್ಮ ಅ.ಪ

ವಾಣಿ ಬ್ರಹ್ಮನರಾಣಿ ವಾಗಭಿಮಾನಿ
ಕಾಣೆನೆ ನಿನಗೆಣೆ ಅಮ್ಮಯ್ಯ ಕೇಳೆ
ವೇಣುಗೋಪಾಲನ ಪಾಡಲಿ ಬೇಕಮ್ಮ
ಜಾಣೆ ಎನ್ನ ನಾಲಿಗೆ ಕೊನೆಯಲಿ ನಿಲ್ಲಮ್ಮ ೧

ಬೇಡಿದ ವರಗಳ ನೀಡಬೇಕಮ್ಮ
ನೋಡದೆನ್ನವಗುಣ ಲಾಲಿಸಮ್ಮ
ಮೂಡಲಗಿರಿವಾಸ ವೆಂಕಟ ದೊರೆಯನು
ಪಾಡುವಂತೆ ಮಾಡಿ ಕಾಪಾಡಬೇಕಮ್ಮ ೨

ಎಂದು ಗತಿ ನೀನೆ ಬೇಡುವೆನೆ ನಿನ್ನ
ಕಂದನು ನಾನಮ್ಮ ಲಾಲಿಸಮ್ಮ
ತಂದೆ ಪುರಂದರವಿಠಲರಾಯನ
ಪೊಂದಿದ ನಾ ಪಾಡುವಂತೆ ಮಾಡಲು ಬೇಕಮ್ಮ ೩

೭೯
ರುದ್ರದೇವರು

ರಾಗ : ಕಾಂಬೋಧಿ **ಜಂಪೆತಾಳ**

ಮುಪ್ಪುರವನುರಿಗೊಂಡ ಚಂಡ ಪ್ರಚಂಡ ಪ

ಕಪ್ಪುವರ್ಣನ ಎನೆಗೆ ನೀ ತೋರಿಸಯ್ಯ ಅ.ಪ

ಕರದೊಳಗೆ ಕಪ್ಪರ ಶೂಲ ಜಪಮಣಿಯು
ಕೊರಳೊಳಗೆ ಉರಗ ರುಂಡದ ಮಾಲೆಯು
ಶಿರದೊಳಗೆ ಜಟೆಯಲಿ ಸುರಗಂಗೆ ಚಂದ್ರನ
ಧರಿಸಿಪ್ಪ ಸೊಬಗೆಲ್ಲ ನಿನಗೊಪ್ಪಿತೇನಯ್ಯ ೧

ಗಜಚರ್ಮ ವಿಭೂತಿ ಧರಿಸಿದ್ದ ಎನ್ನಯ್ಯ
ರಜತಗಿರಿವಾಸ ಪಾರ್ವತಿಗೀಶ
ಭುಜಗಶಯನನ ಪ್ರಿಯ ಮೂಜಗದೊಳೆಲ್ಲ
ನಿಜವಾಗಿ ಪೇಳುವೆ ನಾ ನಿನಗೆ ಈಡಿಲ್ಲ ೨

ನಂದಿವಾಹನವೇರಿ ಜಗವೆಲ್ಲ ಚರಿಸುವ
ನಿಂದು ಭಕುತರಿಗೊಲಿವ ಮಂದಹಾಸ

ತಂದೆ ಪುರಂದರವಿಠಲರಾಯನ ದಿವ್ಯ ಚರಣ–
ದ್ವಂದ್ವವನು ತೋರಿ ನೀ ಸಲಹೊ ಮುಕ್ಕಣ್ಣ ೩

೮೦
ಪಾರ್ವತಿ

ರಾಗ : ಮೋಹನ **ಅಟ್ಟತಾಳ**

ಬಾರಮ್ಮ ಪಾರ್ವತಿ ನಮ್ಮ ಮನೆಗೆ ಈಗ
ಬಾರಿ ಬಾರಿಗೆ ಎರಗುವೆ ಪ

ಬಾರಮ್ಮ ಇಲ್ಲಿಗೆ ತವರುಮನೆಯಂತೆ
ಕೋರಿದ ವರವ ನೀಡೆ ನೀ ನಲಿದಾಡೆ ಅ.ಪ

ಪರಿಮಳ ಗಂಧ ಕುಸುಮಗಳಿಂದರ್ಚಿಪೆ
ಪರಮದಯಾಕರಿ ನೀ ಬಾರೆ
ವರಗಣಪನ ಜನನಿ ಚೆನ್ನಾದ ಮನವಿತ್ತು
ಹರಿಕೆ ನೀಡಬೇಕಮ್ಮ ಎನ್ನಮ್ಮ ೧

ಶಂಕರನರ್ಧಾಂಗಿ ಪಂಕಜಮುಖಿ ನಿನ್ನ
ರಂಗನ ನಿರ್ಮಾಲ್ಯದಿಂದ ಪೂಜಿಪೆನೆ
ತಿಂಗಳು ಒಂದು ನೀ ಪತಿಸಹ ಇರಬೇಕು
ಅಂಗನೆ ವರಗೌರಿ ಪಾರ್ವತಿದೇವಿ ೨

ಬಡವರೊಡೆಯಳೆ ನೀ ನಂದಿವಾಹನವೇರಿ
ತಡಮಾಡದೆ ಬಾರೆ ಮುಡಿಹೂವ ನೀಡೆ
ಮೃಡಸಖ ತಂದೆ ಪುರಂದರವಿಠಲನ
ಅಡಿಯ ಸೇವೆಯ ನೀಡೆ ನೀ ದಯಮಾಡೆ ೩

ಗುರುಸ್ತುತಿ
೮೧

ರಾಗ : ಆನಂದಭೈರವಿ **ಅಟ್ಟತಾಳ**

ಟೀಕಾರಾಯರ ಸ್ಮರಣೆಮಾತ್ರದಿಂದೆ ಹೋಗೋದ
ನೇಕ ದುರಿತಕೂಟವು ಪ

ಲೋಕ ಮೋಹಿಸುತ್ತಿಪ್ಪ ಹೊನ್ನು ಹೆಣ್ಣುಗಳ
ನೂಕಿ ಬಿಸಾಟಂಥ ಧೀರ ಯತೀಂದ್ರನು ಅ.ಪ

ಪುರಂದರ ತಾ ಬಂದಾ ಬಂದು ಈ ಧರೆಯಲಿ
ಭರದಿ ಸುಜನರಿಗಾಗಿ
ಪರಮಗುರು ಮಧ್ವರಾಯರ ಗ್ರಂಥಗಳಿಗೆ
ವರ ಟೀಕಾ ರಚಿಸಿದ ಸುಗುಣ ಸದ್ಗುರುವರ ೧

ಅಕ್ಷೋಭ್ಯತೀರ್ಥರ ಕರಪುತ್ರನಾದನು
ಅಕ್ಷಯವಾದ ದುರ್ಮತಗಳನ
ಲಕ್ಷವಿಲ್ಲದೆ ಧ್ವಂಸಮಾಡಿ ದ್ವೈತವನ್ನ
ರಕ್ಷಿಸಿ ಮೆರೆದಂಥ ಜಯರಾಯ ಜಯಪ್ರದ ೨

ಹಲವು ಜನ್ಮಗಳಲಿ ಗಳಿಸಿದ ಪುಣ್ಯದ
ಫಲವಾಗಿ ದೊರಕುವುದು ದ್ವಾದಶನಾಮವು
ಸಲಹಯ್ಯ ಕರುಣಿಸಿ ಮಲಖೇಡಿಯವಾಸ
ಒಲಿದು ತಂದೆ ಪುರಂದರವಿಠಲನ ದಾಸ ೩

೮೨

ರಾಗ : ಬೇಹಾಗ್ **ಆದಿತಾಳ**

ಕಾಣೆನೋ ನಿನ್ನ ಸರಿ ಗುರುವೆ ಪ

ಕಾಣೆನೊ ನಿನ್ನ ಸರಿ ದೀನರಕ್ಷಕ ಎನ್ನ
ಮಾನದಿ ಸಲಹಯ್ಯ ಜ್ಞಾನಿಗಳ ತಿಲಕನೆ ಅ.ಪ

ದಕ್ಷಿಣ ಪಿನಾಕಿನಿ ತೀರದೊಳೊಪ್ಪುವಿ
ಕುಕ್ಷಿ ಒಳಗೆ ಇದ್ದು ರಕ್ಷಿಸೋ ಎನ್ನನು ೧

ಹೀನಮಾನವನು ನಾನು ಬೇಡುವೆ ನಿನ್ನನು
ಜ್ಞಾನ ಭಕುತಿ ವೈರಾಗ್ಯವ ಕರುಣಿಸೋ ೨

ಕರವ ನೀಡುತ ಬರುವ ದಾಸರಿಗೆ ವರವೀವ
ಕರಕಳಿಸಿಗೊಂಡ ಎನ್ನನಾಥ ರಘೋತ್ತಮ ೩

ಭಕ್ತರ ವೃಂದಕೆ ಆಶ್ರಯವಾಗಿರ್ಪ
ಶಕ್ತಿವಂತ ಮಹಾ ಪಾವನಚರಿತನೆ ೪

ತಂದೆ ಪುರಂದರವಿಠಲನ ದಾಸ
ಬಂದೆನ್ನ ಅಘಗಳ ಕಳೆದು ಪೊರೆಯೊ ದಾತಾ ೫

೮೩

ರಾಗ : ಶಂಕರಾಭರಣ **ಛಾಪುತಾಳ**

ಗುರುವೆ ರಘೋತ್ತಮ ಗುರುವೆ ಪ

ಗುರುವೆ ರಘೋತ್ತಮ ನಮಿಪೆ । ನಿನ್ನ
ಚಾರು ಚರಣಕಮಲಕೆ । ಧೀರ
ಕರುಣವಾರಿಧಿ ಎಂತೆಂಬೆ । ಮತ್ತು
ಸುರತರು ಎಂದರೆ ಹೆಚ್ಚೆ । ಆಹಾ
ಹರಿಪರವೆಂದರೆ ಎಚ್ಚರಗೊಂಡ ಶ್ರೀ ಅ.ಪ

ಸಂಸಾರ ಕಡುಯಾತ್ರೆಯಲಿ । ಒಮ್ಮೆ
ಆಸೆ ಪುಟ್ಟಿತು ಮನದಲ್ಲಿ । ದರ್ಶನ
ರಸಪಾನ ಮಾಡುವದರಲ್ಲಿ । ಕೇಳು
ದಾಸ ನಾ ಬಂದೆ ನಿನ್ನಲ್ಲಿ । ಆಹಾ
ಬೇಸಿಗೆ ಸಸಿಗಳಿಗೆ ವರ್ಷಪ್ರದವಾದಂತೆ
ತೋಷದಿ ನೀ ತೋರಿ ಅಂತರಂಗವ ಪೇಳ್ದ ೧

ರಾಮನಾಮ ಜಲದಿ ಸ್ನಾನ । ಘನ್ನ
ರಾಮನಾಮ ರಸಪಾನ । ಅವನ
ಹೇಮಚರಿತ್ರೆಯ ಶ್ರವಣ । ಪರಶು–
ರಾಮನ ಗೆಲಿದನ ಧ್ಯಾನ । ಆಹಾ
ರಾಮನ ಸದ್ಗುಣಧಾಮನ ಈ ಪರಿ
ಪ್ರೇಮದಿ ಭಜಿಸಿದ ಯತಿಯೆ ತಪೋನಿಧಿಯೆ ೨

ಬಂದು ಬಡವರಿಗೆಲ್ಲ । ಅವರ
ಪೊಂದಿದ ಯೋಗ್ಯತೆಯನೆಲ್ಲ । ಅರಿತು
ಅಂದದಿ ವರ ಕೊಡುವಿಯೆಲ್ಲ । ಕೊಂಚ
ಸಂದೇಹವೆಂಬುದು ಇಲ್ಲ । ಆಹ
ಕುಂದದ ದಕ್ಷಿಣ ಪಿನಾಕಿನಿ ತೀರವಾಸ
ತಂದೆ ಪುರಂದರವಿಠಲನ ದಾಸ ೩

೮೪

ರಾಗ : ಕಾಂಬೋಧಿ ಝಂಪೆತಾಳ

ಏನ ಬೇಡಲಿ ನಿನ್ನ ಬಳಿಗೆ ಬಂದು
ಮಾನದಿಂ ಸಲಹಯ್ಯ ಗುರುರಾಘವೇಂದ್ರ ಪ

ಮನ ಹೊಲೆಗೆಳಿಸಿತು ಮನವು ಮೈಲಿಗೆಯಾಯ್ತು
ನೆನೆಯಬಾರದದು ಎಲ್ಲ ಬಯಸುವುದು ಕೇಳೋ
ಅನುಭವಿಸಲಾರೆನೋ ಅದರ ಕಾಟಗಳನ್ನು
ಎನ್ನ ಉಬ್ಬಸವನ್ನು ಯಾರಲ್ಲಿ ಪೇಳುವೆನೊ ೧

ಮನವೆಂಬ ಹೊಲೆಬಟ್ಟೆ ನೀರಲಿ ನೆನೆಯದು
ಉರಿವ ಬೆಂಕಿಯಲಿ ಉರಿಯಲೊಲ್ಲದು
ಪರಿಪರಿ ಬಗೆಯಲಿ ಕರುಣಿಸುವುದು ಎನ್ನನು
ಪರಮಪುರುಷ ನಿನ್ನ ಮೊರೆಹೊಕ್ಕೆ ನಾನೀಗ ೨

ಒಂದು ಕ್ಷಣವಾದರು ಹರಿಯ ನೆನೆವೆನೆನಲು
ಒಂದಲ್ಲ ಎರಡಲ್ಲ ಹಲವು ತಾಪತ್ರಯವು
ತಂದೆ ಪುರಂದರವಿಠ್ಠಲಗತಿ ಪ್ರೀತಿವಂತನೆ
ಒಂದುಪಾಯವಾದರೂ ಪೇಳಬಾರದೆ ಎನಗೆ ೩

೮೫

ರಾಗ : ಸುವೇರಿ ಆದಿತಾಳ

ಗುರುರಾಘವೇಂದ್ರ ನಿನಗೆ ಧರಣಿಮಂಡಲದೊಳಗೆ
ಸರಿಗಾಣೆ ಸರಿಗಾಣೆನೊ ಪ

ಕರೆಯಲು ಒಮ್ಮೆ ನೀ ತಡಮಾಡದೆ ಬಂದಿ
ಕರುಣದಿ ನಿನ್ನ ದಿವ್ಯಮೂರುತಿ ತೋರಿದಿ ಅ.ಪ

ತುಂಗವಾದ ತುಂಗಾತೀರದಿ ಶೋಭಿಪ
ಮಂಗಳಪ್ರದನೆ ಮಂಗಳಾಕಾರ
ರಂಗನಪ್ರಿಯನೆ ಅಂತರಂಗದಿ ಬಂದು ನೀ
ಗಂಗೆಯ ಕೊಡಲು ಆಗ ನೀ ಒಪ್ಪಿದಿ

ಹಿಂಗದೆ ಎನ್ನೊಡೆಯ ತಡೆಮಾಡದೆ ನೀ
ಸಂಗಡವಿದ್ದು ಹರಿಶೇಷವ ಭುಂಜಿಸಿ
ಸಂಕಟಪಡುವಂಥ ಕಂದಗೆ ಸೂಚಿಸಿ
ಕಂಗೆಡದಂತೆ ಮಾಡಿ ಗಂಗೆಗೆ ಪೋದೆಯೊ ೧

ಎನ್ನಲಿ ಕರುಣಿಸಿ ನಿನ್ನ ಧ್ಯಾನವ ಎನಗೆ ಕೊಡಿಸಿ
ಎನ್ನನು ಪಾವನ್ನಮಾಡಿ ನಾ ಧನ್ಯನಾಗುವಂತೆ ಮಾಡಿ
ಘನ್ನ ಶ್ರೀ ಸುಧೀಂದ್ರ ಕರವರಪುತ್ರನೆ
ಮನ್ನಿಸಿ ಪೊರೆದೆಯೋ ಭಕ್ತಪ್ರಹ್ಲಾದನೆ
ಎನ್ನಪರಾಧವ ನೋಡದೆ ಲಾಲಿಸಿ
ಎನ್ನನು ಕರುಣಕಟಾಕ್ಷದಿ ವೀಕ್ಷಿಸಿ
ಇನ್ನಿರು ಎನ್ನಂತರಂಗದಿ ಎಂದೆಂದು
ನಿನ್ಹೊರತನ್ಯರ ಪೊರೆವರ ನಾ ಕಾಣೆ ೨

ಧರೆಯೊಳು ಮೆರೆಯುವ ಸುಜನರಕ್ಷಕ ನೀನು
ತರತರ ವರಗಳ ಕರೆದು ಕೊಡುವೆಯೊ
ಶರಣರ ಪೊರೆವಂಥ ಕರುಣಾಸಾಗರ ನೀನು
ಶರಣೆಂಬೆ ನಿನಗಯ್ಯ ನಿನ್ನ ಪಾದಯುಗಳಕಯ್ಯ
ಎರಡೊಂದು ಗುಣದಲಿ ರಜತಮಬಿಟ್ಟನೆ
ಎರಡೆರಡೈದು ಭಕುತಿಲಿ ನಿರತನೆ
ಮರುತನ ಮತದೊಳು ನಿರುತದಿ ಶೋಭಿಪ
ದೊರೆ ತಂದೆ ಪುರಂದರವಿಠ್ಠಲನ ದೂತನೆ ೩

೮೬

ರಾಗ : ಯದುಕುಲ ಕಾಂಬೋದಿ **ಆಟತಾಳ**

ಗುರುವೆ ಸಲಹೊ ಎನ್ನ – ಶ್ರೀ ರಾಘವೇಂದ್ರ ಪ

ಗುರುವೆ ಸಲಹೊ ಎನ್ನ – ಸುಲಲಿತ ಮಹಿಮನೆ
ಚರಣದಲಿ ಬಿದ್ದೆರಗುವೆನಯ್ಯಾ
ಕರೆಧು ಮಮತೆಯ ಮಾಡಿ ಪೊರೆಯೋ ಅ.ಪ

ಊರು ಊರಿಗೆ ತಿರುಗಿ ಬೇಸರಗೊಂಡೆ
ಧೀರಾ ನಾ ಸ್ಥಿರವಾಗಿ ಇರುವ ಅನುಕೂಲ ಕಾಣೆ

ಸೇರಿದೆನೊ ನಿನ್ನ ಬೇಡುವೆ ಮುದದಿ
ದೂರಮಾಡದೆ ಘನ್ನ ಚಿರಕಾಲನೊಂದೆ
ಮಾರಮಣನ ದಿವ್ಯಪಾದಕಮಲವ ತೋರಿ ವಿ
ಚಾರದಲ್ಲಿರಿಸೊ ಅವನ ಮರೆಯನೋ ನಿನ್ನಾ
ಪಾರವಾದ ಸಂಸಾರಭಾರವ ಪರಿಹರಿಸೊ
ಸುಪ್ರಸನ್ನವದನದಿ ಧಾರುಣಿಯೊಳು ನಿನ್ನ ಜೋಡಿಗಾಣೆನೊ
ಚಾರು ತುಂಗಾತೀರವಾಸಾ ೧

ಒಡವರೊಡೆಯ ನಮ್ಮ ಕೃಷ್ಣರಾಯನದಾಸ
ಕಡುದಯಾಕರ ನಿನ್ನ ಅಡಿಗಳಿಗೊಂದಿಪೆ
ದೃಢಭಕುತಿಯ ಬಯಸುವೆ ಇದೊಂದು ವರವ ಬೇಗ
ನೋಡಿ ಪ್ರೇಮದಿ ನಡೆಸುವ ಭಾರ ನಿನ್ನದೊ ಈಗ
ಬಿಡಬಲ್ಲದೊ ಯತಿವರ ನಿನ್ನವನಲ್ಲವೆ
ಕಡಿಯೊ ಎನ್ನಯ ಪಾಶವ ತರಿದು ದುರಾಸೆಯ
ಮಡದಿ ಮಕ್ಕಳ ಪಡೆದ ಭಾಗ್ಯವ
ಒಡಹುಟ್ಟಿದವರ ಮೇಲೆ ನೆಂಟರಿಂದಲಿ ದುಃಖ
ಪಟ್ಟೆನಲ್ಲದೆ ಸುಖಿಸಲಿಲ್ಲವೊ ಬಟ್ಟಬಯಲೊಳು ಸೇರಿಸೆನ್ನನು ೨

ನಾ ಮಾಡಿದಪರಾಧ ಕ್ಷಣಕೆ ಸಾಸಿರವಯ್ಯ
ನೀ ಮಾಡಿದುಪಕಾರ ಎಣೆಗಾಣೆನೊ
ನಾಮ ವೈಕುಂಠಪತಿಯ ಸ್ಮರಣೆಯಿತ್ತು ನಾ
ಕ್ಷೇಮ ಪೊಂದುವ ದಾರಿಯ ಕರುಣಿಸಿ ತೋರಿ ಪರಂ
ಧಾಮ ರುಕ್ಮಿಣಿರಮಣಭರಣದಿಂದೊಪ್ಪುತ
ಭಾಮೇಶ ಒಡಗೂಡಿ ಎನ್ನ ಮುಂದೆ ನಲಿವಂತೆ ಮಾಡೊ
ಸಾಮಾದಿ ವೇದಗಳ ತಂದಿತ್ತಾ ಮಹಾತ್ಮನ ತುತಿಸಬಲ್ಲನೆ
ಸಮಾನರಹಿತ ಸನ್ಮತಿಯ ಪಾಲಿಸೋ
ತಂದೆ ಪುರಂದರವಿಠ್ಠಲನದಾಸ ೩

೮೭

ರಾಗ : ಶಂಕರಾಭರಣ ಚಾಪುತಾಳ

ನಮಿಸುವೆ ಗುರುವೆ ನಿನಗೆ ನಮಿಸುವೆ
ನಮಿಸುವೆ ಗುರುರಾಘವೇಂದ್ರ ಎನ್ನ
ಕ್ಷಮಿಸಬೇಕಯ್ಯ ನೀನೀಗ – ಆಹ ಪ

ಮಮತೆಯ ಹಿಂಗದು ಸಮಚಿತ್ತ ಬರದು
ವಿಮಲಜ್ಞಾನ ಹೇ ಕರುಣಿಸಬೇಕಯ್ಯ ಅ.ಪ

ತುಂಗಾತೀರದಿ ವಾಸಾ – ಬಹು
ಮಂಗಳವಯ್ಯ ಪ್ರದೇಶ – ನಮ್ಮ
ರಂಗನದಾಸರ್ವಿಶೇಷ – ನಿನ್ನ
ಸಂಗಡ ಮಾಡೋರು ವಾಸಾ – ಆಹಾ
ಕಂಗೆಟ್ಟು ನಿನ್ನಲಿ ಬಹ ಭಕುತರಿಗೆ
ಸಂಕಟಗಳ ಕಳೆದು ಮಂಗಳನೀಡುವಿ ೧

ಕರೆದಾಗಲೆ ನೀನು ಬರುವಿ – ಬಿರುದು
ಕರುಣವೆಂದು ಧರಿಸಿರುವಿ – ನಿನ್ನ
ಚರಣಶರಣರನು ಪೊರೆವಿ – ಬಂದು
ಧರೆಯೊಳು ಅಲ್ಲಲ್ಲಿ ಇರುವಿ – ಆಹಾ
ವರಜಟೆಗಳ ಹೊತ್ತು ಬದರಿಯ ಮನೆಮಾಡಿ
ನಿರುತವು ಶೋಭಿಪ ಗರುಡವಾಹನದಾಸ ೨

ಮಧ್ವಮತವೆಂಬ ಅಬ್ಧಿ – ಅಲ್ಲಿ
ಉದ್ಭವಿಸಿದ ದಿವ್ಯಜ್ಯೋತಿ – ಶುದ್ಧ
ಸತ್ತ್ವಗುಣಗಳೆ ರಾಶಿ – ವರ
ತತ್ತ್ವ ವಿಷಯ ಉಪದೇಶಿ – ಆಹಾ
ಅದ್ಭುತಚರಿತನೆ ಅಪಾರ ಮಹಿಮನೆ
ವಿಶ್ವನಾಮಕ ತಂದೆ ಪುರಂದರವಿಠಲದಾಸ ೩

೮೮

ರಾಗ : ಆನಂದ ಭೈರವಿ **ಆಟತಾಳ**

ರಾಘವೇಂದ್ರ ಗುರುವೆ ರಾಗದ್ವೇಷಾದಿಗಳು
ನೀಗುವಂತೆ ಮಾಡೊ ಭಾಗವತರ ಪ್ರಿಯ ಪ

ನೆಲೆಯಾಗಿ ಇರುತಿಪ್ಪೆ ವರಮಂತ್ರಾಲಯದಲಿ
ನಲಿದು ಕರೆಯಲು ನಿನ್ನ ಒಲಿದು ನೀ ನಡೆತರುವಿ ೧

ನಿನ್ನ ನಾನರಿಯೆನೊ ಮನ್ನಿಸಿ ಬಂದ ಬಗೆಗೆ
ಉನ್ನಂತ ಕಾರಣ ಭಿನ್ನವಿಲ್ಲದ ಕರುಣ ೨

ತಪ್ಪುಗಳ ಎನ್ನ ವಿಪರೀತಗಳ ಮರೆದು
ಅಪಾರ ಕೃಪೆಯ ಕೊಂಡ ಸರ್ಪಶಯನನ ದಾಸ ೩

ದಾಸನು ನಾನೆಂದು ಏಸು ಮರ್ಮವ ತೋರಿ
ಶ್ರೀಶನ ಪಾದದಲಿ ಲೇಸು ಭಕುತಿ ಕೊಟ್ಟೆ ೪

ಇಷ್ಟದಾಯಕ ಎನ್ನ ಇಷ್ಟವ ತಾಳಿ ನೀ
ಮುಷ್ಟಿಯ ಮುರಿದು ಎನ್ನಿಷ್ಟ ದೈವವ ತೋರೋ ೫

ಎಂದಿಗೂ ಕುಂದದ ತುಂಗತೀರದಲಿರ್ಪ
ಬಂದ ಭಕುತರಿಗೆ ಹಿಂಗದೆ ವರವೀವ ೬

ಯತಿಗಳೊಳಗೆ ಶ್ರೇಷ್ಠನೆ ಯದುಪತಿಪ್ರಿಯನೆ
ಸ್ತುತಿಗಳು ಆಗೋ ಹಾಗಿ ಮಾಡಿದ ಧೀರನೆ ೭

ಪೊಡವಿಯಲಿ ತುಂಬಿತೋ ನಿನ್ನ ಪೆಸರು ಕೇಳೋ
ಎಡಬಿಡದೆ ಎನ್ನಲಿ ನಲಿಯುತಿರಬೇಕೋ ೮

ಪರಮಪುರುಷ ತಂದೆ ಪುರಂದರವಿಠಲನ
ನಿರುತ ಪೂಜಿಪ ನಿನ್ನ ಅಡಿಗೆ ನಮಿಸುವೆ ೯

೮೯

ರಾಗ : ಅಸಾವೇರಿ **ಅಟ್ಟತಾಳ**

ಕರುಣಾನೆನಲಾ ನಿನ್ನ ಆಪದ್ಭಾಂದವನೆನಲಾ
ವರಗುರು ಎನಲಾ ದಾತನೆನಲಾ ಪ

ಪರಮವೈಷ್ಣವಾಗ್ರಣಿಯೆ ನಿನ್ನ ಚರಣವನು ನೆರೆನಂಬಿದೆನಯ್ಯ
ನಿರುತ ಹರಿಯನು ಪಾಡುವಂದದಿ ಕರುಣಿಸೋ ತಂದೆ ನಾರದ
ಪ್ರಭು ಅ.ಪ

ಕಂದ ಧ್ರುವರಾಯನ ತಂದೆ ತೊಡೆಯಿಂದ
ಮಂದಬುದ್ಧಿಯ ಮಾಡಿ ಮಲತಾಯಿ ನೂಕಲು
ಇಂದಿರಾಪತಿಯನು ಪೊಂದುವುದೆಂತೆಂದು
ಅಂದೇ ಮನಗೊಂಡು ಆತನು ಓಡಲು

ತಂದೆ ನೀ ಬಂದಾದರಿಸಿ ಅವನ ವಾಸುದೇವನು ತೋರುವಂದದಿ
ಅಂದು ಹರಸಿದ ವೈನವನು ನಾ ಯಾವ ಬಗೆಯಲಿ ಪೊಗಳುವೆನಯ್ಯ ೧

ದೈತ್ಯ ಕುಲೋದ್ಭವ ಪ್ರಹ್ಲಾದರಾಯನೆ
ಅತ್ಯಂತ ಪ್ರಿಯತರದಿ ಬಸುರಲಿ ಇರುವಾಗ
ನಿತ್ಯನಿರ್ಮಲ ಶ್ರೀನಾರಾಯಣ ಪರನೆಂಬ
ನಿಶ್ಚಯವಾದ ತತ್ವಮಾಡಿದಿ ಉಪದೇಶ
ಸತ್ಯವಾಯಿತು ನಿನ್ನ ವಚನ ವಿಚಿತ್ರತರ ಭವದೆಡರ ಕಳೆದನು
ಸಾಧ್ಯಮಾಡಿಸೊ ಹರಿಯ ಕರುಣವಿಶಾಲಮಹಿಮನೆ ಯೆರಗುವೆನಯ್ಯ ೨

ದುಷ್ಟನೆಂದು ದೂರಮಾಡದೆ ಪರಿಪರಿ
ಎಷ್ಟು ಜನರ ಸಾಧುವರ್ಗದೊಳಗೆ ತಂದಿ
ದೃಷ್ಟಿ ನಿನ್ನದು ಸೋಕೆ ಅಷ್ಟಸಿದ್ಧಿಯಾಗುವದು
ಇಷ್ಟದಿ ಯನ್ನಮನದ ಡೊಂಕವ ತಿದ್ದಯ್ಯ
ಸೃಷ್ಟಿಯೊಳಗೆ ನಾನಧಮತಮನಯ್ಯ ನೀನಾಧರಿಸಬೇಕು
ನಷ್ಟಮಾಡಿಸೋ ಎನ್ನ ಅಘಗಳ ತಂದೆ ಪುರಂದರವಿಠಲನದಾಸ ೩

೯೦

ರಾಗ : ಆನಂದಭೈರವಿ ಆದಿತಾಳ

ತಂದೆ ಎಣೆಗಾಣೆ ಗುರುವೆ ಸರಿಗಾಣೆ ಪ

ಸಿಂಧುಶಯನನ ದಾಸ ತಂದೆ ಪುರಂದರನಾ
ನಂದಾದಿ ಸಂಧಿಸಿ ವಂದಿಪ ಜನರಿಗೆ
ಇಂದಿರಾಪತಿ ತಾನು ತೋರಿ ಅವರ ತನ್ನ
ಮಂದಿರದಲಿ ಇಟ್ಟು ನಲಿಯುತಲಿರ್ಪ ೧

ಶ್ರೀಶನ ಆಜ್ಞೆಯ ತಾಳಿ ಈ ಧರೆಯೊಳು
ಭೂಸುರನಾಗಿ ನೀ ವೇಳೆವೇಳೆಗಳಲಿ
ಈಶನ ಸೇವೆಯ ನೇಮದಿ ಗೈದು
ಏಸು ಧನ್ಯನಾದ್ಯೊ ದಾಸರ ಮಣಿಯೇ ೨

ಮರುಳಾಗಿ ಜನರೆಲ್ಲ ಹರಿಯ ನೆನೆಯದಿರೆ
ಗುರುವಾಗಿ ತೋರಿ ನೀ ಬೋಧಿಸಿದ್ಯವರಿಗೆ

ಕರದಲಿ ತಂಬೂರಿ ತಾಳವನೆ ಕೊಂಡು
ಧರೆಯಲ್ಲ ಮೆರೆದೆಯೊ ಧೀರ ಉದಾರ ೩

ನಂಬಿದವರಿಗೆಲ್ಲ ತುಂಬಿಸಿ ಭಕುತಿಯ
ಶಂಭು ಪುರಂದರ ವಂದಿಪ ಪಾದವ
ಕಂಬುಕಂಠನ ತೋರಿ ಮಾರುತಿ ಮತವ ಅವ-
ಲಂಬಿಸುವಂತೆ ಮಾಡಿ ಸಾಕುವ ತಂದೆ ೪

ವಂದನೆ ಮಾಡುವೆ ಒಂದೇ ಮನದಿಂದೆ
ಬಂಧನ ಬಿಡಿಸೆನ್ನ ಉದ್ಧರಿಸು ತಂದೆ
ತಂದೆ ಪುರಂದರವಿಠಲದಾಸ
ಎಂದೆಂದಿಗೆನ್ನನು ಬಿಡದಿರು ಕಂಡ್ಯಾ ೫

೬೧

ರಾಗ : ಮೋಹನ **ಆಟತಾಳ**

ಪುರಂದರದಾಸರಾಯಾ ನಿನ್ನಯ ಚರಣ
ಸರಸಿಜವನ ಪೊಂದಿದೆ ಪ

ಪೊರೆವರ ನಾ ಕಾಣೆ ನಿನ್ನೊರತನ್ಯರ
ಮರೆಯದೆ ಎನ್ನನು ಸಲಹಯ್ಯ ಬೇಗದಿ ಅ.ಪ

ಪರಮಪುರುಷ ನಿನ್ನ ಬಳಿಗೆ ಬಂದು
ಕರವ ನೀಡುತ ಯಾಚಿಸೆ
ಕರುಣಕೆ ಸತತವು ಪಾತ್ರನು ನೀನೆಂದು
ಕರಿರಕ್ಷಕನು ನಿನಗೆ ಸುಲಭದಿ ತೋರಿದ ೧

ಸಕಲಭಾಂಡಾರಂಗಳ ಸೂರೆ ಮಾಡಿ
ಸಖಿಯೊಡನೆ ಬೈಲಾದಿಯೋ
ಮಖವೈರಿಯ ಸದೆದವನ ತೊಂಡನ ಕೈಪಿಡಿದಿ
ಸುಖಿಯಾಗಿ ಎಂದೆಂದು ಅವನ ಸೇವಕನಾದಿ ೨

ಜ್ಞಾನಶೂನ್ಯನಾಗಿ ನಾನಿರುತಿರೆ
ದೀನರಕ್ಷಕ ನೀ ಬಂದಿ

ಜ್ಞಾನಿಗಳರಸನ್ನ ಗಾನ ಮಾಡುವಂತೆ
ಜ್ಞಾನವ ಪಾಲಿಸಿ ಕರುಣದಿ ಸಲಹಿದಿ ೩

ದಾಸ ನಾನು ಎಂದಿಯೋ ಎನಗೆ ನೀನು
ಏಸು ಮರ್ಮವ ತೋರಿದೋ
ಸಾಸಿರನಾಮನು ಲೇಸಾಗಿ ತೋರುವಂತೆ
ಲೇಸುಮಾರ್ಗದಿ ಎನ್ನ ಇಟ್ಟು ಸಲಹಿದಿ ೪

ತಂದೆ ಪುರಂದರವಿಠಲನ ದಾಸ
ಎಂದೆಂದು ಪೊರೆಯೊ ಎನ್ನ
ಮಂದಮತಿಯಾದರೂ ಇಂದಿರೇಶನ ಪಾದ
ಇಂದೆ ತೋರುವಂತೆ ತಂದೆ ನೀ ಮಾಡಯ್ಯ ೫

೯೨

ರಾಗ : ಮೋಹನ **ಆಟತಾಳ**

ಪುರಂದರರಾಯರೆ ನಿಮ್ಮಡಿಗಳಿಗೆ ವಂದಿಪೆ
ಕರೆದು ಮಮತೆ ಮಾಡಬೇಕಯ್ಯ ಪ

ಇರಿಸಿ ತೊಡೆಯ ಮೇಲೆ ಎತ್ತಿ ಮೆರೆಸಿದ
ತರಳನು ನಾನಲ್ಲವೇ ಹೇ ತಂದೆ ಅ.ಪ

ಅರಿಯದೆ ನಿಮ್ಮ ಮಹಿಮೆ ಪರಮಪಾಪಿಯಾದೆ
ಪೊರೆವುದು ನಿಮ್ಮ ಭಾರ ನಾ ಮೊರೆ ಹೊಕ್ಕೆ
ಮರೆದು ಸ್ವಧರ್ಮವ ನೂಕಿದೆ । ಕಾಲವ
ಹಿರಿಯರ ನಾ ಬೈದೆ । ಮೂರ್ಖನಾಗಿ
ಹರಿನಿಂದ್ಯ ಮತ್ತು ಮಾಡಿದೆ । ಪಾಪಿಷ್ಠರ
ಸರಸದೊಳು ನಾನಿದ್ದೆ । ದೇಶದೇಶವ
ತಿರುತಿ ಹೊಟ್ಟೆಯ ತುಂಬಿಸಿದೆ । ಕಾಸಿಗಾಗಿ
ಮರುಳ ಜನರ ಸೇವಿಸಿದೆ । ಬಗೆಯನರಿಯದೆ
ನರಕದಾರಿಯೊಳು ಉರುಳುತಿರಲು ತೆರಳಿ ಮೂರ್ತಿಯ ತೋರಿ
ಕರುಣದಿಂದುಪದೇಶಗೈದು ಭರದಿ ಸಲಹಿದ ಕರುಣಾಸಾಗರ ನೀವು
೧

ಅಂದು ನಮ್ಮಪ್ಪಣ್ಣ ತುಪ್ಪಕೆ ಹೋದನು
ತಂದೆ ದಿವಸ ನೀವಾಚರಿಸೆ
ಬಂದೆ ನಾನು ತುಪ್ಪವ ತಂದಿತ್ತೆ
ತಂದ ತುಪ್ಪವ ನೋಡಲು । ಅದರಲಿ ನೀವು
ಇಂದಿರೇಶನ ಕಾಣಲು । ವಿಚಿತ್ರತರದಿ
ನಂದನ ಮನೆಯೊಳು । ತೊಟ್ಟಿಲೊಳಾ
ನಂದದಿ ಮಲಗಿರಲು । ಗೋವ್ಗಳ ಕಾವ ಮು
ಕುಂದನು ತೋರಲು ಮೈಮರೆತು ಕುಣಿಯುತ
ವಂದಿಸುತ ಕೈಮುಗಿದು ತೋರ್ದ ಬಗೆಯ ನೆನೆದು ನೆನೆದು
ಲೋಲ್ಯಾಡಿ ನಿಂತೆ ೨

ವಟದೆಲೆಯಲಿ ಮಲಗಿ ಪೊಂಗುಟಿಯ ಸವಿದ ಮುದ್ದು
ವಟಪತ್ರಶಾಯಿ ನಿಮ್ಮ ನೆಂಟನೋ
ಸಟೆಯಿಲ್ಲದೆ ನೆನೆವ । ಸುಜನರ ಹೃದಯದಿ
ತಟಿಯಂತೆ ತಾಸುಳಿವ । ಅವರು ಪೋದೆಡೆ
ಒಡನೆ ಬೆನ್ನ ಅಟ್ಟುವ ಅವರಿಗೆ ಬಂದ
ತೊಡರ ಬಿಡಿಸಿ ಕಾವ । ಎಂದೆಂದಿಗು
ಬಿಡದೆ ಅವರ ಪೊರೆವ । ಭಕ್ತನು ಕೊಟ್ಟ
ಇಟ್ಟಿಗೆಯ ಮೇಲಿರುವ । ಪಾಂಡುರಂಗ
ಕುಟಿಲಮತಗಳ ತರಿದ ತೀರ್ಥರ ನಿಟಲನೇತ್ರನ ವಂದ್ಯಗೊಂಬ
ದಿಟ್ಟ ಮೂರುತಿ ತಂದೆ ಪುರಂದರವಿಠಲರಾಯನ ಚೆಲುವದಾಸರೆ
೩

೯೩

ರಾಗ : ಮುಖಾರಿ **ಆದಿತಾಳ**

ಮರೆವದು ಉಂಟೇನೊ ಕರುಣಾಮೂರುತಿಯಾದ
ಗುರುನಾರದ ಪ್ರಭುವೆ ಚರಣಕೆ ಎರಗುವೆ ಪ

ಹರಿಯ ಸೇವೆಗಾಗಿ ನಿಜದಾಸನಾಗಿ ಬಂದು
ಧರೆಯೊಳು ಪುರಂದರದಾಸನೆಂದೆನಿಸಿಕೊಂಡ್ಯೊ ಅ.ಪ

ಗುರು ತಂದೆ ತಾಯಿ ಬಂಧು ಎಲ್ಲವು ಎನಗೆ ನೀನು
ಕರೆದು ಆದರಿಸಿದ ದಾಸಯ್ಯ ದಾಸಯ್ಯ

ಹಿರಿದಾಗಿ ಉಪದೇಶ ಕರುಣಿಸಿ ವರವಿತ್ತು
ಮರುಳೆ ತೋರಿದಿ ಹರಿಯ ಅದ್ಭುತ ರೂಪವೆನಗೆ ೧

ತೇಜೋಮಯವಾದ ವಜ್ರಾದಿಗಳಿಂದ ಬಲು
ಪ್ರಜ್ವಲಿಸುವ ದಿವ್ಯ ಆಲದೆಲೆಯ ಕಂಡೆ
ನಿಜವಾದ ಮರಕತದಂತೆ ಪೊಳೆಯುವದು
ಯೋಜನ ಒಂದುಳ್ಳ ಅಂಬರ ಬೀದಿಯಲಿ ೨

ಯಶೋದೆಯ ತೊಡೆಯಲಿ ಮಲಗಿದ ಪರಿಯಂತೆ
ಶಿಶುವಾಗಿ ನೀಲವರ್ಣ ಮಲಗಿದ ಎಲೆ ಮ್ಯಾಲೆ
ಹಸಿವಾದ ಶಿಶುವಂತೆ ಬೆರಳ ಸವಿವುದ ಕಂಡೆ
ಯೇಸು ಪರಮವಯ್ಯ ಯೇಸುಕಾಂತಿಯ ಮಗು ೩

ಬೆಟ್ಟವ ಪೋಲುವಂಥ ದೊಡ್ಡ ರೂಪವ ಕಂಡೆ
ವಟಪತ್ರ ಹಿಂಭಾಗದಿ ಸಹಸ್ರ ಸಂಖ್ಯಕವಾದ
ಗಡ್ಡಮೀಶೆಯ ದೋರೆ ಬಿಚ್ಚಿದ ಕಲಾಪವ
ಕಂಡು ಭಯವಗೊಂಡೆ ಅಜ್ಞಾನ ಕವಿಯಿತು ೪

ಈ ವಿಶ್ವರೂಪ ತೋರಿ ವಿವರಿಸಿದ ನಿನಗೆ
ಸಾವಿರಬಾರಿ ನಾನು ವಂದಿಪೆ ಆಡಿಗಳಿಗೆ
ಭವಕಟ್ಟು ಇನ್ನುಂಟೆ ಯಾವ ಬಗೆಯಾದರೂ
ಕಾವ ವ್ರತಗೊಂಡ ತಂದೆ ಪುರಂದರವಿಠಲ ದಾಸ ೫

ಆತ್ಮಶೋಧನೆ

೯೪

ರಾಗ : ಸಾಕಿಮಟ್ಟು **ಆದಿತಾಳ**

ಆಹಾ ಸುಂದರಮೂರ್ತಿ ಸತ್‌ಕೀರ್ತಿ
ಪಾಹಿ ಪಾಹಿ ಪಾಹಿ ಸುರಚಕ್ರವರ್ತಿ
ಮೋಹಪಾಶ ಕಡಿ ನಿನಗೆ ಶರಣಾರ್ಥಿ
ಸಾಹಸಿ ಬಿಡಿಸೊ ಎನ್ನ ಭ್ರಾಂತಿ ೧

ಪಾಪಿ ನಾನು ನಿನ್ನ ಬಳಿಗೆ ಬಂದೆ
ಕಾವ ದೊರೆಯೆಂದು ನಿನ್ನನು ನಂಬಿದೆ

ತಾಪಯತ್ರದಿ ಬಹಳ ನೊಂದೆ
ಆಪದ್ಬಾಂಧವ ಕರುಣಿಸಿಂದೆ ೨

ಸೂಕರಾಸ್ಯ ನೀ ನೋಡವೊಲ್ಯಾಕೊ
ಆಕುಲ ಬಿಡಿಸೊ ಭವಕಟ್ಟು ಸಾಕೊ
ಬೇಕೊ ನಿನ್ನಲಿ ಭಕ್ತಿರಬೇಕೊ
ಸಾಕೋ ಸೂತ್ರಧಾರಕ ಸಾಕೊ ೩

ವೈಕುಂಠವಾಸಿ ನಾ ಪರದೇಶಿ
ಕಾಯೋ ಕೇಶಿಮಾರಣ ಘಾಶಿ
ತೇಜೋರಾಶಿ ಪಟ್ಟೆನೊ ವೀಕ್ಷಿಸಿ
ಕರುಣಿಸಯ್ಯ ಕ್ಷೇಮವ ಕೊಡಿಸಿ ೪

ದುರಿತಕೆ ದೂರ ಕರುಣಾಪಾರ
ಚಾರು ಚರಿತ್ರ ಸಜ್ಜನಮಿತ್ರ
ಮೇರುಗಾತ್ರ ಮಂದರಾದ್ರಿಧರ
ಗೌರಿಶಂಕರ ಮಿತ್ರ ಪವಿತ್ರ ೫

ಮನೋವೇಗವ ತಡೆಯಲರಿಯೆ
ಆಶಾಪಾಶವ ಕಡಿಯಲರಿಯೆ
ತನುವಿನ ಪ್ರೇಮವ ಬಿಡಲರಿಯೆ
ನಿನ್ನ ಸ್ಮರಣೆಯ ಮಾಡಲರಿಯೆ ೬

ಜನುಮ ಜನುಮದಿ ಹತ್ತಿದ ಕೊಳಕು
ಮನವ ತೊಳೆವಬಗೆ ತಿಳಿಬೇಕು
ವಿಷಯದ ವಾಸನೆ ನೂಕಲಿಬೇಕು
ತಂದೆ ಪುರಂದರವಿಠಲನ ದಯ ಬೇಕು ೭

೯೫

ರಾಗ : ಕಾಂಬೋಧಿ **ಝಂಪೆತಾಳ**

ಯಾವ ರೋಗವೊ ಎನಗೆ ಪೇಳೊ ಧನ್ವಂತ್ರಿ
ದೇವ ಬೇಡುವೆ ಎನ್ನ ಕೈಪಿಡಿದು ನೋಡಯ್ಯ ಪ

ತಲೆಯಲ್ಲಿ ಪಿತ್ತವೊ ತಲೆಯು ಸುತ್ತುತಲಿದೆ
ನೆಲೆಯಾಗದೆ ಮನವು ಕಾಡುತದೆ ಕೇಳೋ
ಸುಲಭದಿಂದಲೆ ಎನಗೆ ತೈಲವನು ಪೇಳಯ್ಯ
ಕುಲವೈದ್ಯ ನೀನಲ್ಲದೆ ಬೇರೆ ಗತಿಯಿಲ್ಲ ೧

ಹೋ ಎಂಬ ಹೊಲೆಯಯ್ಯ ವಾತರೋಗವೊ ಎನಗೆ
ಜೀಯ ನಿನ್ನ ಕಥೆಗಳನ ಕಿವಿ ಕೇಳದು – ಉ–
ಪಾಯದಿಂದಲಿ ಎನಗೆ ಮದ್ದುಮಾಡಲು ಬೇಕು
ಶ್ರೀಯರಸ ನಾ ನಿನ್ನ ಚರಣಗಳಿಗೆರಗುವೆನೊ ೨

ರಂಗನಿನ್ನ ಸೊಬಗಿನ ಮೂರ್ತಿಯನ ನೋಡದಲೆ
ಕಂಗಳೆರಡು ಎನಗೆ ಕುರುಡಾದವೊ
ಮಂಗಳಾಂಗನೆ ನಿನ್ನ ರೂಪವನು ಏನ್ನಂತ–
ರಂಗದಲಿ ನೋಡೋಹಾಗೆ ಕಪ್ಪನಿಕ್ಕಲಿ ಬೇಕೋ ೩

ನಾಲಿಗೆಯು ಹರಿಯೆಂದು ಬೊಗಳವಲ್ಲದು ಕೇಳೊ
ಕಾಲುಗಳು ನಿನ ಯಾತ್ರೆ ಮಾಡವೊಲ್ಲದೊ
ಪಾಲುಕಡಲೊಡೆಯನೆ ಇದು ಏನು ರೋಗವಯ್ಯ
ಕಾಲದಲಿ ನೀ ಬಂದು ಮದ್ದು ನೀಡಲಿಬೇಕು ೪

ಭವರೋಗದ ಬೇನೆ ಒಂದು ಬಗೆಯಲ್ಲವೊ
ಭವರೋಗವೈದ್ಯ ತಂದೆ ಪುರಂದರವಿಠಲ
ಸವಿದು ನಾಮವ ನಿನ್ನ ಅಡಿಗಳನು ಪಾಡಿ ನಾ
ಭವರೋಗ ಕಳೆವಂತೆ ಲೇಹ್ಯ ನೀಡಲಿಬೇಕೊ ೫

ಲೋಕನೀತಿ

೯೬

ರಾಗ : ಕಾಂಬೋಧಿ ಝಂಪೆತಾಳ

ಚಿಂತೆ ಮಾಡಲಿಬೇಡ ಅಣ್ಣಯ್ಯ ನೀನು ಪ
ಚಿಂತೆ ತೀರಿಸೆ ನಮ್ಮ ಚಿತ್ತಜನಯ್ಯನಿರೆ ಅ.ಪ

ಗುರುಭಕ್ತಿಯನು ಮಾಡು ಹಿರಿಯರಿಗೆ ನೀ ಬಾಗು
ಕರೆದು ಸಾಧುಗಳಿಗನ್ನ ನೀಡು

ಪರಮಗುರು ಗುರುರಾಜರಂಘ್ರಿಗಳ ಮನದಿಕ್ಕು
ಹರುಷದಿಂದಲಿ ನೀನು ಹರಿಪೂಜೆಯನು ಕೊಳ್ಳೊ ೧

ಖಳಜನರ ಸೇರಿ ನೀ ಬಾರೆ ನುಡಿಯಲಿಬೇಡ
ಸುಳಿದು ಅವರಬಳಿಗೆ ನೀ ಪೋಗಬೇಡ
ಜಲಜಾಕ್ಷ ಕೃಷ್ಣನ ಎಂದೆಂದು ಮರೆಬೇಡ
ಚೆಲುವದಾಸರ ಸಂಗ ಮಾಡದಿರಬೇಡ ೨

ಕೋಪಮಾಡಲು ಬೇಡ ಕೋಪನಾಶವೊ ಕೇಳು
ಪಾಪಕೆ ನೀ ಗುರಿ ಆಗಬೇಡ
ಶ್ರೀಪತಿಯ ಚರಣಗಳ ನೆನೆದು ನೆನೆದು ನೀನು
ತಾಪತ್ರಯಗಳನ್ನೆಲ್ಲ ದೂರಮಾಡಲು ಬೇಕು ೩

ನಿಜಭಕ್ತಿಯನು ಮಾಡು ವೈರಾಗ್ಯವನು ಬೇಡು
ಸಜ್ಜನರ ಸಂಗದಲಿ ಎಂದೆಂದು ಬಾಳು
ವಿಜಯಸಾರಥಿ ನಮ್ಮ ಕೃಷ್ಣರಾಯನ ನಾಮ
ಗರ್ಜನೆ ಮಾಡಯ್ಯ ಅನುಕಾಲದಲ್ಲಿ ೪

ಪರರಲಿ ನೋಡುವ ಕುಂದುಗಳ ಮನ್ನಿಸಯ್ಯ
ಪರಕೆ ಸಾಧನಮಾರ್ಗ ಅರಿತುಕೊಳ್ಳಯ್ಯ
ಶ್ರೀಕೃಷ್ಣ ಎನ ತಂದೆ ಪುರಂದರವಿಠಲನೆ
ಪರದೈವನಹುದೆಂದು ತಿಳಿದುಕೊಳ್ಳಯ್ಯ ೫

೯೭

ರಾಗ : ಕಾಂಬೋಧಿ ಝಂಪೆತಾಳ

ನಂಬದಿರು ನಂಬದಿರು ನಂಬದಿರು ಜೀವ ಪ

ಡಂಭತನದ ಬಾಳು ಪುಸಿಯಾದ ಈ ಬಾಳ ಅ.ಪ
ಕೇರಿ ಊರನೆ ಬಿಟ್ಟು ಚರಿಸುವ ಒಬ್ಬಾತ
ಪಾರಕಾಣದಲೆ ಒಂದೆಡೆಯ ಕಂಡು
ಸೇರಿ ರಾತ್ರಿಗೆ ಅಲ್ಲಿ ಮೀರಿ ದಾರಿಯ ಪಿಡಿವ
ಆ ರೀತಿಯಲಿ ಅಲೆದಾಡುವೆಯೊ ಹೇ ಪ್ರಾಣಿ ೧

ಹಣ್ಣುಗಳು ತುಂಬಿವೆ ಆಲದ ವೃಕ್ಷದಲಿ
ಹಣ್ಣಿಗೆ ಪಕ್ಷಿಗಳು ಕೂಡುತಿವೆ ನೋಡು

ಹಣ್ಣು ನೀಗಲು ಪಕ್ಷಿ ಎತ್ತ ಹೋಯಿತು ಪೇಳು
ಅಣ್ಣಯ್ಯ ಅದರಂತೆ ನಿನ್ನ ಬದುಕೆಲ್ಲ ೨

ಸಂತೆಯ ಗುಂಪುಗಳು ಕೊಂಬೋರು ಕೊಡುವರು
ಸಂತೆ ಕಳೆಯಲು ಅವರು ಯಾರಿಗೆ ಯಾರೊ
ಸಂತೆಯ ಗುಂಪಂತೆ ನಿನ್ನವರು ನೋಡಯ್ಯ
ಚಿಂತೆಮಾಡಲಿಬೇಡ ಇದು ಸತ್ಯ ಕಾಣಯ್ಯ ೩

ಹುಟ್ಟು ಬಯಸಲು ಬೇಡ ಹುಟ್ಟುವುದು ಬಲುಕಷ್ಟ
ಇಷ್ಟು ಕಾಲದ ಭಂಗ ಸಾಲದೆ ಪೇಳಯ್ಯ
ಸೃಷ್ಟಿಗೊಡೆಯ ನಮ್ಮ ಮುಷ್ಟಿವೈರಿಯ ಬಿಡದೆ
ಗಟ್ಯಾದ ಮನದಿಂದ ಮುಟ್ಟಿ ಭಜಿಸಲು ಬೇಕು ೪

ಪರಕೆ ಸಾಧನವಲ್ಲ ಪರನಿಂದ ಪರವಸ್ತು
ಪರಕೆ ಸಾಧನವಲ್ಲ ವನಿತೆ ವಿತ್ತಗಳು
ಪರಬೊಮ್ಮವಿನ ತಂದೆ ಪುರಂದರವಿಠಲನ
ಪರಮ ಆದರದಿಂದ ನೆನೆಯುತಿರೊ ಅಣ್ಣಯ್ಯ ೫

೯೮

ರಾಗ : ಧನ್ಯಾಸಿ ಆದಿತಾಳ

ನಾಯಿ ಬರುತದೆ ನೋಡೈ ಪ

ನಾಯಿ ಎಂಬುದು ಶ್ವಾನವಲ್ಲ
ಬಾಯಿಬಡಿವ ಹೀನನಾಯಿ ಅ.ಪ

ಮಾತಾಪಿತರನ ಬೈವ ನಾಯಿ
ಮಾತು ಅವರ ಕೇಳದ ನಾಯಿ
ನೀತಿಯನು ಅರಿಯದ ನಾಯಿ
ಜಾತಿಬಿಟ್ಟು ತಿರುಗುವ ನಾಯಿ ೧

ಕೊಂಡಋಣವ ಕಳೆಯದ ನಾಯಿ
ಕಂಡಕಂಡಲಿ ನಿಂಬ ನಾಯಿ
ತೊಂಡನಾಗಿ ತಿರುಗುವ ನಾಯಿ
ದಂಡಕೆ ಯವನಲಿ ಸಿಲುಕುವ ನಾಯಿ ೨

ತಂದವಳ ಬಿಡುವ ನಾಯಿ
ಬಂದವರಿಗನ್ನವಿಕ್ಕದ ನಾಯಿ
ತಂದೆ ಪುರಂದರವಿಠಲರಾಯನ
ಪೊಂದಿ ಭಜಿಸದ ದುಷ್ಟ ನಾಯಿ ೩

೯೯

ರಾಗ : ತೋಡಿ ರೂಪಕತಾಳ

ಪೂಜೆಯಾತಕೊ ಇಂಥ ಪೂಜೆಯಾತಕೊ ಪ
ಪೂಜೆಯಲಿ ನಿನ್ನ ಮನವು ನಿಲ್ಲದಿದ್ದಮೇಲೆ ನಿನಗೆ ಅ.ಪ

ಭೂತದಯ ಪಶ್ಚಾತ್ತಾಪ ನೀತಿ ಎಂಬೋದು ಮತ್ತಿಲ್ಲ
ಮಾತಿನಲಿ ಜ್ಞಾನಿಯಲ್ಲ ಕೋತಿಬುದ್ಧಿ ಬಿಡಲಿಲ್ಲ ೧

ಹಾಕುವುದು ಸಾಧುವೇಷ ಸಾಕುವುದು ಹಲವು ದೋಷ
ಬೇಕೆ ನಿನಗೆ ಒಳ್ಳೆ ಪದ ಏಕೆ ಭ್ರಾಂತಿ ಉನ್ಮತ್ತ ೨

ಪೂಜೆಯು ಹೊಲೆನೆಸಪಲಿ ಜಾಜಿ ತುಳಸಿ ಕೈಯಲಿ
ಮೂರ್ಜಗದೊಡೆಯ ಅವನೊ ಎಲ್ಲಿ ಮಾರ್ಜಾಲನಂತೆನೋಟದಲಿ
೩

ಆಸೆಯನು ಬಿಡಲಿಲ್ಲ ಶೇಷಶಯನನ ಪೂಜೆ ಎಲ್ಲ
ಘಾಸಿಪಟ್ಟು ಮಾಡುತಿಯಲ್ಲ ಮೋಸಹೋಗದೆ ತಿಳಿಯೊ ಎಲ್ಲ ೪

ತಂದೆ ಪುರಂದರವಿಠಲನ್ನ ಒಂದೇ ಮನದಿ ನೆನೆಯೊ ಅಣ್ಣ
ಎಂದು ಕುಂದದ ಪದವನೀವ ನಂದನಂದನ ತಂದೆ ಕೃಷ್ಣ ೫

೧೦೦

ರಾಗ : ಯದುಕುಲಕಾಂಬೋಧಿ ಆದಿತಾಳ

ಸಾಧು ಸಂಗವಾಗದ ಬಾಳು ಬೋಳಾಗದಯ್ಯ ಪ
ಸಾಧುಸಂಗ ಎಂಥಾದಯ್ಯ ಕ್ಷೇಮ ನಿನಗೆ ನೀಡುವಂಥ ಅ.ಪ

ಉದಯದಲಿ ಎದ್ದು ಹರಿಯ ನಾಮವನು ಒದರಿ ಒದರಿ
ಸತತವು ನಿರ್ಮಲನಾಗಿ ನಾರದವಂದ್ಯನ ಪಾಡಿ ಆಡುವಂಥ ೧

ತನ್ನ ಮರೆತು ಘನ್ನಮಹಿಮನ ಭಿನ್ನವಿಲ್ಲದ ಭಕ್ತಿಯಲಿ
ಚಿನ್ನಕೃಷ್ಣನ ಧ್ಯಾನದಲಿಟ್ಟು ಧನ್ಯರಾಗಿ ಬಾಳುವಂಥ ೨

ಪರಮಪುರುಷ ಕೃಷ್ಣರಾಯ ಪರನೆಂಬ ಸುಜ್ಞಾನದಲಿ
ಎರಡು ಏಳು ದ್ವೇಷವ ಬಿಟ್ಟು ದುರುಳ ಆಸೆಯ ತರಿದಂಥ ೩

ಆನಂದ ಆನಂದದಿಂದ ಗೆಜ್ಜೆಕಟ್ಟಿ ಲಜ್ಜೆಬಿಟ್ಟು
ಆನಂದಬಾಷ್ಪವಗೊಂಡು ಆ ನಂದನ ಕಂದನ ಭಜಿಸುವಂಥ ೪

ತಂದೆ ಪುರಂದರವಿಠಲರಾಯ ಅಂದವಾಗಿ ಸಾಕುವ ನಮ್ಮನು
ಮಂದ ಬುದ್ಧಿಯಿಂದ ನೀವು ಮುಕುಂದನ ಮರೆಯದಿರಿ ೫

ತತ್ತ್ವಚಿಂತನೆ

೧೦೧

ರಾಗ : ಕಾಂಬೋಧಿ **ಝಂಪೆತಾಳ**

ಉರಿಮಾರಿಗೆ ಔತಣ ಆಗಬಹುದೋ ಪ

ಭವಶರಧಿಯೊಳು ಸಿಲುಕಿ ನಾ ಪಡುವುದಕಿಂತಲು ಅ.ಪ

ಚಿಕ್ಕವಳು ಎಂದು ನಾ ಒಬ್ಬಳ ತಂದೆನಯ್ಯ
ಸೊಕ್ಕು ಮುರಿದು ಎನ್ನ ಕೋಣೆಯಲಿ ಇರಿಸಿ
ಅಕ್ಕೋ ನೋಡಿ ಅವಳು ಅನ್ಯತ್ರ ಓಡುವಳು
ಸಾಕು ಸಾಕು ಎನಗೆ ಅವಳ ಹಂಬಲವು ೧

ನೆಂಟರಿಲ್ಲ ಎನಗೆ ಇರುವರು ಅವಳ ವಶ
ತಂಟೆಮಾಡುವರೆನ್ನ ಅನುಗಾಲವು
ಭಂಟನಾಗಿ ಅವರ ಸೇವೆ ಮಾಡಿದೆನಯ್ಯಾ
ಗಂಟಲಾ ಗಾಣವೊ ಅವರೊಂದು ಸಹವಾಸ ೨

ಬದುಕೊ ದಾರಿಯು ಇಲ್ಲ ಆ ರಂಡೆ ಕಾಡುವಳು
ಹಿತವ ಒರೆವರಿಲ್ಲ ಆದರಿಪರಿಲ್ಲ
ಹಿತವ ಪೇಳುವ ನಿನ್ನ ಮೊರೆಹೊಕ್ಕೆ ನಾನೀಗ
ಮತಿಯ ಪಾಲಿಸೊ ತಂದೆ ಪುರಂದರವಿಠಲಾ ೩

೧೦೨

ರಾಗ : ಸೌರಾಷ್ಟ್ರ ಅಟತಾಳ

ಕಡಲಶಯನ ನಿನ್ನ ಕಡೆಗಂಣ್ಣಿಂದಾದರೂ ನೋಡಬಾರನೋ
ಮೂಡಲಗಿರಿವಾಸ ಕಾಡುವ ಭವರೋಗ ಪೀಡಿಸದಂತೆ ಮಾಡೋ ಪ

ನಿನ್ನ ಹೊರತು ನಾನು ಅನ್ಯರ ಮನದಲಿ ನಿನ್ನಾಣೆ ಪೇಳುವೆನೆ
ಇನ್ನು ನೆನೆಯಲಿಲ್ಲ ಚೆನ್ನಾಗಿ ನೀ ಕೇಳೊ ಯನ್ನ ಕುಲದೈವ ಕೃಷ್ಣ ೧

ಆದಕಾರಣದಿಂದ ಆದರಿಸುವಿಯೆಂದು ವಾದಿಸುವೆನೋ ನಿನ್ನಲಿ
ಭೇದವೆಣಿಸದೆ ಯಾದವಪ್ರಭುವೆ ನೀ ಮೋದದಿಂದಲಿ ಸಲಹೋ ೨

ವಾಸಕೆ ಮನೆ ಉಂಟು ಘಾಸಿಗೆ ಮನೆ ಉಂಟು ಭ್ಯಾಸರವಾದ ಮನೆ
ಶಶಿ ಸೂರ್ಯ ವರುಣನು ವಾಸ ಸರ್ವದಾ ಅಲ್ಲಿ ವಸುದೇವಕುಮಾರನೆ ೩

ನಾಳೆಗೆ ಸಂದೇಹ ಸಾಲಗಾರರು ಉಂಟು ಸಾಲಕಟ್ಟುವ ತೆರವು
ಇಲ್ಲವೊ ಎನಗೀಗ ಸೊಲ್ಲುವುದು ಬಲು ಕಷ್ಟ ಪುಲ್ಲಲೋಚನನೆ ಕೇಳೊ ೪

ಎನದಲ್ಲ ಆ ಮನೆ ನಾನಿರುವುದು ಸುಮ್ಮನೆ ನಾನೊಂದು ವಕ್ಕಲಷ್ಟೆ
ಎನದೆಂಬ ಮನೆಯು ಎಂದಿಗೂ ಎನಗಿಲ್ಲ ಮಾನವಿಲ್ಲದ ಬದುಕು ೫

ಯಜಮಾನ ತಿರುಕನು ಕುಜನರು ಮನೆಯಲ್ಲ ರಾಜ್ಯ ಅವರದಾಯಿತು
ಈ ಜಗದೊಳು ಕಾಣೆ ದುರ್ಜನರ ಅವರಂತೆ ಸುಜನ ರಕ್ಷಕನೆ ದೇವ ೬

ಅದರೊಳು ಮೂವರು ಅವಲಕ್ಷಣ ಧೂರ್ತರು ಯಾವರು ಯದುರಿಲ್ಲವೊ
ಕವಿದು ಕತ್ತಲೆ ಹಾದಿ ಗವಿಗಣದೆ ನೋಡಿ ಗರ್ವದಿ ನೂಕುವರು ೭

ಮನೆಯೊ ಆ ಲಕ್ಷಣ ಮನೆಯಜಮಾನನ ನಾನು ಕಂಡದ್ದೆ ಇಲ್ಲ
ಹೀನಬುದ್ಧಿಯವರು ಮನೆಯಲಿ ಇರುವವರು ನಾನಿಲ್ಲಿ ಬಾಳ್ವದೆಂತೋ ೮

ನಾನು ಪಟ್ಟದೆಲ್ಲ ಎನ್ನ ಪಡಿಸಿಟ್ಟೆಲ್ಲ ನೀನು ಅರಿಯೇನೊ ಪೇಳೋ
ಘನ ಬಿರುದುಗೊಂಡ ಕರುಣಾಸಾಗರ ನೀನು ಮುನಿಜನಪ್ರೇಮ ಕೇಳೋ ೯

ಅಚ್ಚುತ ಈ ಮನೆಯಳು ಮುಚ್ಚಾಗಿರುವಿಯೆಂದು ಹೆಚ್ಚಾದ ಶಾಸ್ತ್ರವಿದೆ
ಮಿಂಚುವ ನೀನಿರೆ ವಂಚಕರ ರಾಜ್ಯಕೆ ಉಚಿತವೆ ನೀ ಬಿಡುವುದು
೧೦

ವಿಶ್ವ ತೈಜಸೆ ಪ್ರಾಜ್ಞ ತುರ್ಯಾದಿ ಪೆಸರಿಂದ ವಿಶ್ವಾಸದಿಂದಿರುವಿ
ರವಿ ಚಂದ್ರ ವರುಣ ಮೊದಲಾದ ತತ್ವೇಶರ ಪವನರಾಯನ ಕೂಡಿ
೧೧

ಕಾಮಿನಿ ದ್ರೌಪದಿಯ ಶೀರೆಯ ಸೆಳೆವಾಗ ಭೀಷ್ಮಾದಿಗಳು ನೋಡಿದರೆ
ಶ್ರೀಮಂತ ನೀ ಸಹ ನಿನ್ನವರು ಆ ಪರಿ ಮೌನ ಪಿಡಿದದ್ದೇನೋ
೧೨

ನೀನು ಲೊಡಲೊಟ್ಟೆನಿನಹಂಗು ಲೊಡಲೊಟ್ಟೇ ನಿನ್ನ ಶಾಸ್ತ್ರವು ಲೊಡಲೊಟ್ಟೆಯೋ
ಕೃಷ್ಣಯೆಂಬ ದಿವ್ಯ ಮಂಗಳಪ್ರದನಾಮ ಧ್ಯಾನವೊಂದೆ ಸಾಕೆಲೋ
೧೩

ಶತಕೋಟಿಸುರವಂದ್ಯ ಗತಿಯ ತೋರುವ ದೇವ ಪಂಥವ್ಯಾತಕೊ ಯನ್ನಲಿ
ಪಾರ್ಥಗೆ ಸೂತನಾಗಿ ಪ್ರೀತಿಯಲವನ ಕಾದ ದಾತ ಕೊಡೆನೆಗೆ ಲೇಸ
೧೪

ಗರುಡಧ್ವಜ ನಿನಗೆ ಉರಗನ ಹಾಸಿಗೆ ಸುರರು ಸೇವಕರಯ್ಯ
ಸಿರಿ ಹಿರಿ ದೊರೆತನದಿ ಸರಿನಿನಗ್ಯಾರೋ ತಂದೆಪುರಂದರವಿಠಲ ೧೫

೧೦೩
ಜತೆಗಳು

ಅಕ್ಕರದಿ ಪಾಡಬೇಕು ಉಕ್ಕಿ ಕುಣಿಯಬೇಕು
ಮಕ್ಕಳಂತೆ ಇರಬೇಕು ತಂದೆ ಪುರಂದರವಿಠಲ ೧

ಆಶೆಯು ಹುಟ್ಟಿಗೆ ಮೂಲ ಹೊಡಿಯೆಲೊ ಆಗಾಗ
ಘಾಶಿ ಪಟ್ಟಾದರು ತಂದೆ ಪುರಂದರವಿಠಲ ೨

ಉಕ್ಕುವ ಪಾಪಕೆ ಹರಿನಾಮ ಕಟ್ಟೆ ಕಟ್ಟು
ತಕ್ಕ ಉಪಾಯವಿದು ತಂದೆ ಪುರಂದರವಿಠಲ ೩

ಎನ್ನ ಕುಲದೈವ ನೀನು ಬಣ್ಣಿಸಿ ಮುದ್ದಿಡುವೆ
ಚೆನ್ನಾಗಿ ತೋರೋ ಮುಖ ತಂದೆ ಪುರಂದರವಿಠಲ ೪

ಎನ್ನ ನೀ ಬಿಡುವನಲ್ಲ ನಿನ್ನ ನಾ ಬಿಡುವನಲ್ಲ
ಇನ್ನೇನು ಯೋಚನೆ ತಂದೆ ಪುರಂದರವಿಠಲ ೫

ಒಪ್ಪಿಸು ನಿನ್ನ ಹರಿಗೆ ಒಪ್ಪಿಗೊಂಬುವನು ಅವ
ತಪ್ಪದೆ ಮುಕ್ತಿಕೊಡುವ ತಂದೆ ಪುರಂದರವಿಠಲ ೬

ಒಳ ಕಣ್ಣಿನಿಂದ ನೋಡೋ ಪೊಳೆವನು ಹೃದಯದಿ
ಕಳವಳಿಸಲಿ ಬ್ಯಾಡ ತಂದೆ ಪುರಂದರವಿಠಲ ೭

ಕಳ್ಳ ಮಾತುಗಳಾಡಿ ಬಡವರ ಬೆಳ್ಳಿಯ
ಕೊಳ್ಳೆಕೊಂಡೆನೋ ತಂದೆ ಪುರಂದರವಿಠಲ ೮

ಕಾಶಿಗೆ ಹೋದರೇನು ಉಳ್ಳಿಯ ತೊಳೆದರೇನು
ವಾಸನೆಬಿಡದೋ ತಂದೆ ಪುರಂದರವಿಠಲ ೯

ಕೋಟಿ ಜನರ ಮಧ್ಯೆ ಒಬ್ಬನೆ ಹರಿಭಕ್ತ
ಸಾಟಿ ಯಾರೋ ಅವಗೆ ತಂದೆ ಪುರಂದರವಿಠಲ ೧೦

ಕ್ಷೇತ್ರವು ಈದೇಹ ಹರಿಯು ತಾ ಕ್ಷೇತ್ರಜ್ಞ
ಕ್ಷೇತ್ರಮೂರ್ತಿಯ ಕಾಣೋ ತಂದೆ ಪುರಂದರವಿಠಲ ೧೧

ಚರಣವು ಭಕ್ತರದು ಉರವು ಶ್ರೀ ದೇವರದು
ನೀನು ಎನ್ನದೋ ತಂದೆ ಪುರಂದರವಿಠಲ ೧೨

ಚಿತ್ತೈಸು ಎನ್ನಲಿ ಸುರತರುವೆ ನಿನ್ನ
ಸುತ್ತಿದ ಬಳ್ಳಿ ನಾನು ತಂದೆ ಪುರಂದರವಿಠಲ ೧೩

ಛೀ ಎಂದು ನಾಯ ಬಡಿ ಮಾಯಿಗಳ ದೂರಹೊಡಿ
ಬಾಯ ಮ್ಯಾಲೆ ಪೆಟ್ಟು ಹೊಡಿ ತಂದೆ ಪುರಂದರವಿಠಲ ೧೪

ತಕ್ಕ ಸಮಯವೊ ಹರಿ ಎನ್ನ ರಕ್ಷಿಪುದಕೆ
ಇಕ್ಕುವೆ ಮೊರೆ ಕೇಳು ತಂದೆ ಪುರಂದರವಿಠಲ ೧೫

ತಪ್ಪು ಮಾಡದ ಎನ್ನ ಕಾರ್ಯವ ದಿನದಿನ
ಒಪ್ಪಿಗೊಂಡು ಮನ್ನಿಸು ತಂದೆ ಪುರಂದರವಿಠಲ ೧೬

ದೂರದಂತೆ ತೋರುವುದು ಹರಿಯ ಮಂದಿರ ಕೇಳು
ಸಾರುವಿ ನಿಮಿಷದಲಿ ತಂದೆ ಪುರಂದರವಿಠಲ ೧೭

ನಿಂದಕರು ಇರಬೇಕು ಚೆನ್ನಾಗಿ ಬಯ್ಯಬೇಕು
ಹಿಂದಕೆ ದೂರಬೇಕು ತಂದೆ ಪುರಂದರವಿಠಲ ೧೮

ನಿತ್ಯ ಬ್ರಹ್ಮಚಾರಿಯಂತೆ ಸಾವಿರಾರು ಹೆಂಡರಂತೆ
ಸತ್ಯವಚನವಂತೆ ತಂದೆ ಪುರಂದರವಿಠಲ ೧೯

ನಿನ್ನದೊಂದು ಅಂತರಂಗ ನಮ್ಮ ರಂಗ ಬಲ್ಲ ನಿನ್ನ
ಪ್ರಾಚೀನ ಬಿಡದೊ ತಂದೆ ಪುರಂದರವಿಠಲ ೨೦

ನೆರೆಹೊರೆ ಬಾಳಿದರೆ ಎನ್ನ ಹೊಟ್ಟೆ ಬೇಯುವದು
ಎನಗೆ ಸದ್ಗತಿಯು ಉಂಟೆ ತಂದೆ ಪುರಂದರವಿಠಲ ೨೧

ಬಂದರೆ ಬರಲಯ್ಯ ಕಷ್ಟವು ಮ್ಯಾಲೆ ಮ್ಯಾಲೆ
ಕಂದ ನಾನು ದಯವಿರಲೊ ತಂದೆ ಪುರಂದರವಿಠಲ ೨೨

ಬೆಟ್ಟದೊಡೆಯ ಭವರೋಗ ಔಷಧ ಆಗುವ
ಬೆಟ್ಟದ ಬೇರಂತೆ ತಂದೆ ಪುರಂದರವಿಠಲ ೨೩

ಭೀತಿ ಪಡುವುದಾಕೊ ಹರಿನಾಮ ಇರಲಾಗಿ
ವಾತಜ ಕೈಕೊಡುವ ತಂದೆ ಪುರಂದರವಿಠಲ ೨೪

ಮಕ್ಕಳಮಾಣಿಕ್ಯ ಸಿಕ್ಕದ ಮಾಣಿಕ್ಯ
ಸಿಕ್ಕಿತು ಎನಗೆ ತಂದೆ ಪುರಂದರವಿಠಲ ೨೫

ಮತಿಯಲಿ ಮಾರುತಿ ಹಿತದಲಿ ತಾಯಿ ತಂದೆ
ಮತದಲಿ ಮಧ್ವಮತ ತಂದೆ ಪುರಂದರವಿಠಲ ೨೬

ಹರಿನಾಮ ಕಿಚ್ಚಿಗೆ ಸುಡದಂಥ ಪಾಪವುಂಟೆ
ಹರಿಗೆ ಸರಿದೈವವುಂಟೆ ತಂದೆ ಪುರಂದರವಿಠಲ ೨೭

ಹುಟ್ಟುವಾಗ ಬತ್ತಲೆ ಹೋಗುವಾಗ ಬತ್ತಲೆ
ನಡುವಲಿ ವೇಷವೇನು ತಂದೆ ಪುರಂದರವಿಠಲ ೨೮

ಹೆಚ್ಚಾಗಿ ಶ್ರವಣಮಾಡು ಮಿತವಾಗಿ ಮಾತಾಡು
ಹುಚ್ಚನಂತೆ ತೋರೆಲೊ ತಂದೆ ಪುರಂದರವಿಠಲ ೨೯

ಹೆದರ ಬ್ಯಾಡವೊ ನೀನು ಹೊಂದಿರುವಿ ಮಧ್ವಮತ
ಎಂದಿಗು ಕ್ಷೇಮವುಂಟು ತಂದೆ ಪುರಂದರವಿಠಲ ೩೦

೧೦೪
ಸುಳಾದಿಗಳು
(ಅ)

ಎಂದಿಗೆ ಧರ್ಮ ಕ್ಷೀಣವಾಗುವುದೊ ಎಂದಿಗೆ
ಸಾಧುಗಳು ಕಣ್ಣೀರ ತರುವರೋ
ಅಂದಿಗೆ ಬರುವೆನೆಂದು ಅಂದಂದ ಮಾತಿಗೆ
ಬಂದಿಯೋ ಭುವಿಭಾರ ಕಳೆವುದಕೆ
ಮಂದಮತಿಯಾದ ಕಂಸನ ಸೀಳುವುದಕೆ ಧರ್ಮ ನೆಲೆಮಾಡುವುದಕೆ
ಇಂದಿರಾಪತೆ ನೀನು ವಸುದೇವ ದೇವಕಿಯು ತನಯುನಾಗಿ
ಗೋಕುಲದಲಿ
ನಂದನ ಮನೆಯಲಿ ಬೆಳೆವಾಗ ಬಂದಳಾ ಪೂತನಿಯು ನಿನ್ನ
ಕೊಲ್ಲುವುದಕೆ
ಮುಂದಾಗುವ ಭಂಗವ ತಾ ಕಾಣದೆ ಅವಳು
ಹಿಂಗದೆ ಮುದ್ದಿಟ್ಟು ಮುದ್ದಾಡಿ ಮೊಲೆಕೊಟ್ಟಳು ಬೇಗ
ಕೃಷ್ಣಾ ಅವಳ ಹೀರಿದಿಯಪ್ಪ ಒಂದು ನಿಮಿಷದಲಿ
ಕುಂದುಗಳ ಬಲುಮಾಡಿ ಕಪಟ ಜೂಜುಗಳಾಡಿ
ದ್ರೌಪದಿಯ ಸುಲಿದು ಪೊಂದಿದ ರಾಜ್ಯವನ್ನ ಅಪ-
ಹರಿಸಿ ಅವರ ಅಡವಿಪಾಲುಮಾಡಿ ಹರುಷಗೊಂಡು
ಅಂಧತಮಸ್ಸಿಗೆ ಆಳಾದ ದುರ್ಯೋಧನಾದಿಗಳ
ಕೊಲ್ಲಿಸಿ ಅವರ ಮನೆ ಸಾರಿಸಿ
ಬಂದ ದುರಿತಗಳ ಕಳೆದು ಐವರ ಸಾಕಿದ ಕರುಣ
ಕೃಷ್ಣಾ ಎಂದುಕಾಣದ ಧುರದಲಿ ರಥವನು ನಡೆಸಿದಿ
ಭಾವನುಗೊಂಡ ಬಲು ಸಂದೇಹವನ್ನ ಬಿಡಿಸಿ ಮಹಾ
ರಥಿಕರನ ಕೊಲ್ಲಿಸಿದಿ ಪಾರ್ಥಸಾರಥೆ
ನಿಂದು ನಲಿದು ಧರ್ಮನ ರಾಜ್ಯದಲಿಟ್ಟಿ
ಪಾಂಡವ ಕೃಷ್ಣ ಪಾಂಡವಪಕ್ಷನೆಂದು ಪೆಸರ್ಗೊಂಡು
ಮೆರೆದಿಯೊ ನಿನ್ನ ನೆರೆನಂಬಿದವರ ಭಾಗ್ಯವೆ ಭಾಗ್ಯ
ಒದಗಿ ಪಾಡಿದರೆ ಉಂಟು ಬೇಡಿದರೆ ಉಂಟು ನಲಿದರೆ ಉಂಟು
ಸುತ್ತಿದರುಂಟು ನಿನ್ನಡಿಗಳಿಗೆ ಬಿದ್ದರುಂಟು
ಇಲ್ಲದಿದ್ದರೇನುಂಟು ನಂಬಿದೆನೊ ನಿನ್ನ ಹೇ ಚಿನ್ನ
ಮೋಹನ ಮಂದರಗಿರಿಯನೆತ್ತಿದ ಬೆನ್ನ ತೋರೆನ್ನ

ಬೆನ್ನ ಬಿಡದಿರೊ ಅಣ್ಣಯ್ಯ ಮಂದಬುದ್ಧಿಯವ ನಾನು
ಲಕುಮಿಪತಿಯು ನೀನು ನಾ ಬೇಡುವದಿನ್ನೇನು
ಮುದದಿಂದ ಭಜಿಪರಿಗೆ ಶ್ವೇತದ್ವೀಪ ಅನಂತಾಸನ
ವೈಕುಂಠ ಎಂಬ ಪದಗಳನಿತ್ತು ಕರುಣಿಸುವ ನಿನ್ನ
ಚಾರುಪಾದಕಮಲಗಳಿಗೆ ಅಂದದಿಂದ ಮುತ್ತಿಡುವೆನಯ್ಯ
ಹೇಜೀಯ ಸಕಲಭುವನಕಾಧಾರವಾಗಿಪ್ಪ ಎನ್ನಯ್ಯ
ಹಿಂದೆ ಹೋಗಿದ್ದು ಹೋಗಲಿ ಅಪ್ಪ ಮುಂದೆ ನೀಡಲಿಬ್ಯಾಡ
ಈ ಹುಟ್ಟೆಲ್ಲ ಸುಂದರಾಂಗನೆ ನಿನ್ನ ದಾಸನಾದೆನಲ್ಲ
ನಿನ್ನ ಎಂಜಲು ಉಂಡೆನಲ್ಲ ಒಂದು ಅರಿಯಲಿಲ್ಲ
ಅನ್ಯರ ಬೇಡುವನಲ್ಲ ಅವರ ನೋಡುವನಲ್ಲ
ನೊಂದೆನಲ್ಲ ನಿನ್ನ ಮನಬಂದಂದೆ ಮಾಡಬಹುದಲ್ಲ
ಸಾಕಯ್ಯ ಸಾಕಯ್ಯ ತಂದೆಪುರಂದರವಿಠಲ

(೮)

ರಾಗ : ಆರಭಿ ಆದಿತಾಳ

ನಾರಾಯಣನ ಆಜ್ಞೆ ತಾಳಿ ನಾರದರೆ ಬಂದು
ಧಾರುಣಿಯೊಳು ಕಾಸುರೆಡ್ಡಿಯಾಗಿರುತಿರೆ
ವಾರಿಧಿಶಯನನು ಸಾರಿದ ಅವರ ಬಳಿಗೆ
ಘೋರ ವಿಪ್ರನಂತೆ ಬೇಡಿದ ಅವರಲಿ
ನೀರಜನಾಭನ ಕರುಣಕೆ ಪಾತ್ರವಾಗೆ
ನಾರಿಮಣಿಯಳಾದ ತನ್ನ ಸತಿ ಸಹ ಬೈಲಾಗಿ
ಬಾರಿ ಬಾರಿಗೆ ನಲಿದು ವಿಠೋಬನಿಗರ್ಪಣವೆಂದು
ಸೂರೆ ಮಾಡಿದರವರು ಧರಿಸಿದ ಧನವಷ್ಟು
ಮಾರಜನಕ ಪಾದಗಳ ಪೊಗಳುತ
ಮಾರುತಿಯಲಿ ಭಕುತಿ ಬೇಡುತ ನಿಂತರು
ಮೀರಿದ ಭಾಗವಯ್ಯಾ ಪುರಂದರದಾಸರಿಗೆ
ಭಾರತೀಶನು ಅವರಲಿ ಆವೇಶ
ಸಾರಿದರು ಡಂಗುರವ ಹರಿಯೆ ಪರದೇವನೆಂದು
ಸಾರಿದರು ಡಂಗುರವ ಪವನ ಮತ ಉತ್ತಮವೆಂದು
ಸಾರಿದರು ಡಂಗುರವ ಹರಿಭಕುತರ ಕಾವನೆಂದು
ಸಾರಿ ಬದುಕಲು ಬೇಕೊ ಅವರ ಪಾದಂಗಳ
ಮೂರು ಮಾಡುವ ತಂದೆ ಪುರಂದರ ವಿಠಲನದಿವ್ಯ
ಮೂರುತಿಯ ನೋಡುವರು ಏಸುಧನ್ಯರಯ್ಯಾ

(ಇ)

ವೇದವನ ಪೆತ್ತವ ನೀನೆ ವೇದಕಳ್ಳನ ಒದ್ದವ ನೀನೆ
ಆದರದಿ ಬಂದವಗೆ ಒಲಿದವ ನೀನೆ
ವೇದವ ಬೊಮ್ಮಗಿತ್ತವನು ನೀನೆ ವೇದಬೋಧಕನು ನೀನೆ
ವೇದನೋದಿದವ ನೀನೆ ವೇದಗಳ ವಿಭಾಗಿಸಿದವ ನೀನೆ
ವೇದಾರ್ಥಗಳ ಪೇಳಿದವ ನೀನೆ ಪುರಾಣಗಳ ರಚಿಸಿದವ ನೀನೆ
ವೇದಪ್ರತಿಪಾದ್ಯನು ನೀನೆ ವೇದಕ್ಕಾಧಾರವಾಗಿಪ್ಪವನು ನೀನೆ
ವೇದಕೆ ಸಿಲುಕುವನು ನೀನೆ ವಾದಕೆ ಸಿಲುಕದವನು ನೀನೆ
ವೇದ ನೋಡುವರ ಕಾವನು ನೀನೆ ಅವರ ಲಾಲಿಪನು ನೀನೆ
ವೇದದಿಂದ ಮಳೆ ವೇದದಿಂದ ಬೆಳೆ ವೇದದಿಂದ ಅನ್ನ
ವೇದದಿಂದ ಔಷಧ ವೇದದಿಂದ ಜ್ಞಾನ ವೇದದಿಂದ ಧರ್ಮ
ವೇದದಿಂದ ಕರ್ಮ ವೇದದಿಂದ ಯಜ್ಞ ವೇದದಿಂದ ಎಲ್ಲ
ವೇದದಿಂದ ಸತ್ಯ ವೇದವೇ ನಿತ್ಯ ವೇದವೇ ಗಾಯತ್ರಿ
ವೇದವ್ಯಾಸಮುನಿನುತ ಹೇ ಮುನಿಸುತ ಹೇ ಕೃಷ್ಣ
ಬಾದರಾಯಣ ದ್ವೈಪಾಯನ ಹೇ ವ್ಯಾಸ
ಭೇದಮಾಡದೆ ಯನ್ನ ಸಲಹಿಕೊಳ್ಳಯ್ಯ ತಂದೆ ಪುರಂದರವಿಠಲ

೧೦೫
ಉಗಾಭೋಗಗಳು

೧

ಅಕ್ಕಬಾರೆ ಸಿಕ್ಕಿದ ಕೃಷ್ಣ ಜಕ್ಕನೆ ಕಂಭಕೆ ಕಟ್ಟೋಣ,
ಉಕ್ಕುವ ಹಾಲ ಕುಕ್ಕಿ ಕೆಡುಹಿದ ಬೆಕ್ಕಿಗೆ ಬೆಣ್ಣೆ ಇಕ್ಕಿದವನೆ,
ಮಿಕ್ಕದೆಲ್ಲ ಚಿಕ್ಕವರಿಗೆ, ಸೊಕ್ಕು ಸೊಕ್ಕುವ ಇಕ್ಕೊ ನೋಡೆ
ದುಃಖವಾಗ್ಯದೆ ಮಕ್ಕಳಾಟ ತಂದೆ ಪುರಂದರವಿಠಲನೆ ಗತಿ.

೨

ಆಡೋದು ಸಟೆ ಮಾಡೋಡು ಜಪ, ಕೂಡೋದು ಗೋಷ್ಠಿ ಕುಡಿವದು ಕಳ್ಳು,
ನಿಷ್ಠೆ ಹೊರಗೆ ಭ್ರಷ್ಟವಳಗೆ, ಕೆಟ್ಟಚಿತ್ತ ಘಟ್ಟಸ್ನಾನ,
ಮೂಢಭಜಿಪದು ದೇವರನ, ಕಟ್ಟೆಕಾಯ್ವುದು ಸೂಳೆಮನೆಯ,
ಕಾಡಿಗೋಗಲು ಇವರಗತಿಯು ತಂದೆಪುರಂದರವಿಠಲ ಬಲ್ಲ.

೩

ಆನೆಯಂದದಿ ಕೂಗಲರಿಯೆ, ನಾರಿಯಂದದಿ ಕರೆಯುರಿಯೆ,
ಭಾನುಸುತನಂತೆ ದಾನವರಿಯೆ, ಪರೀಕ್ಷಿತನಂತೆ ಶ್ರವಣವರಿಯೆ,

ಹರಿಶ್ಚಂದ್ರನಂತೆ ಸತ್ಯವರಿಯೆ, ಧರ್ಮಜನಂತೆ ಶಾಂತವನರಿಯೆ,
ಏನಕಂಡು ಎನ್ನರಕ್ಷಿಪೆಯೊ ತಂದೆಪುರಂದರವಿಠಲ.

೪

ಊರದೊರೆಮಗನಾದರೇನೆ, ನಾರಿ ಯಶೋಧೆ ಕೋಪಿಸಿದಳೇನೆ,
ಸಿರಿಸಂಪತ್ತು ಸೇರಿದರೇನೆ, ತುರುಕರುಗಳು ನೆರೆದರೇನೆ,
ತರಳಕೃಷ್ಣನ ದುರಳತನವ ಯಾರು ಸಹನಮಾಡುವರಮ್ಮ,
ಇರುವದಿಲ್ಲ ಈ ಕೇರಿಯಲಿ ತಂದೆಪುರಂದರವಿಠಲನಾಣೆ.

೫

ಕೆಟ್ಟ ಹಸಿವುತೃಷೆಯಿಂದ ಬಪ್ಪಗೆ ಷಡ್ರಸನ್ನವು ದೊರಕಿದಂತೆ,
ಹುಟ್ಟು ದರಿದ್ರಗೈಶ್ವರ್ಯ ಬಂದಂತೆ, ಕುರುಡುಕಣ್ಣು ಬೆಳಕು ಆದಂತೆ,
ಕೆಟ್ಟ ಭವದಿ ಬಿದ್ದ ಎನಗೆ ಬೆಟ್ಟದೊಡೆಯ ನಿನ್ನನಾಮ ಸಿಕ್ಕಿತು ;
ಮುಟ್ಟಿ ಭಜಿಸುವಂತೆ ಮಾಡು ತಂದೆ ಪುರಂದರವಿಠಲರಾಯಾ.

೬

ಗಾಳಿಗೋಪುರದಲಿ ಇಟ್ಟ ದೀಪದಂತೆ ಎನ್ನಬಾಳು, ಸುಳಿ-
ಗಾಳಿಯಲಿಟ್ಟ ತೃಣಗಳಂತೆ, ಕಾಳಿಗೌತಣ ಮೇಷದಂತೆ,
ಕಾಲಸರ್ಪದ ಬಾಯಿಕಪ್ಪೆಯ ಪೋಲುವೆನೊ ನಾ, ಕಾಲನಾಳಿಗೆ,
ಆಳುಮಾಡದೆ ಆಳುಎನ್ನನು ತಂದೆ ಪುರಂದರವಿಠಲರಾಯ.

೭

ಜ್ಞಾನ ಭಕುತಿ ವೈರಾಗ್ಯವ ನೀಡೆನೆಗೆ ಪ್ರಾಣನಾಥ.
ಮಾನದಿಂದಲಿ ಪಾಲಿಸಬೇಕೊ ಮನ್ನಿಸಿ ಎನ್ನ ಕುಂದುಗಳ,
ಕಾನನವೆಂಬ ಭವದೊಳಗೆ ದಾರಿಯ ಕಾಣದೆ ತಿರುಗುವೆನಯ್ಯ
ದೀನರಕ್ಷಕ ದಾರಿಯ ತೋರು, ತೋರುವುದು ನಿಮ್ಮ ಭಾರ.
ಏನೆಂಬೆ ನಾ ಎನ್ನಣ್ಣಯ್ಯ ನಿನ್ನ ಕರುಣಕೆ ಉಪಮೆಇಲ್ಲ,
ಕಾಣೆನೆಯ್ಯ ನಿನಗೆ ಸರಿ ತಂದೆ ಪುರಂದರವಿಠಲನ ದಾಸ.

೮

ಜನವಿಲ್ಲ ಧನವಿಲ್ಲ, ಮನಕೆ ಬೇಕೆಂಬುವರಿಲ್ಲ,
ಮನೆತನಕೆ ದಿಕ್ಕಿಲ್ಲ, ಆದರಿಸುವರಿಲ್ಲ,
ನಿನ್ನ ನಂಬಿದೆನಲ್ಲ, ಅನ್ಯರ ಕಾಣೆನಲ್ಲ,
ಕೃಷ್ಣ ಬಾ ತಂದೆಪುರಂದರವಿಠಲ.

೯

ನಿಷ್ಠೆಯೆಂಬುದು ಕನಸಿನೊಳಗು ಇಲ್ಲವಯ್ಯ ನಿನ್ನ ಸೇವೆ
ಮುಷ್ಟಿಮರ್ದನ; ದಾನವನರಿಯೆ, ಭಕ್ತಿಭಾವವು ಮನಕೆ ಬಾರದು,
ಶಿಷ್ಟರೊಳಗೆ ಸೇರಲರಿಯೆ, ಇಷ್ಟು ಅವಗುಣ ಉಂಟೆ ಅವನಿಯೊಳು
ಭ್ರಷ್ಟನಾದರು ದಾರಿತೋರಿಸೊ, ತಂದೆ ಪುರಂದರವಿಠಲರಾಯ.

೧೦

ನೀ ಕರುಣಾಸಾಗರನಂತೆ ಕರುಣದಿಂದ ಇಷ್ಟು ಪೇಳೊ
ಆ ಕರಿ ನಾರಿ ಮೊದಲಾದವರ ನೀ ಸಲಹಿದ್ದು ಏನು;
ಯಾಕೆ ಸಲಹಲಿಲ್ಲ ಮಿಕ್ಕವರ ಮೊರೆಯ ಕೇಳಿ;
ಯಾಕಯ್ಯ ಬಿರುದು ನಿನಗೆ ಪೇಳು ತಂದೆ ಪುರಂದರವಿಠಲಾ.

೧೧

ಪುರಂದರದಾಸರ ನೆನೆಯಲು ಒಂದು ಬಾರಿ
ದುರಿತರಾಶಿಗಳಲ್ಲ ಬೆಂದು ಹೋಗುವುದಯ್ಯ
ಹರುಷದಿಂದಲಿ ಅವರ ಮತ್ತೊಮ್ಮೆ ನೆನೆಯಲು
ನರನ ಜನ್ಮವು ಪಾವನವಾಗುವುದಯ್ಯ
ಪುರಂದರದಾಸರ ಅನುದಿನ ನೆನೆಯಲು
ಹರಿಭಕ್ತಿ ಹರಿಕರುಣ ಆಗುವುದಯ್ಯ ನೋಡು.
ಸಿರಿಯರಸ ತಂದೆ ಪುರಂದರವಿಠಲನದಾಸರ
ಚರಣಕ್ಕೆ ಮೊರೆಹೊಕ್ಕು ಬದುಕಿದೆನು ನಾನು.

೧೨

ಪೊರೆಯದೆ ಬಿಟ್ಟಿಯೊ ನೋಡು, ನಿನ್ನಾಣೆ ನಿನ್ನವರ ಆಣೆ.
ನಾರಿ ದ್ರೌಪದಿಯ ಮೇಲಾಣೆ, ಭಕ್ತಪ್ರಹ್ಲಾದನ ಮೇಲಾಣೆ,
ತರಳ ಧ್ರುವನ ಮೇಲಾಣೆ, ಭಕ್ತರೆಲ್ಲರ ಮೇಲಾಣೆ,
ಮೊರೆಹೊಕ್ಕೆ ಮೊರೆಹೊಕ್ಕೆ ಸಲಹಿಕ್ಕೊಳ್ಳಯ್ಯ ತಂದೆ ಪುರಂದರವಿಠಲ.

೧೩

ಪೊರೆಯದೆ ಬಿಟ್ಟಿಯಾ ನೋಡು, ನಿನ್ನಾಣೆ ನಿನ್ನವರಾಣೆ.
ಗಿರಿಯನೆತ್ತಿದ ಕೈಯ, ಸಿರಿಯಲಾಲಿಸುವ ಕೈಯ,
ಚರಣಸೇವಕರಿಗೆ ಅಭಯನೀಡುವ ಕೈಯ,
ಕರುಣದಿ ಎನ್ನ ಮಂಡೆಯಲಿ ಇಕ್ಕಯ್ಯ ತಂದೆ ಪುರಂದರವಿಠಲ.

೧೪

ಭಕುತನಂತೆ ನಾನು ನಟನೆ ಮಾಡುವೆನಯ್ಯ,
ಭಕುತರ ವಂಚಿಸಿ ನಿನಗೆ ದೂರ ಆಗುವೆನೊ,
ಭಕುತಿ ಇದ್ದರೇನು ಇಲ್ಲದಿದ್ದರೇನು;
ಭಕ್ತವತ್ಸಲ ಕಾಯೋ ತಂದೆ ಪುರಂದರವಿಠಲರಾಯ.

೧೫

ಮೀನ, ಮಂದರವನ್ನ ಪೊತ್ತ, ವನವ ಗೈದನು, ಜನಿಸಿಸ್ತಂಭದಿ,
ದಾನ ಬೇಡಿದ, ದಾನಕೊಟ್ಟನು, ಜಾನಕಿಪತಿ, ವೇಣುಪಿಡಿದು,
ಗಾನ – ಲೋಲ ಕೃಷ್ಣ ಬಾಲ ಏನುಕಾಣೆ ಮಾನಗಾವನ
ತಾನೆಏರಿದ ಘನ್ನ ತೇಜಿಯ, ತಂದೆ ಪುರಂದರವಿಠಲರಾಯ.

೧೬

ಮೂರಾಗಿ, ಮೂರು ಲೋಕಕೆ ಒಡೆಯನಾಗಿ, ಸಿರಿಯರಸನಾಗಿ,
ಮಾರನ ಪಿತನಾಗಿ ಮುಕ್ಕಣ್ಣನಯ್ಯನಾಗಿ, ವೇದದಸಾರವಾಗಿ,
ಕಾರುಣ್ಯನಿಧಿಯಾಗಿ ಸಾರಿದೆ ಎನ್ನ ನೀ;
ದೂರ ಮಾಡಿದರೆ ಮೂರುಲೋಕ ದೂರುವುದಯ್ಯ
ಬ್ಯಾಡಪ್ಪ ತಂದೆ ಪುರಂದರವಿಠಲ.

೧೭

ರಕ್ಕಸರು ತೆಗೆದೊಯ್ದು ತಮ್ಮ ವಶಮಾಡಿ ನಿನ್ನವರನು ನೂಕುತಿರೆ,
ಪೊಕ್ಕು ನೀ ಬಂದು ಪೆಣ್ಣಾಗಿ, ಜಗನ್ಮೋಹಿನಿಯಾಗಿ, ಅಮೃತದ ಕೈಯಾಗಿ,
ತಕ್ಕ ಸಮಯವ ನೋಡಿ ನಿನ್ನವರಿಗಿತ್ತು ಅವರ ಪಾಲಿಸಲಿಲ್ಲವೆ
ಮಿಕ್ಕವ ನಾನೊಬ್ಬನಿರೆ ನೀ ಸಲಹಿಕೊಳ್ಳಯ್ಯ ತಂದೆ ಪುರಂದರವಿಠಲ.

೧೮

ಸಾವಿರಬಾಹುಗಳನು ಛೇದಿಸಿ ದೇವಾ ಬಾಣನ ಸವರಿದಿ ನೀನು.
ಸಾವಿರಬಾಯ ಶೇಷ ನಿನ್ನ ಸಾವಿರನಾಮ ತುತಿಸಬಲ್ಲನೆ
ಸಾವಿರ ಜನ ಭಕ್ತರೊಡಗೊಂಡು ಸಾವಿರಕಷ್ಟ ಮನ್ನಿಸಿಕಾವ ದೇವ.
ಸಾವಿರ ಕೆಟ್ಟಕಾರ್ಯ ಮಾಡಿದೆ ರಕ್ಷಿಸೋ ತಂದೆ ಪುರಂದರವಿಠಲಾ.

೧೯

ಸುಟ್ಟುದಹಿಸುವ ದಾವ ಬರುತಿರೆ ಇಟ್ಟುತೃಣವನು ಕಟ್ಟುವಂತೆ,
ಕಟ್ಟೆ ದಾಟಿ ಬಪ್ಪ ಉದಧಿಗೆ ಅಡ್ಡಮಲಗಿ ನಿಲಿಸುವಂತೆ, ಅಡ್ಡ

ಕಟ್ಟಿಗೆಯಲಿ ಇಟ್ಟಪ್ರೇತವ ನೈವೇದ್ಯವ ಮಾಡುವಂತೆ
ದುಷ್ಟದೇವತೆಗಳನು ಭಜಿಪುದು ತಂದೆ ಪುರಂದರವಿಠಲನ ಬಿಟ್ಟು ೨೦

ಹೊನ್ನಿನಾಸೆ ಹೆಣ್ಣಿನಾಸೆ, ಮಣ್ಣಿನಾಸೆ ಮಹತ್ತಾಸೆ,
ಘನ್ನವಾದ ತನುವಿನಾಸೆ, ಕಂಡದೆಲ್ಲ ತಿಂಬ ಆಸೆ,
ಎನ್ನ ಆಸೆಗೆ ಕೊನೆಯಕಾಣಿಸೋ ನಿನ್ನ ಮ್ಯಾಲೆ ಎನಗೆ ಆಸೆ
ಅನುದಿನವು ಇಪ್ಪಂತೆ ಮಾಡಯ್ಯ ತಂದೆ ಪುರಂದರವಿಠಲರಾಯ.

೧೦೬
ಮಂಗಳ ಗೀತೆಗಳು

ರಾಗ : ಸುರುಟಿ **ಚಾಪುತಾಳ**

ಎಳೆಗರಿಕೆ ಇರುವಲ್ಲಿ ಮರದ ನೆರಳಲ್ಲಿ

ಎಳೆಕರುಗಳ ಮಧ್ಯದಿ ನಿಂತವಗೆ
ಥಳಿಥಳಿಸುವ ಪೀತವಸ್ತ್ರ ಉಟ್ಟಾತಗೆ
ಎಳೆಯ ಮುಖದವಗೆ ಯದುಕುಲತಿಲಕಗೆ ಜಯಮಂಗಳಂ ೧

ಕಣ್ಣಾಮುಚ್ಚಾಟವ ಆಡುವ ಕೂಸಿಗೆ
ಕುಣಿಕುಣಿದಾಡುವ ಗೋಪಾಲಗೆ
ಕಿಣಿಕಿಣಿ ಕಿಂದೆಣಿಗೆಜ್ಜೆನಿಟ್ಟಾತಗೆ
ಅಣುರೇಣು ತೃಣದಲಿ ವ್ಯಾಪ್ತನಿಗೆ ಜಯಮಂಗಳಂ ೨

ಅಗಣಿತ ಮಹಿಮೆಗೆ ಅಕ್ರೂರ ವರದಗೆ
ಮಗನಾಗಿ ತಾಯ್ಪಾಲ ಕುಡಿದವಗೆ
ಬಗೆಬಗೆ ರೂಪವ ಧರಿಸಿದ ದೇವಗೆ
ಮಗುವ ತಂದ ತಂದೆ ಪುರಂದರವಿಠಲಗೆ ಜಯಮಂಗಳಂ ೩

೧೦೭

ರಾಗ : ಸುರುಟಿ **ಚಾಪುತಾಳ**

ಕಡುಮುದ್ದು ಕೃಷ್ಣಗೆ ಕಡಗೋಲ ಪಿಡಿದಗೆ
ಉಡುಪನಂಥೆಹೊಳೆವ ಸುಂದರ ಬಾಲಗೆ
ದುಡುಕುಮಾಡಿ ಬೆಣ್ಣೆ ಕದ್ದು ಮೆದ್ದಾತಗೆ
ಬೆಡಗು ಮಾತುಗಳಿಂದ ನಲಿವ ದೇವನಿಗೆ ಜಯ ಮಂಗಳಂ ೧

ತರುಗಳ ನೆರಳಲಿ ತುರುಗಳ ಕಾದವಗೆ
ತರುಣೀರ ಶೀರೆಯ ಕದ್ದವಗೆ
ದೂರಿಗೆ ಅಂಜದೆ ಮಾಮನ ಕೊಂದಗೆ
ನಾರದಾದಿ ವಂದ್ಯ ಕರುಣಾಸಾಗರಗೆ · ಜಯ ಮಂಗಳಂ ೨

ಮಂದ ಮಂದ ಮಂದ ಮಂದಹಾಸನಿಗೆ
ಇಂದು ವದನಗೆ ಮುಕುಂದನಿಗೆ
ಕಂದರ್ಪಜನಕಗೆ ಕಾಂತೆರ ಅರಸಗೆ
ತಂದೆ ಪುರಂದರವಿಠಲನಿಗೆ ಜಯ ಮಂಗಳಂ ೩

೧೦೮

ರಾಗ : ಉರುಟಾಣಿ

ಜಯತು ಗೋಕುಲವಾಸ ಜಯ ಜಯ ದೇವಕಿಜಾತ
ಜಯ ಜಯ ದೈತ್ಯವಿನಾಶ ೧

ದುರುಳರ ಅಳಿಯಲೆಂದು ಧರೆಯೊಳಗೆ ನೀ ಬಂದು
ತರಿದ ನಿನ್ನ ಪಾದಕೆ ಅರಿಸಿನ ಹಚ್ಚುವೆನೊ ೨

ಪಾವಿನ ಪೆಡೆ ತುಳಿದ ಸಾವಿರನಾಮ ನಿನ್ನ
ಪಾವನ ಪಾದಗಳಿಗೆ ಜವಡಿಯ ಸುತ್ತಿಡುವೆ ೩

ಶಂಖಚಕ್ರಧರನೆ ಕಿಂಕರರಿಗೆ ವಲಿವನೆ
ಪಂಕಜ ನಿನ್ನ ಮುಖಕೆ ಕುಂಕುಮಬೊಟ್ಟನಿಡುವೆ ೪

ಸಿಂಧೂರರಾಯನವನ ಅಂದು ಸಲಹಿದ ಕರುಣಾ
ಛಂದವಾಗಿ ನಿನಗೀಗ ಗಂಧವ ಪೂಸುವೆನೊ ೫
ಚಾರು ನೀಲಗಾತ್ರ ಚಾರುತರ ಚರಿತ್ರ
ಧೀರ ನಿನ್ನ ಕೊರಳಿಗೆ ಹಾರವ ಹಾಕುವೆನೊ ೬

ತಕ್ಕ ಸಮಯವೆಂದು ತಾಳಿ ಚಿಕ್ಕವಳು ನಾ ಬಂದೆ
ಮಿಕ್ಕವ ನೀ ಮನ್ನಿಸಯ್ಯ ಬುಕ್ಕವ ಊದುವೆನೊ ೭

ದೊಡ್ಡ ಬೆಟ್ಟವನೆತ್ತಿ ಉಂಗುಷ್ಠದ ಮ್ಯಾಲಿಟ್ಟ
ದಿಟ್ಟಮೂರ್ತಿ ನಿನ್ನ ಕೈಗೆ ಇಡುವೆನೊ ತೋಡ ೮

ಕುಂದುಗಳ ಬಲು ಕಳೆದು ಬಂದುತೋರಿದ ಕರುಣ
ಎಂದು ಬಿಟ್ಟಗಲದೆ ತಂದೆ ಪುರಂದರವಿಠಲ ೯

೧೦೯

ರಾಗ : ಸೌರಾಷ್ಟ್ರ ಝಂಪೆತಾಳ

ಜಯತು ಗೋಕುಲವಾಸ ದೈತ್ಯ ಪೂತಿನಿನಾಶ
ಜಯತು ಕ್ಲೇಶವಿನಾಶ ಸರ್ವಲೋಕೇಶ ೧

ಜಯತು ರುಕ್ಮಿಣಿನಾಥ ಅನಾಥರಿಗೆ ನಾಥ
ಜಯತು ಮಧುರಾನಾಥ ಪಾಲಿಸೋ ದಾತಾ ೨

ಜಯತು ಪಾವನಗಾತ್ರ ಚಾರುತರ ಚರಿತ್ರ
ಜಯತು ಜಲಜಾನೇತ್ರ ಮುನಿಸ್ತುತಿ ಪಾತ್ರ ೩

ಜಯತು ಸಾವಿರನಾಮ ನೀಡೆನೆಗೆ ಪರಂಧಾಮ
ಜಯತು ಸಾರ್ವಭೌಮ ಭಕ್ತಿಯದು ಪರಮ ೪

ಜಯತು ತುಳಸಿಯ ಹಾರ ದಿವ್ಯದ ಒಂದಾಕಾರ
ಜಯತು ನಿನ್ನ ವಿಚಾರ ಅದು ಬಲು ಅಪಾರ ೫

ಜಯತು ಪಾಂಡವಪಕ್ಷ ದುಷ್ಟಯೋಧನ ಶಿಕ್ಷ
ಜಯತು ಲೋಕಾಧ್ಯಕ್ಷ ಧರ್ಮಸಂರಕ್ಷ ೬

ಜಯತು ಶ್ರೀಭೂಲೋಲ ಭಕ್ತ ಜನಪರಿಪಾಲ
ಜಯತು ಪಾವನಶೀಲ ತಂದೆ ಪುರಂದರವಿಠಲ ೭

೧೧೦

ರಾಗ : ಕಾಪಿ ಆದಿತಾಳ

ಜಯ ಜಯತು ಶುಭಗಾತ್ರ ಜಯ ಜಯತು ಸುಚರಿತ್ರ
ಜಯ ಜಯತು ಸ್ತುತಿ ಪಾತ್ರ ದೇವಕಿಯ ಪುತ್ರ ೧

ಜಯ ಮುದ್ದು ಗೋಪಾಲ ಜಯ ರುಕ್ಮಿಣಿಲೋಲ
ಜಯ ಕುಂತಿಸುತಪಾಲ ಜಯ ತುಳಸಿಮಾಲ ೨

ಜಯ ಪುಣ್ಯಪ್ರದನಾಮ ಜಯ ಪೂರ್ಣಸುಖಧಾಮ
ಜಯ ಭಾಮಸುಪ್ರೇಮ ಜಯ ಪರಂಧಾಮ ೩

ಜಯ ಸರ್ವಲೋಕೇಶ ಜಯ ಭಕ್ತಭಯನಾಶ
ಜಯ ಶ್ರೀಶ ಸುರೇಶ ಜಯ ವೆಂಕಟೇಶ ೪

ಜಯ ಮುಕ್ತಸಮುದಾಯ ಜಯ ಕೃಷ್ಣಪತಿರಾಯ
ಜಯ-ತಂದೆ ಪುರಂದರವಿಠಲರಾಯ ೫

೧೧೧

ಜಯ ಮಂಗಳ ನಿತ್ಯ ಶುಭ ಮಂಗಳ ಪ

ಸೋಮಕುಲೋದ್ಭವ ಧೀರ ಪರಾಕ್ರಮ
ಸ್ತೋಮಗೊಂಡ ದುರ್ಯೋಧನನ
ಭೀಮ ಪರಾಕ್ರಮನಾದ ಪಾರ್ಥನಕೊಂಡು
ನೇಮದಿಂದವನ ಭೇದಿಸಿದವಗೆ ೧

ತುಚ್ಛ ದೈತ್ಯನು ಬಂದು ಅಚ್ಚುತನ ಕಂಡು
ಹುಚ್ಚು ಮಾತುಗೊಂಡು ಬೆನ್ನಟ್ಟಿಕೊಂಡು
ನಿಶ್ಚಯವಾಗಿ ಬೈವೆನೆಂದವನ
ಮುಚ್ಚಾಗಿ ಮುಚುಕುಂದನಿಂದ ಬೈದವನಿಗೆ ೨

ಮುಕ್ಕಣ್ಣ ಅವ ಬನ್ನಪಡುವಾಗ ಎನ್ನಣ್ಣ
ತಕ್ಕ ರೂಪವನ ಕೊಂಡುರಕ್ಕಸನ
ಸೊಕ್ಕು ಮುರಿದು ಅವನ ಒಕ್ಕಲಿಕ್ಕಿದವಗೆ
ರಕ್ಕಸಾಂತಕ ತಂದೆ ಪುರಂದರವಿಠಲಗೆ ೩

೧೧೨

ರಾಗ : ಸುರುಟಿ **ಚಾಪುತಾಳ**

ಮಂಗಳಂ ಜಯ ಮಂಗಳಂ ಪ
ವೇದವ ತಂದಗೆ ಭಾರವ ಪೊತ್ತಗೆ ಆದ ಅಡವಿ ಬೇರಮೆದ್ದವಗೆ
ಆ ಧೂರ್ಜಟಿಯನ್ನ ಪರನೆನ್ನದಾತನ ಬಾಧಿಸಿದವನ ಭೇದಿಸಿ ಕೊಂದಗೆ
೧

ಕೈಯ ನೀಡಿಗೊಂಡು ಭಿಕ್ಷಕೆ ಬಂದವಗೆ ಕೈಯಲಿ ಪರಶು ಧರಿಸಿದವಗೆ
ಕೈಯಿಂದ ಶಿವನ ಬಿಲ್ಲನೆ ಮುರಿದಾತಗೆ ಕೈಯಲಿ ಕೊಳಲಪಿಡಿದ ದೇವಗೆ
೨

ತರುಣೀರ ವ್ರತವ ಕೆಡಿಸಿಬಂದಂಥ ಬೌದ್ಧಗೆ ದುರುಳರ ಒದ್ದು ಧರ್ಮವ ಕಾದವಗೆ
ದುರಿತಗಳ ಕಳೆದು ಭಕ್ತರ ಪೊರೆವವಗೆ ಸಿರಿಯರಸ ತಂದೆ ಪುರಂದರವಿಠಲಗೆ
೩

೧೧೩

ರಾಗ : ಸೌರಾಷ್ಟ್ರ ಆದಿತಾಳ

ಮಂಗಳಂ ಜಯ ಮಂಗಳಂ ಪ

ಕರೆದರೆ ಬಾರದೆ ಓಡುವದುಚಿತವೆ
ನೆರೆಹೊರೆ ಮಕ್ಕಳಂತೆ ಮಾಡುವುದ್ಯಾಕೆಲೋ
ತರುಣಿ ತುಳಸಿ ವನಮಾಲೆಯನಿಟ್ಟು ನೀ
ತ್ವರಿತದಿ ಬಂದುನಿಲ್ಲೋ ಕೃಷ್ಣಯ್ಯ ೧

ಬೆಣ್ಣೆಯ ಮೆಲ್ಲುವಂಥ ಅಂದವು ಸಾಕೆಲೊ
ಸಣ್ಣ ಕೃಷ್ಣಯ್ಯನೆ ನೀನಿಲ್ಲದೆ
ಎನ್ನ ಮಂದಿರವೆಲ್ಲ ಹಾಳಾಗಿ ತೋರುತದೆ
ಕುಣಿದಾಡುತ ನೀ ಓಡಿಬಾರಯ್ಯ ೨

ಗೊಲ್ಲಮಕ್ಕಳ ಅಜನು ಕದ್ದು ವಯ್ಯಲು ನೀನು
ಗೊಲ್ಲಬಾಲಕರಾಗಿ ಅವರ ಮನೆಗಳಲಿ
ಸೊಲ್ಲು ನುಡಿಗಳಲಿ ಅವರಂತೆ ನಡೆದು ನುಡಿದ
ಬಲ್ಲಿದ ಎನ್ನ ತಂದೆ ಪುರಂದರವಿಠಲಾ ೩

೧೧೪

ರಾಗ : ಭೂರಿ ಕಲ್ಯಾಣಿ ರೂಪಕತಾಳ

ಹಣ್ಣನೆರದರು ಬೋರೆ ಹಣ್ಣನೆರೆದರು ಪ
ಸಣ್ಣಕೃಷ್ಣನ ಸಿರದಿ ನವಮಣಿಗಳನು ಬೆರೆಸಿ ಬೋರೆ ಅ.ಪ

ಮಕರರಾಶಿಯಲಿ ರವಿಪ್ರವೇಶವಾಗುವ ದಿವಸದಲಿ
ಮಕರಿವೈರಿ ಕೃಷ್ಣನ ಶಿರದಿಂ ವಜ್ರ ವೈಢೂರ್ಯಗಳನೆ ಬೆರೆಸಿ ೧

ಅಂಬುಜಾಕ್ಷ ಅಂಬುಜವದನ ಅಂಬುಜಪಾದ ಅಂಬುಜನಾಭಿ
ಕಂಬುಗ್ರೀವಗೆ ಕೆಂಪು ಬೆರೆಸಿ ಪಚ್ಚೆ ನೀಲಗಳನೆ ಸಹ ೨

ಹತ್ತವತಾರ ಎತ್ತಿದಾತಗೆ ಮುತ್ತು ಹವಳಗಳನೆ ಬೆರೆಸಿ
ಮತ್ತು ಕಡಲೆ ಎಳ್ಳು ಸಹ ಚಿತ್ತಜನಯ್ಯನ ಶಿರದಿ ೩

ಕಾಮಹರನಪ್ಪನಪ್ಪಗೆ ಕಾಮಿತ ಫಲನೀವ ದೇವಗೆ
ಗೋಮೇಧಿಕ ಪುಷ್ಪರಾಗ ಕೋಮಲಾಂಗಿಗೆರೆದರಾಗ ೪

ಜೊಲ್ಲು ಬಾಯಿಗೊಂದು ಮುದ್ದು ಫುಲ್ಲಲೋಚನಕೊಂದು ಮುದ್ದು
ಚೆಲ್ವಪಾದಕೆ ಮುದ್ದನಿಟ್ಟ ಚೆಲುವೆರೆತ್ತಿ ಪಾಡುತಲಿ ೫

ಮನಕೆ ಬಂದ ಇಷ್ಟ ದೇವತೆ ಕೃಷ್ಣಬಾಲನೆಂದು ಪೊಗಳಿ
ಮನೆಮನೆಗೆ ಬೀರಿದರು ಮಣಿಯ ಬೆರೆಸಿ ಶಿರದಿಬೋರೆ ೬

ಮಂಗಳಾಂಗನೆರಲ್ಲ ಕೂಡಿ ಮಂಗಳವಾದ್ಯ ಸಂಭ್ರಮದಲಿ
ಗಂಗಜನಕನಾದ ತಂದೆ ಪುರಂದೆರವಿಠಲನ ಶಿರದಿ ೭

ಜತೆ –
ಬಾಯಲಿ ಬೆರಳಿಟ್ಟು ಸವಿಯುತ ನಿಂತಿಹ
ತೋಯಜಾಕ್ಷ ತಂದೆ ಪುರಂದರವಿಠಲ

ಗುರುತಂದೆ ಪುರಂದರವಿಠಲರ ಕೀರ್ತನೆಗಳು

ಗುರುತಂದೆ ಪುರಂದರವಿಠಲರ ಕೀರ್ತನೆಗಳು

೧
ಗಣಪತಿ

ರಾಗ ಆದಿತಾಳ

ಅಡಿಗಳಿಗೆರಗುವೆ ಧೂರ್ಜಟಿ ತನಯಾ
ಪಾಡುವೆ ನಿನ್ನ ಮುದದಿ ಮುನ್ನ ಪ

ಮೋದಕಹಸ್ತನೆ ಮೂಷಿಕಾರೂಢ
ಮುಂದೆ ನೀ ಬಾ ಬಾ ಗಜವದನ ೧

ಪಾರವ ಕಾಣದೆ ಭವದಿ ತತ್ತಳಿಪೆ
ಹರಿಯನು ತೋರೋ ಗಜವದನ ೨

ರಕ್ತಾಂಬರಧರ ಹರಿಯಪಾದದಲಿ
ರಕ್ತಿಯ ನೀಡೋ ಗಜವದನ ೩

ಪಾರ್ವತಿತನಯ ಪಾಶಾಂಕುಶಧರ
ಪಾವನಗಾತ್ರನೆ ಗಜವದನ ೪

ಗುರುತಂದೆ ಪುರಂದರ ವಿಠಲನ ದಾಸ
ವರವಿತ್ತು ಸಲಹೊ ಗಜವದನ ೫

೨
ಶ್ರೀಹರಿ

ರಾಗ : ಕಾಪಿ ರೂಪಕತಾಳ

ಇನ್ನು ದಯ ಬಾರದೇಕೋ ಕಣ್ಣಮುಂದೆ ತೋರ್ವುದಕೆ
ಸಣ್ಣವ ನಾನೆಲೊ ಪನ್ನಗಾಚಲವಾಸ ೧

ತೋರಲಿಲ್ಲವೇನೋ ಬಂದು ತ್ವರಿತದಿ ಕರಿಗಾಗಿ
ಮರೆವುದು ಸರಿಯೇನೋ ಗುರುವಂತರ್ಗತ ಕೃಷ್ಣ ೨

ಅರಿಯದ ಶಿಶುವಾದ ಧ್ರುವರಾಯ ಬನದಲಿ
ಇರುತಿರೆ ಬಂದು ಕಾದಿ ಬಾರೆ ಏಕೆನ್ನ ಮೊರೆ ಕೇಳೆ ೩

ಘನ್ನ ನೀನು ದೂತನಾಗಿ ನಿನ್ನವರಿಗಾಗಿ ಬಂದಿ
ಮನ್ನಿಸಿ ನೀ ಇಂದು ಎನ್ನಮುಂದೆ ಬಂದು ನಿಲ್ಲೋದಕೆ ೪

ಮಂದಹಾಸದಿಂದ ಈಗ ಓಡಿಬಾರೊ ಮುದ್ದು ರಂಗ
ಕಂದನಾದ ಗುರುತಂದೆ ಪುರಂದರವಿಠಲ ಕೃಷ್ಣ ೫

೩

ರಾಗ : ಕಾಪಿ ಆದಿತಾಳ

ಎನ್ನ ಮುಂದೆ ಬಂದು ನಿಂತು ನಲಿದಾಡೊ
ಸ್ವರ್ಣಗೆಜ್ಜೆಯನಿಟ್ಟು ಘನ್ನಮಹಿಮನೆ ೧

ಸಜ್ಜನರ ಹೃದಯಾಬ್ಜದಲಿರುವ
ಮಜ್ಜಿಗೆಕಳ್ಳನೆ ಹೆಜ್ಜೆನಿಕ್ಕುತಲಿ ೨

ಗೊಲ್ಲ ಮಕ್ಕಳಿಂದ ಗುಲ್ಲು ಮಾಳ್ಪ ಪಾದ
ಪಲ್ಲವ ತೋರಿಸೊ ಪುಲ್ಲಲೋಚನನೆ ೩

ಇಂದು ನೀನೆಗತಿ ಎಂದು ನಂಬಿದೆನೊ
ಇಂದಿರೆಯರಸ ಚಂದ್ರವದನನೆ ೪

ಗುರುತಂದೆ ಪುರಂದರವಿಠ್ಠಲರಾಯನೆ
ಪಾರಿಜಾತವ ತಂದ ವಾರಿಜನಾಭನೆ ೫

೪

ರಾಗ : ಕಮಾಚ್ ಆದಿತಾಳ

ಓಡಿಬಾರೊ ರಂಗಯ್ಯ ಬಾಡುವೆನೊ ನಿನಗಾಗಿ
ಬೇಡಿಕೊಂಬೆನೊ ನಿನ್ನ ನೋಡುವುದಕೀಗ ೧

ಕರದಲಿ ಧರಿಸಿಹ ಕಡಗ ಸರಪಳಿ
ಬೆರಳಿಗೆ ಉಂಗುರ ಮುರಳಿ ವಾದ್ಯದಿಂದ ೨

ಹೆಂಗಳ ಮಧ್ಯದಲಿ ತಿಂಗಳಂತೆ ಹೊಳೆಯುವ
ಮಂಗಳಾಂಗನೆ ನೀನು ನಗುವ ವದನದಿಂದ ೩

ಮಮತೆಯಿಂದಲಿ ಎನ್ನ ಮಮತೆಯ ಬಿಡಿಸಿ ನೀ
ಸುಮತಿಯ ಪಾಲಿಸೊ ಸೋಮಮೌಳಿ ಮಿತ್ರನೆ ೪

ವಿಜಯನ ರಥವ ಓಡಿಸಿದ ಚತುರ
ನಿಜಭಕ್ತ ಜನರ ಹೃದಯಾಂಬುಜ ಪಾದ ೫

ಕೋಟಿ ಮನ್ಮಥಾಕೃತಿಗೊಂಡ ಮನೋಹರಮೂರ್ತಿ
ಆಟಗಳಾಡಿದ ಸುರಚಕ್ರವರ್ತಿ ೬

ಕುರು ಸಭೆಯಲಿ ನಿಂತು ಹರಿ ನೀನೆ ಗತಿಯೆಂದು
ವೀರಪತ್ನಿ ಮೊರೆಯಿಡೆ ವರವಿತ್ತು ಸಲಹಿದ ೭

ಉದ್ದವಾದಿ ಜನರ ಬದ್ಧ ಶ್ರದ್ಧನಾಗಿ ನೀನು
ಉದ್ಧರಿಸಿದೆ ನಿನ್ನ ವಿಧ ವಿಧ ರೂಪದಿಂದ ೮

ವಿಧಿಭವ ಶಕ್ರಾದಿ ತ್ರಿದಶರಿಂದೊಡಗೂಡಿ
ಮೇದಿನಿಭಾರ ಕಳೆದ ಸಾಧುವಂದ್ಯನೆ ಕೃಷ್ಣ ೯

ಸರಸನಾದ ನೀನೆ ತೋರಿದೆ ಎನ್ನವರ ಕೂಡ
ವರವಿತ್ತು ಪೊರೆಯೋ ವಾರೆನೋಟದ ಕೃಷ್ಣ ೧೦

ಬೆಣ್ಣೆ ಕರದಿ ಕೊಂಡು ಕುಣಿಯು ತಲೆ ಬಂದ
ಸಣ್ಣ ಕೃಷ್ಣಯ್ಯನೆ ಸಣ್ಣವನಾದರು ೧೧

ನಿನ್ನ ಹೊರತು ಬೇರೆ ಅನ್ಯರಲಿ ನಾ ಬೇಡೆ
ಎನ್ನವರಲ್ಲಿಹ ಕೃಷ್ಣ ನಿನ್ನವರಾಣೆ ೧೨

ಗುರುತಂದೆ ಪುರಂದರವಿಠಲ ಮೂರಿತಿ ನಿನ್ನ
ಸ್ಮರಿಸುವೆನನುದಿನ ನೋಡೋ ಮಾರ್ಗ ತೋರುವುದಕೆ ೧೩

೫

ರಾಗ : ಸಾಕಿಮಟ್ಟು ಆದಿತಾಳ

ಕರುಣದಿ ಸಲಹೆನ್ನ ಕೃಷ್ಣ ನಿನ್ನ
ಶರಣರೊಳು ಸೇರಿಸೊ ಪ

ಮಾತಾ ಪಿತ ಗುರು ದೈವವು ನೀನೆ
ಭೀತಿಕೊಡುವ ಭವತ್ರಾತನು ನೀನೆ
ವಾತಾಶನ ಗಿರಿವಾಸನು ನೀನೆ
ವೀತಶೋಕ ಪರಮಾತ್ಮನು ನೀನೆ ೧

ಕ್ಷೀರಸಾಗರ ನಿವಾಸನು ನೀನೆ
ಧರಣಿದೇವಿಯ ಮೊರೆ ಕೇಳ್ದವ ನೀನೆ
ಸಿರಿ ಸಹ ಧರೆಯಲಿ ಬಂದವ ನೀನೆ
ವರ ವಸುದೇವನ ಜಾತನು ನೀನೆ ೨

ನಂದ ಗೋಪನಲಿ ಬಂದವ ನೀನೆ
ನಂದದಿ ಲೀಲೆಯ ತೋರ್ದವ ನೀನೆ
ಬಂದ ಖಳರನೆಲ್ಲ ಕೊಂದವ ನೀನೆ
ಮಂದೆ ಗೋವುಗಳ ಕಾದವ ನೀನೆ ೩

ಗೊಲ್ಲರ ಕುಟಿಗಳ ಪೊಕ್ಕವ ನೀನೆ
ಕಳ್ಳತನದಿ ಬೆಣ್ಣೆ ಕದ್ದವ ನೀನೆ
ಮೆಲ್ಲನೆ ಸತಿಯರ ಮುದ್ದಿಸಿದಿ ನೀನೆ
ಎಲ್ಲರ ಮುಂದೆ ಮಾಯ ತೋರಿದೆ ನೀನೆ ೪

ಯಮುನೆಯ ಉಸುಕಿನೊಳು ಆಡಿದೆ ನೀನೆ
ಕಾಮಿನಿಯರ ಬಟ್ಟೆ ಕದ್ದವ ನೀನೆ
ನೇಮದ ವ್ರತವ ಮುಗಿಸಿದಿ ನೀನೆ
ಭಾಮೆರ ಹಿಂದಟ್ಟಿ ತಿರುಗಿದೆ ನೀನೆ ೫

ಮುದದಿ ಮಡುವಿನೊಳು ಧುಮುಕಿದಿ ನೀನೆ
ಹೆದರದೆ ಫಣಿಪನ ಪೀಡಿಸಿದವ ನೀನೆ

ನಿಂದು ಫಣಿಯಲಿ ಕುಣಿದವ ನೀನೆ
ಸದನದಿಂದವನ ವೈಸಿದೆ ನೀನೆ ೬

ಬಿಲ್ಲು ಹಬ್ಬಕಾಗಿ ಪೊರಟವ ನೀನೆ
ಕುಲಗಜಗಳನೆಲ್ಲ ಸದೆದವ ನೀನೆ
ಮಲ್ಲರ ಮಡುಹಿದ ಮಲ್ಲನು ನೀನೆ
ನೆಲಕೆ ಮಾವನ ಒತ್ತಿ ಕೊಂದವ ನೀನೆ ೭

ದ್ವಿಜವ ಸಲಹಿದ ದ್ವಿಜಗಮನನು ನೀನೆ
ಗಜದ ಮೊರೆಯ ಕೇಳಿ ಬಂದವ ನೀನೆ
ವಿಜಯನ ರಥವ ಹೊಡಿಸಿದೆ ನೀನೆ
ಭಜಿಪ ಜನರ ಮನರಂಜಕ ನೀನೆ ೮

ಗುರು ತಂದೆ ಪುರಂದರವಿಠಲನು ನೀನೆ
ಗುರುಮಧ್ವಮತದಿ ಲೋಲ್ಯಾಡಿದವ ನೀನೆ
ಗುರುಸುತನ ತಂದು ಇತ್ತವ ನೀನೆ
ಕರುಣದಿ ಎನ್ನ ಸಲಹುವಿ ನೀನೆ ೯

೬

ರಾಗ : ಕಾಂಬೋದಿ ಜಂಪೆತಾಳ

ಗರಳಧರ ಗಿರಿವಾಸ ಗಾರುಮಾಡದೆ ಕಾಯೊ
ಗೌರಿವರನ ಪ್ರಿಯ ಗುರುಗಳಂತರಂಗ ಪ

ಸರಿಸಿಜೋದ್ಭವಪಿತನೆ ಸಾರಿದೆನೊ ತವಚರಣ
ಸೂರಿಗಳ ಹೃದಯಸ್ಥ ಶತಶಶಿತೇಜ ಅ.ಪ

ಕ್ಷೀರಾಂಬುಧಿಸುತಮುಖನೆ ಕ್ಷೀರಸಾಗರವಾಸ
ಕ್ಷೀರಾಬ್ಧಿಸುತೆಪ್ರಿಯ ಕ್ಷೀರಕೊಟ್ಟಳ ವೈರಿ
ಕ್ಷೀರಮಥನದಿ ತೋರ್ದ ಕ್ಷೀರಘಟಾಮೃತ ಮಾತ್ರ
ಕ್ಷೀರ ಉಣದಲೆ ಮಾಡು ಕ್ಷೀರ ಘೃತದಧಿಚೋರ ೧

ನಾಗಶಯನನೆ ದೇವ ನಾಗಭೂಷಣಪ್ರಿಯ
ನಾಗರಕ್ಷಕ ಕೃಷ್ಣ ನಾಗಮರ್ದನಸ್ವಾಮಿ

ನಾಗಧ್ವಜವೈರಿಪ್ರಿಯ ನಾಗಭವಪಾಶದಿ
ನಾಗವೇಣಿಯರರಸ ನೀಗಿಸೆನ್ನನುಬೇಗ ೨

ಗುರುತಾಗು ಎನಗಿಂದು ಪುರುಹೂತವಿನುತಾಂಘ್ರಿ
ಮರುತಾಂತರ್ಗತ ಕೃಷ್ಣ ಮನ್ಮನದ ಮಂದಿರದಿ
ಗುರುಸುತನ ತಂದಿತ್ತ ಗರ್ವರಹಿತನೆ ಎನ್ನ
ಗುರುತಂದೆ ಪುರಂದರವಿಠಲ ನೆಲಸಿಂದು ೩

೭

ರಾಗ : ಕಮಾಚ್ **ಆದಿತಾಳ**

ಚಿತ್ತದಲ್ಲಿ ಬಂದು ನಿಲ್ಲೋ ಮುತ್ತಯ್ಯನೆ ಪ

ಚಿತ್ತದಿ ಬಂದು ನಿಲ್ಲೊ ಚಿತ್ಸುಖದಾಯಕ
ಇತ್ತು ನಿನ್ನ ಪಾದಸೇವೆ ಸಲಹಲಿಕೆ ಅ.ಪ.

ಕರ್ಮರಹಿತನಾದ ಧರ್ಮರಕ್ಷಕನೆ
ಧರ್ಮನ ತಮ್ಮನಿಂದ ಜೀವರ ಪೊರೆವೊನೆ ೧

ಉನ್ಮತ್ತ ನಾನೆಂದು ಉಪೇಕ್ಷೆ ಮಾಡದೆ ಎನ್ನ
ಮನ್ಮಥಪಿತನೆ ನೀ ಮನ್ನಿಸಿ ಕಾವೋದಕೆ ೨

ಗಿರಿಜೆ ಅರಸ ನುತ ಗಿರಿಧರದೇವನೆ
ಗುರುವಂತರ್ಗತನಾದ ಮುರಳೀಧರ ಮಗುವೆ ೩

ಬಹಿರಂತರ್ಗತನಾದ ಅಹಿತಲ್ಪಶಯನನೆ
ಬಹುವಿಧವಾದ ತಾಪತ್ರಯದಿ ಮೋಚಿಪುದಕೆ ೪

ಶ್ವೇತದ್ವೀಪದಿ ದಿವ್ಯಪದಗಳನೀವಂತ
ಶ್ವೇತವಾಹನಮಿತ್ರ ಶಾಶ್ವತಪದವ ನೀಡೊ ೫

ಸಾಕಯ್ಯ ಸಾಕಯ್ಯ ಕೈವಲ್ಯದಾಯಕನೆ
ನಾ ಕಾಣೆ ನಿನ್ನ ಸರಿ ನಾಕಜನರ ಪಕ್ಷ ೬

ಮೂರು ಮೂರಾದ ಭಕ್ತಿಪಾಶದಲ್ಲಿ ಸಿಲುಕುವಂಥ
ಗುರುತಂದೆ ಪುರಂದರವಿಠಲ ದೊರೆಯೆ ನೀನು ೭

೮

ರಾಗ : ಸೌರಾಷ್ಟ್ರ ಆಟತಾಳ

ನೆಗೆದ ಹಲ್ಲುಗಳಿಂದ ನೆಲವ ಮೇಲೆ ತಂದ ಕೃಷ್ಣ ಕಾಯೊ
ಮೃಗಮಾನವ ರೂಪಧರಿಸಿ ಭಕ್ತನಕಾದ ಕೃಷ್ಣ ಕಾಯೊ ೨

ವಟುವಾಮನವಾಗಿ ಬಲಿಯ ವಂಚಿಸಿದ ಕೃಷ್ಣ ಕಾಯೊ
ಹಟದಿ ಕ್ಷತ್ರಿಯರ ಕುಲವ ಸವರಿದ ಕೃಷ್ಣ ಕಾಯೊ ೩

ಜಲಧಿ ದಾಟಿ ದಶಶಿರನ ತರಿದಂಥ ಕೃಷ್ಣ ಕಾಯೊ
ಖಳದಮನನಾದ ಚೆಲುವೆಯರ ಅರಸನೆ ಕೃಷ್ಣ ಕಾಯೊ ೪

ಲಲನೆಯರ ವ್ರತವ ಕೆಡೆಸಿ ಬೆತ್ತಲೆಯಾದ ಶ್ರೀಕೃಷ್ಣ ಕಾಯೊ
ಚೆಲುವ ಅಶ್ವವವೇರಿ ಧರ್ಮವ ನಿಲಿಸಿದ ಕೃಷ್ಣ ಕಾಯೊ ೫

ಮುಳುಗಿ ತತ್ತಳಿಸುವೆ ಭವಕಡಲೊಳು ನಾ ಕೃಷ್ಣ ಕಾಯೊ
ಛಲದಿ ಓಡಿಬಾರೊ ಮುಗುಳುನಗೆಯಿಂದೊಪ್ಪ ಕೃಷ್ಣ ಕಾಯೊ ೬

ಗುರು ಹೃದಯಾಬ್ಜವಾಸ ಗರ್ವರಹಿತನೆ ಕೃಷ್ಣ ಕಾಯೊ
ತರವಲ್ಲ ತರವಲ್ಲ ಧರೆಯೊಳು ಪಡುವುದು ಕೃಷ್ಣ ಕಾಯೊ ೭

ಭಕ್ತವತ್ಸಲನೆಂಬೊ ಬಿರುದುಳ್ಳ ಮಗುವೆ ನೀ ಕೃಷ್ಣಕಾಯೊ
ಭಕ್ತರ ಸಂಗದಿ ಇರಿಸಿ ನೀ ಎನ್ನನ್ನು ಕೃಷ್ಣ ಕಾಯೊ ೮

ಗುರುತಂದೆ ಪುರಂದರವಿಠಲ ರೂಪನಾದ ಕೃಷ್ಣ ಕಾಯೊ
ಕರುಣನೆಂಬ ಪೆಸರು ನಿನಗೆ ಬೇಕಾದರೆ ಕೃಷ್ಣ ಕಾಯೊ ೯

೯

ರಾಗ : ಕಾನಡ ಆದಿತಾಳ

ಜಾಡೆ ಮಾಡದೆ ಬಾ ಎನ್ನೊಡೆಯನೆ ದಯದಿ
ಓಡಿ ಬಾರೊ ನಿನ್ನ ನೋಡುವೆ ಮುದದಿ ೧

ಬೆಡಗಿನ ಪೀತಾಂಬರ ನಡುವಲಿ ಧರಿಸಿ
ಗುಡುಗುಡು ಓಡಿ ಬಾರೊ ಸಡಗರದಿಂದಲಿ ೨

ಬಡವರೊಡೆಯನೆ ನೀ ದುಡುಕು ಮಾಡುವುದುಂಟೆ
ಬೇಡಿದ ವರಗಳ ನೀಡುವ ದಾತನೆ ೩

ಗಡಿಗೆ ಮೊಸರನೆಲ್ಲ ಹುಡುಗರಿಂದಲಿ ಕೂಡಿ
ಕುಡಿದು ದೇಹದಲಿ ಚೆಲ್ಲಿದ ವೇಷದಿಂದ ೪

ಕಡಗೋಲು ಪಿಡಿದು ಉಡುಪಿಯಲಿ ಬಂದು ನಿಂತ
ಕಡಲಶಯನ ಗುರುತಂದೆ ಪುರಂದರವಿಠಲ ೫

೧೦

ರಾಗ : ನಾದ ನಾಮಾಕ್ರಿಯ **ಚಾಪುತಾಳ**

ತ್ವರಿತದಿ ಬಂದೆನ್ನ ಕಾಯೊ ಕೃಷ್ಣ ಪ
ತ್ವರಿತದಿ ಬಂದೆನ್ನ ಸೆರೆಯ ಬಿಡಿಸೊ ಈಗ
ಮೊರೆ ಹೊಕ್ಕವರನೆ ಕಾವ ಮುರಳೀಧರನೆ ದೇವ ಅ.ಪ

ಚಿನುಮಯಾನಂದರೂಪ ಚಿತ್ಸುಖ ಫಲವೀವ
ಮೀನಕೇತನ ಪಿತ ಮುನಿವಂದಿತ ಪಾದ
ಧನದ ಸಖನ ತಾತ ನವಯೌವನಾಕಾರ
ದಾನವ ಕುಲ್ವೈರಿ ದೀನ ರಕ್ಷಕ ಸ್ವಾಮಿ
ಕನಕಾದ್ರಿ ಸಮತೇಜ ಅನಿಲಾಂತರ್ಗತ ಕೃಷ್ಣ
ಜನನಾದಿ ಕ್ರಿಯೆಯಗಳ ನೆನೆವ ಮಾತ್ರದಿ ಮಾಳ್ಪ
ಘನನೀಲ ಮುಕುಂದ ಹರುಷದಿಂದ
ಮೀನನಾಗಿ ಬಂದೆ ವೇದವ ಕದ್ದ
ದನುಜನ ನೀಕೊಂದಿ ಅದನು ಚತು-
ರಾನನಗೆ ತಂದಿ ಮುದದಿಂದ
ಸುನಾಸಿರ ಮೊದಲಾದ ಅನಿಮಿಷ ಗಣದಿಂದ
ಅನುಗಾಲ ಸೇವಿತ ಸನಾತನ ಪುರುಷನೆ ೧

ಕರ್ಮವಿವರ್ಜಿತನೆ ಸುಕರ್ಮಾದಿಗಳಿಂದ
ಕರ್ಮ ದೇಹವ ಪಡೆದ ಮೌನಿಗಳ ಮನದಿ ಸೌ-
ದಾಮಿನಿಯಂತೆ ತೋರಿ ನೇಮದಿಂದಲಿ ಅವರ

ಕರ್ಮಪಾಶದಿ ಬಿಡಿಸಿ ಮರ್ಮದಿ ಪೊರೆವೊನೆ
ಧರ್ಮರಕ್ಷಕನಾದ ಯಮಧರ್ಮ ಮಿತ್ರನೆ
ಸಾಮಗಾನಪ್ರಿಯ ಸೋಮಾರ್ಕ ದ್ಯುತಿಭಾಸ
ಕಮನೀಯವಿಗ್ರಹದಿ ಹೊಳೆವ ಕೃಷ್ಣ
ಕೂರ್ಮನಾಗಿ ನೀ ಬಂದಿ ದೇವಾಸುರರ
ಸಮುದಾಯದಲಿ ನಿಂತಿ ಗಿರಿಯನೆತ್ತಿ
ಕೋಮಲಾಕೃತಿಯಗೊಂಡು ಯುವತಿಯಾಗಿ
ತಾಮಸರಿಗೆ ವಂಚಿಸಿ ಸುರರಿಗೆ ಅಮೃತವಿತ್ತ
ಕಮಲೋದ್ಭವಪಿತ ಸುಮನಸಾರ್ಚಿತ ಪಾದ ೨

ಕಡಲಶಯನ ಕೃಷ್ಣ ವಟದೆಲೆಯಲಿದ್ದು
ಪೊಡವ್ಯಾದಿ ಲೋಕಗಳ ಉದರದೊಳಗಿಟ್ಟು
ಗಿಡ ಮೊದಲಾದ ಸರ್ವ ಚರಾಚರದೊಳಗೆಲ್ಲ
ಎಡಭಾಗದಲಿ ನೀ ಮರುತಾಂತರ್ಗತನಾಗಿ
ಅಡಗಿ ಪ್ರದ್ಯುಮ್ನಾದಿ ಬಹುರೂಪಗಳಕೊಂಡು
ಬಿಡದೆ ಕ್ರಿಯೆಗಳನೆಲ್ಲ ಆಡಿಸುವ ದೊರೆಯೆನೀ
ಮಡದೇರಿಂದೊಪ್ಪುವ ದಯಾನಿಧಿ
ಅಡವಿ ಬೇರ ಮೆಲ್ಲುವ ಕ್ರೋಡನಾಗಿ
ಪೊಡವಿಯನೆತ್ತಿದ ದೈತ್ಯನ ಕೊಂದು
ಉಡಿಯಲಿ ಕರವಿಟ್ಟ ವರಹರೂಪಾ
ಮೂಡಲಗಿರಿವಾಸ ಸಡಗರದಿ ನಿನ್ನ
ಅಡಿಗಳ ಭಜಿಸುವ ದೃಢಭಕುತಿಯನಿತ್ತು ೩

ಪ್ರತಿಯಿಲ್ಲದ ಮೂರ್ತಿ ಪ್ರಕೃತ್ಯಾದಿ ಪುರುಷನೆ
ರತಿಪತಿಗಿಂತಲು ಅತಿರೂಪಲಾವಣ್ಯ
ಕೃತಿಯುಕ್ತನಾದ ಹೇ ಪತಿತಜನೋದಾರ
ಶ್ರುತಿ ಮೊದಲಾದ ಸರ್ವತತಿಗಳಿಗ [illegible]ಕರ
ಸುತಾದಿಗಳಿತ್ತು ಅತಿಸುಲಭದಿ ನೀನ
ಗತಿಯೆಂಬುವರಿಗೆ ಸದ್ಗತಿಯ ತೋರಿಸಿ ಕಾವ
ರೀತಿಯೆ ಬಿರುದುಳ್ಳ ಕೃಷ್ಣಾ ನಿನ್ನ
ಸ್ತುತಿಸಿ ಕೂಗಲು ಬಾಲ ಕಂಬದಿಂದ
ಅತಿ ಘೋರವಾಗುಳ್ಳ ರೂಪದಿ ಬಂದು
ದಿತಿಜ ನವನ ಕರುಳ ತೆಗೆದೆ ನೀ

ಮತಿಯಿತ್ತು ಸಲಹೆನ್ನ ಕುಮತಿಯ ಬಿಡಿಸಿ ವಿ-
ಸ್ಮೃತಿಯ ತೊರೆಯೊ ಹೇ ಸುಸ್ಮಿತವದನನೆ ೪

ದುರ್ಗ ವೈಕುಂಠನಿಲಯ ದುರ್ಗಮ ಪುರಷನೆ
ದುಗ್ಧಾಬ್ಧಿತನಯಳ ವಕ್ಷದೊಳಿಟ್ಟವನೆ
ಖಗರಾಜಗಮನನೆ ತ್ರಿಗುಣ ರಹಿತ ಪ್ರೇಮ
ನಗುಮುಖ ಮಗುವೆ ನೀ ಗಗನ ಸದೃಶ ಕಾಯ
ಯುಗಯುಗದಲಿ ನೀನು ಸುಜನ ರಕ್ಷಣೆಗಾಗಿ
ಬಗೆಬಗೆ ರೂಪದಿ ಬಂದು ಮೆರೆವ ಕೃಷ್ಣ
ಮಗನಾಗಿ ನೀ ಬಂದಿ ಅದಿತಿಯಲಿ
ಯುಗಳೊಂದು ಭುವಿ ಬೇಡಿದಿ ಅದನುಕೊಂಡು
ನಗಧರ ನೀ ಬೆಳೆದಿ ಬಲಿಯ ಒತ್ತಿ
ಬಾಗಿಲ ನೀ ಕಾಯ್ದೆ ಭಕ್ತವತ್ಸಲ
ಸೊಗಸಾಗಿ ಫಣೆಯಲಿ ಮೃಗಮದ ಬೊಟ್ಟಿಟ್ಟಿ
ಅಗಣಿತಮಹಿಮನೆ ಭೃಗು ಮೆಚ್ಚಿದ ಶಾಂತ ೫

ಅರುಣಕಿರಣದಿಂದ ಹೋಲುವ ಕೆಂದಾವರೆಗಳು
ತಿರಸ್ಕರಿಸುವ ದಿವ್ಯ ಚರಣದಿಂದೊಪ್ಪುವ
ಕರಣಾದಿಗಳನೆಲ್ಲ ನಿನ್ನಧೀನವ ಮಾಡಿ
ಗಿರಿವನಾದಿಗಳಲಿ ಚಿರಕಾಲ ತಪ ಗೈವ
ಸುರಮುನಿ ಜನರನು ಕರುಣಾದಿ ಕಾವನೆ
ಸಿರಿಭೂಲೋಲನಾದ ತರಳಕೃಷ್ಣನೆ ನೀ ಭೂ-
ಸುರನಾಗಿ ನೀರಬಂದಿ ಭೂಭುಜರ
ಪರುಶುಗೊಂಡು ಕಡಿದಿ ಮೇದಿನಿಯೊಳು
ಚರಣದಿಂದ ಮೆರೆದಿ ವಿಪ್ರರಿಗೆ
ಧರೆಯ ದಾನವ ಮಾಡಿದಿ ದೀನರಕ್ಷಕ
ಉರದಿ ಕೌಸ್ತುಭವಿಟ್ಟ ಉರಗಾದ್ರಿವಾಸನೆ
ಶರಣೆಂಬುವರ ಕಾವ ಬಿರುದುಳ್ಳ ದೊರೆಯೆ ನೀ ೬

ತ್ರಿಜಗಪಾವನಳಾದ ಸುರಗಂಗೆ ಜನಕನೆ
ಭುಜಚತುಷ್ಟಯದಿ ವಿರಾಜಿಸುತಿಪ್ಪನೆ
ರಾಜೀವನಯನನೆ ನಿಜಭಕ್ತ ಜನಪ್ರಿಯ
ದ್ವಿಜಗಣಪಾಲನೆ ಅಮೃತ ವಿಗ್ರಹನೆ

ಗಜಪತಿವರದನೆ ಅನಾಥ ಜನರ ನಾಥ
ಋಜುಗಣಾಧಿಪರಿಂದ ನಿಜಪೂಜೆಗೊಂಬನೆ
ರಜನೀಚರರ ಅರಸನ್ನ ಕೊಲ್ಲುವುದಕೆ
ಅಜಿನ ವಲ್ಕಲಗಳನು ಧರಿಸಿ ನೀ
ಶ್ರೀ ಜನನಿಯ ಕದ್ದ ರಕ್ಕಸನ್ನ
ಭಂಜಿಸಿ ಆತನ್ನ ಸೀತೆಯ ತಂದಿ
ಜರ್ಜರ ಭವದಿಂದ ಸಜ್ಜನರ ಪಾಲಿಪ
ಧೂರ್ಜಟಿವಂದಿತ ರಜ ತಮಕೆ ಅತಿದೂರ ೭

ಮುಚುಕುಂದವರದನೆ ಅದ್ಭುತಾನಂತನೆ
ವಿಚಿತ್ರಮಹಿಮನೆ ವಿಪ್ರ ದ್ವೇಷಣೆಯೆಂಬ
ನೀಚಸ್ವಭಾವದಿ ಉನ್ಮತ್ತನಾಗಿರುವ
ಕೀಚಕ ಮೊದಲಾದ ದೈತ್ಯರಿಂದ ಭುವಿಯ
ಮೋಚಿಸುವುದಕಾಗಿ ಬಂದು ಜನಿಸಿದಿ ನೀ
ಪಚ್ಚೆಯ ತೊಟ್ಟಿಲೊಳು ಹರುಷದಿ ಗೋಪಿ
ಮೆಚ್ಚಿ ನಿನ್ನ ನೋಡಲು ನಂದಗೋಪ
ಆಶ್ಚರ್ಯ ಪಡುತಿರಲು ಗೋಪಿಜನರು
ಅಚ್ಚರಿ ನಿನ್ನ ತೂಗಲು ಅವರ ಕಂಡು
ಹೆಚ್ಚಾಗಿ ನೀ ನಗೆ ಎಲ್ಲ ಮೈಮರೆತರು
ವಿಚಾರರಹಿತರಾಗಿ ಸಚ್ಚಿದಾನಂದ ನಿನ್ನ
ಅರ್ಚಿಪರು ಮನದಲಿ ಸಂಚರಿಸುತಿಪ್ಪನೆ ೮

ಗೋಕುಲಜನಪ್ರಿಯ ಆಕಳ ಕಾದವನೆ ಅ
ನೇಕಭಕ್ತರನೆಲ್ಲ ಸಾಕುವ ಸುಖಪೂರ್ಣ
ಪಾಕಶಾಸನನ ಗರ್ವ ಗಿರಿಯ ನೆತ್ತಿ ಕಳೆದು
ಕಾಕುಜನರ ಕೊಂದ ಶೋಕನಾಶನ ಕೃಷ್ಣ
ಸಂಕಟದಿಂದ ನೊಂದು ಕೌರವರಿಂದ
ಆ ಕುಂತಿಸುತರ ಕಾದ ಅಕ್ರೂರವರದನೆ
ಲೋಕದವರಿರುವ ರೀತಿಯ ಕಂಡು
ಸಕಲವೇದಾರ್ಥವ ಬುದ್ಧನಾಗಿ
ಬೇಕೆಂದು ಕೆಡಿಸಿದವನೆ ಬೆತ್ತಲೆಯಾಗಿ
ಆ ಕನ್ಯೆಯರೆಲ್ಲರ ವ್ರತವ ಕೆಡಿಸಿ
ಶಂಖ ಚಕ್ರ ಗದಾ ಸಾರಂಗ ಮೊದಲಾದ
ಅಂಕಿತಗಳ ಒಡೆಯ ವೆಂಕಟಾಚಲವಾಸ ೯

ವ್ಯಾಳಶಯನ ಕೃಷ್ಣ ಲಾಲಿಸಿನಿನ್ನ ಸದಾ-
ಕಾಲ ಸ್ತುತಿಗಳಿಂದ ಪಾಡಿ ಕುಣಿವರಿಗೆ
ಸಾಲೋಕ ಮೊದಲಾದ ಸಾಮ್ರಾಜ್ಯ ಪದಗಳ
ಸುಲಭದಿಂದಲಿಕೊಟ್ಟೆ ಅವರಲ್ಲೆ ಸತತವು
ನಲಿವ ಎನ್ನಯ್ಯನೆ ನೆನೆವ ಮಾತ್ರದಿ ಬಂದು
ಛಲದಿ ತೊಡರನೆಲ್ಲ ಕಳೆದು ಒದಗುವ
ಬಲುಮೆಯುಳ್ಳ ವೀರ ಭುವಿಯೊಳುಳ್ಳ
ಕಲುಷಗಳ ನಿವಾರ ಮಾಡುವುದಕೆ
ಚೆಲುವ ಅಶ್ವವನೇರಿ ಬಂದು ಧರ್ಮ
ನೆಲಸಿದ ಉದಾರ ಪಾಮರೋದ್ಧಾರ
ಸುಲಲಿತ ಮಹಿಮನೆ ಬಲಭದ್ರಪ್ರಿಯನೆ
ಪಾಲಿಸೋ ಎನ್ನ ನೀ ಪರಮ ಸುಂದರಮೂರ್ತಿ ೧೦

ಚಿರಕಾಲ ಧರೆಯೊಳು ಇರುವುದು ತರವಲ್ಲ
ಕರಕೊಂಡು ಸಲಹುವ ಕರುಣನೆಂಬ ಪೆಸರ
ಧರಿಸಿ ಇರುವ ನಿನ್ನ ಚರಣವೆ ಗತಿಯೆಂಬೆ
ವರವಿತ್ತು ಪೊರೆಯುವ ವಿಭುವೆ ನಿನ ಮನಕೆ
ಸರಿಬಂದಂತೆ ಮಾಡು ಪರಮ ದಯಾನಿಧಿ
ಧರೆಯೊಳು ಸ್ವಜನರು ಯಾರು ಇಲ್ಲವೊ ಎನಗೆ
ಅರಿಯೆನಾ ಅನ್ಯರ ನಿನ್ನ ಹೊರತು
ಸುರ ಮೊದಲಾದ ಅಮರರು ಸೇವಿಪಪಾದ
ದುರಿತ ಪಾರಂಪರದಿಂದಲಿ ಎನ್ನ
ತ್ವರಿತದಿ ಉದ್ಧಾರ ಮಾಡಿಸೋ ಧೀರ
ಗುರು ಹೃದಯನಿವಾಸ ಗರ್ವರಹಿತ ಸ್ವಾಮಿ
ಗುರು ತಂದೆ ಪುರಂದರವಿಠಲ ದೊರೆಯೇ ನೀನು ೧೧

೧೧

ರಾಗ : ನಾಟಿ ಕುರಿಂಜಿ **ಆದಿತಾಳ**

ದಯಾರ್ಣವಾ ದಯಬಾರದ್ಯಾತಕೋ ಪ
ಲಯವಿವರ್ಜಿತ ಯಶೋದೆಯ ಕಂದನೆ ಅ.ಪ

ಮಾಯಾಪಾಶದಿಂದ ಎನ್ನ ಉಪಾಯದಿಂದಲಿ ನೀನು
ಕಾಯಬೇಕಲ್ಲವೆ ತೋಯಜಾಕ್ಷನೆ ೧

ಮಾನಿನಿಯರರಸೆ ಮನ್ನಿಸಿ ಸಲಹೊ
ದಾನವಾಂತಕನೆ ಹೇ ದೀನಜನೋದ್ಧಾರ ೨

ಗುರು ತಂದೆ ಪುರಂದರವಿಠಲ ರಾಯನೆ
ಗುರುಹೃದಯದಿ ನಿತ್ಯತೋರಿಸೊ ಮೂರುತಿಯ ೩

೧೨

ರಾಗ : ಶಂಕರಾಭರಣ ರೂಪಕತಾಳ

ನಾರಿ ರುಕ್ಮಿಣಿ ಪ್ರಾಣಪ್ರಿಯನೆ ಜ್ಞಾನ ನೀಡುವ ಪ

ಯಾರು ಕಾವರಪಾರಮಹಿಮನೆ
ದೂರಮಾಡದೆ ದೂರುವ ಎನ್ನನು
ಕರುಗಳನ್ನ ವನದಿ ಕಾದ
ಮೂರುತಿಯೆ ನೀ ಮುಂದೆನಿಂತು
ಸೇರಿಸೆನ್ನನು ನಿನ್ನ ಪಾದದಿ
ಸಾರಭೂತ ನಾದ ವಿಶ್ವನೆ ಅ.ಪ

ಅಜನಪಿತ ವಿಜಯಸೂತ ಭಜನೆಮಾಳ್ಪ ಸುಜನಪ್ರಿಯ
ಸೃಜಿಸಿಕಾವ ತ್ರಿಜಗದೊಡೆಯ ವ್ರಜದಿಬಂದ ಅಜಿತನಾಮಕ
ಕುಂಜವನದಿ ನಿಂತು ಬಹಳ ಕುಜನರ ಬಿಡದೆ ಕೊಂದೆ
ಕಂಜನಾಭ ಕೃಷ್ಣ ಭವದಿ ಅಂಜದಂತೆ ಮಾಡಿ ಸಲಹೊ ೧

ಕಂಗೆಟ್ಟವರ ಹಿಂಗದೆ ಕಾವ ತುಂಗವಿಕ್ರಮ ಗಂಗಾಜನಕ
ಮಂಗಳಪ್ರದ ಮಂಗಳಾಂಗನೆ ಅಂಗನೇರಲಿ ಸುಂಕ ಕೇಳಿದ
ಚಿಗುರು ತುಳಸಿಹಾರವಿಟ್ಟ ತ್ರಿಗುಣರಹಿತ ಅಪ್ರಮೇಯ
ಪೊಗಳಿ ಪಾಡೋ ವರವನಿತ್ತು ಯುಗಳಪಾದ ತೋರಿಸೀಗ ೨

ನಂದನಂದನ ಸುಂದರಾನನ ಮಂದಹಾಸನೆ ಮಧುರವಾಚ್ಯನೆ
ಸಿಂಧುಶಯನ ಕಂದ ಕೃಷ್ಣನೆ ಅಂದವಾಗಿ ನೀ ಬಂದು ಎನ್ನವರ
ಹೃದಯಪೀಠದಿ ಸದನಮಾಡಿ ಮೋದದಿಂದಲಿದ್ದು ಒಲಿದು
ಪಾದದರ್ಶನ ತೋರೊ ಗುರುತಂದೆ ಪುರಂದರವಿಠಲ ಬೇಗ ೩

೧೩

ರಾಗ : ಅಸಾವೇರಿ ಆದಿತಾಳ

ನಿಲ್ಲದೆ ಕ್ರಿಯೆಗಳು ಆಗುವುದುಂಟೆ
ಎಲ್ಲ ತತ್ವೇಶರಿದ್ದು ಗೊಲ್ಲರೂಪನೆ ನೀ ಪ

ಹುಲ್ಲು ಮೊದಲು ವಾಣಿವಲ್ಲಭಾಧಿ ಸರ್ವ
ಕೆಲ್ಲ ಆಧಾರದ ಮಲ್ಲಮರ್ದನ ನೀ ಅ.ಅಪ

ಚಿತ್ತನಿಯಾಮಕ ಚಿತ್ತಾಭಿಮಾನಿ ನೀ
ಚಿತ್ತದಲಿ ಚಲಿಸೆ ಚಲಿಸುವೆನಲ್ಲದೆ
ಚಿತ್ತದಲಿ ಬಂದು ನಿಲ್ಲೊ ಚಿತ್ಸುಖದಾಯಕ
ಚಿತ್ತಜನಯ್ಯ ವಿಚಿತ್ರ ಮಹಿಮನೆ ನೀ ೧

ಅಂಬರ ವಾಯು ತೇಜಾಂಬು ಮೇದಿನಿಯೊಳು
ತುಂಬ ಇರುತಿಹ ತುಂಬುರಾದಿ ವಂದ್ಯ
ಅಂಬುಜೋದ್ಭವಾದಿ ಅಂಬರವಾಸಿಗಳ
ತುಂಬುದೇಹದಿ ಬಹು ಸಂಭ್ರಮಮಾಳ್ಪನೀ ೨

ಯಾರು ಅರಿಯದೆ ಅವರೊಳುನಿಂತು ಸ-
ಮೀರನಿಂದೊಡಗೂಡಿ ನಡಿಸಿ ಕರ್ಮಗಳ
ಗರ್ವರಹಿತನಾಗಿ ಮೆರೆವ ಎನ್ನಯ್ಯನ್ನೆ
ಗುರುತಂದೆ ಪುರಂದರವಿಠಲ ಮೂರುತಿಯೆ ನೀ ೩

೧೪

ರಾಗ : ಆನಂದಭೈರವಿ ರೂಪಕತಾಳ

ಪಾಡಿರಿ ಕುಣಿದಾಡಿರಿ ಪವನವಂದಿತನ ನೋಡಿರಿ
ಪಂಡರಿರಾಯನ ಗುಣಗಳ ಅನುದಿನ ಪಾಡಿರಿ ಕುಣಿದಾಡಿರಿ ಪ

ಮೀನರೂಪದಿ ಬಂದು ನಿಗಮವ ತಂದನ
ಮನಮೋಹನ ಶಾಮಸುಂದರನ
ಮನಮೋಹನ ಶಾಮಸುಂದರ ರೂಪದಿ
ಮನದಲಿ ನಲಿವೊ ಎನ್ನಯ್ಯನ ೧

ಕೂರ್ಮಾಕೃತಿಯಗೊಂಡು ಗಿರಿಯ ಬೆನ್ನಲಿ ಇಟ್ಟ
ಅಮಿತ ವಿಕ್ರಮನಾದ ಅಚ್ಯುತನ
ಅಮಿತ ವಿಕ್ರಮನಾಗಿ ಸುರರಿಗಮೃತವನಿತ್ತು
ಸಮಯಕೆ ಒದಗುವ ಸುಂದರನ ೨

ವರಹರೂಪದಿ ಬಂದು ಧರೆಯಮ್ಯಾಲೆ ತಂದ
ಸುರಮುನಿಸೇವಿತ ಶಾಶ್ವತನ
ಸುರಮುನಿಸೇವಿತ ಸುಂದರ ರೂಪನ
ಅರಮನೆಯಲಿ ನಿತ್ಯ ನೋಡುತಲೆ ೩

ನರಮೃಗರೂಪದಿ ತರಳನ ಪೊರೆದನ
ಸಿರಿಸಹ ನಲಿವ ಶ್ರೀಕೃಷ್ಣಯ್ಯನ
ಸಿರಿಸಹ ನಲಿಯುತ ವರಮಂದಿರದಿ ತನ್ನ
ಶರಣರ ಸಲಹುವ ಕೃಷ್ಣಯ್ಯನ ೪

ಬಲಿಯನು ವಂಚಿಸಿ ನೆಲವ ಅಳೆದನ
ಒಲಿಯುತ ಭಕ್ತರ ಸಲಹುವನ
ಒಲಿಯುತ ಭಕ್ತರ ಸಲಹಿ ತನ್ನವರ
ಬಲದಲಿ ನಲಿವ ಶ್ರೀಕೃಷ್ಣಯ್ಯನ ೫

ಭಾರ್ಗವ ತಾನಾಗಿ ನೃಪರ ಸದೆದನ
ಭೃಗುಮೆಚ್ಚಿದ ನಿತ್ಯಮಂಗಳನ
ಭೃಗುಮೆಚ್ಚಿದ ನಮ್ಮ ಮುದ್ದು ಕೃಷ್ಣಯ್ಯನ
ನಗುಮುಖದಂದವ ನೋಡುತಲೆ ೬

ದಶರಥಸುತನಾಗಿ ದಶಮುಖಭಂಜನನ
ಶಶಿಮುಖಿಸೀತೆಯ ತಂದವನ
ಶಶಿಮುಖಿರುಕ್ಮಿಣಿ ರಮಣನಾದ ಎನ್ನ
ಶಿಶುರೂಪ ಕೃಷ್ಣನ ಸ್ಮರಿಸುತಲಿ ೭

ವನಿತೇರ ವ್ರತವನು ಕೆಡಿಸಿದ ವೈದ್ಯನ
ಬಣ್ಣದ ಕುದುರೆಯನೇರಿದನ
ಬಣ್ಣದ ಕುದುರೆಯನೇರಿದ ಕೃಷ್ಣನ
ಸಣ್ಣಚರಣವ ಧ್ಯಾನಿಸುವ ೮

ಉಡಿಗೆಜ್ಜೆ ಸರಪಳಿ ಕಾಲ್ಗೆಜ್ಜೆಯನಿಟ್ಟು
ದುಡುದುಡು ಓಡಿಬಂದು ಕುಣಿಯುವನ
ದುಡುದುಡು ಓಡಿ ಆ ದುಷ್ಟ ಕಾಳಿಂಗನ
ಪೆಡೆಯ ಮೇಲೆ ನಿಂತು ಆಡಿದನ ೯

ಪಂಡರಿರಾಯನ ಅಂಡಜ ರಮಣನ
ಕುಂಡಲಿ ಮಧ್ಯ ವಿರಾಜಿತನ
ಕುಂಡಲಿ ಮಧ್ಯ ವಿರಾಜಿಸುತ ನಿತ್ಯ
ತೊಂಡರಿಗೊದಗುವ ಕೃಷ್ಣಯ್ಯನ ೧೦

ಗುರುತಂದೆ ಪುರಂದರವಿಠಲರಾಯನ
ನಿರುತ ಎನ್ನವರಲಿ ಇಪ್ಪವನ
ನಿರುತ ಎನ್ನವರಲಿ ಇದ್ದೆನ್ನ ಸಲಹುವ
ತರಳರೂಪವಗೊಂಡ ಕೃಷ್ಣಯ್ಯನ ೧೧

೧೫

ರಾಗ : ವಸಂತ ಆದಿತಾಳ

ಬಂದಾ ನಮ್ಮ ಮನೆಗೆ ಪ

ಇಂದುವದನ ಮಕರಾಂಕನಾದನ ಪಿತ ಅ.ಪ

ನಂದನಕಂದನು ಸುಂದರವದನನು
ಇಂದಿರೆಯರಸ ಗೋವಿಂದ ಮುಕುಂದನು ೧

ಕಂದ ಧ್ರುವರಾಯಗೆ ಚಂದದಿಂದಲಿ ಒಲಿದು
ಎಂದು ಕುಂದದ ಪದಾನಂದದಿ ಇತ್ತ ಕೃಷ್ಣ ೨

ಗೊಲ್ಲರ ಮನೆ ಪೊಕ್ಕು ಎಲ್ಲಾ ಗೋರಸ ಮೆದ್ದು
ಚೆಲ್ಲಿ ಮೊಸರನೆಲ್ಲ ಗುಲ್ಲನೆ ನಗುತಲಿ ೩

ಕೆಟ್ಟ ಕಾಳಿಂಗನ ಮೆಟ್ಟಿ ತುಳಿದ ಉತ್
ಕೃಷ್ಟಮಹಿಮ ಪರಮೇಷ್ಠಿ ಜನಕ ಕೃಷ್ಣ ೪

ಮೂರ್ಜಗಗಳ ತನ್ನ ಬೊಜ್ಜೆಯೊಳಿಟ್ಟ ಉಡಿ
ಗೆಜ್ಜೆಯಿಂದೊಪ್ಪುವ ಸಜ್ಜನ ಶಿರೋಮಣಿ ೫

ಕಪ್ಪು ಮೈಯನವನು ಒಪ್ಪುವ ಕಂದರ್ಪನ
ತಪ್ಪೆಲ್ಲ ಮನ್ನಿಸುವ ಅಪ್ಪ ತಿಮ್ಮಪ್ಪನು ೬

ಕರುತುರುಗಳ ಕಾದು ಮುರಳಿಗಾನ ಮಾಡುವ
ಗುರುತಂದೆ ಪುರಂದರವಿಠಲ ದೊರೆಯು ತಾನೆ ೭

೧೬

ರಾಗ : ಭೂಪಾಳ ಅಟ್ಟತಾಳ

ಬಂದು ಬಳಿಗೆ ಇಂದು ತೋರಿದ
ನಂದನಂದನ ಮಂದಹಾಸದಿ
ಅಂದುಮಾಡಿದ ಪೂರ್ವಪುಣ್ಯಗಳು
ಇಂದು ಫಲವಾಗಿತೊ ಎನಗೆ ಪ

ಮರೆಯದೆನ್ನ ಪೊರೆವ ಕೃಷ್ಣ
ಮೂರುತಿಯು ಬಂದನೀಗ
ತರಳಕೃಷ್ಣನ ಚರಣಯುಗಳವ
ಗುರುಗಳಿಂದ ನಾ ನೋಡಿದೆ ೧

ಮನದಿ ತೋರುವ ಮದನನಯ್ಯನ
ಗಾನಲೋಲನ ಗುಣವ ಪಾಡುವ
ಘನವ ಬೇಡಿದೆ ಪಾದಕೆರಗುತ
ಎನ್ನ ಗುರುಗಳ ಕರುಣದಿಂದ ೨

ಘನ್ನಗುರುಗಳ ಕರುಣೆಯಿಂದ
ಚೆನ್ನವಾಗಿ ಫಲಿತವಾಯಿತು
ಕನ್ನೆಯರರಸನು ದಯದಿನೋಡಲು
ಧನ್ಯವಾಯಿತೆನ್ನ ಜನ್ಮವು ೩

ಒಂದು ಬಲದಲಿ ನಿಂತು ನಲಿದಾ
ನಂದವಿತ್ತನು ಇಂದಿರೇಶನು

ಬಂಧಮೋಚಕ ಭಕ್ತವತ್ಸಲ
ಕಂದ ಒಲಿದನು ಎನಗೆ ಈಗ ೪

ಗುರು ದ್ವಂದ್ವ ಸರೋಜದಲ್ಲಿಹ
ಗರ್ವರಹಿತ ಗುರುತಂದೆ
ಪುರಂದರ ವಿಠಲನ ಹರುಷದಿ
ಕರವ ಪಿಡಿದೆ ನಿಶ್ಚಯ ೬

೧೭

ರಾಗ : ಮೋಹನ **ಆದಿತಾಳ**

ಬಾ ಭಕ್ತರ ನಿಧಿಯೇ ಪ

ಬಾ ಬಾ ಪಂಕಜಮಿತ್ರ ತೇಜದಿಯುಕ್ತ ದಿವ್ಯ
ಶೋಭಾಯಮಾನ ಸತ್ಯಭಾಮವಲ್ಲಭ ಕೃಷ್ಣ ಅ.ಪ

ಲಾಲಿಸಿದವರಿಗತಿ ಕರುಣದಿ
ಮೇಲಾದ ಪದವೀವೆ
ಕಾಲಯವನಾದಿ ಭೂಪಾಲರಿಂದಲಿ ನೊಂದ
ಶೈಲಮಂಡಿತ ಭೂಮಿದೇವಿಯ ಮೊರೆ ಕೇಳಿ
ಬಾಲರೂಪದಿ ಗೋಕುಲದಲಿ ತೋರಿ ನೀ
ಬಾಲರ ಸಹ ಕರುತುರುಗಳನೆ ಕಾದಿ
ಕೊಳಲನೂದುತ ಗೋಪಿ ಸತಿಯರ ಮೋಹಿಸಿದಿ
ಹಲವು ದೈತ್ಯರನೆಲ್ಲ ಸುಲಭದಿ ಕೊಂದೆನೀ
ವಲ್ಲಬೇರು ಪತಿಸಹ ಇರುವ ಸ್ಥಳಕೆ ಪೋಗಿ
ಗುಲ್ಲನೆ ನಗುತ ಅವರ ಮಾನವ ಕಳೆದ ಕೃಷ್ಣ ೧

ಲೀಲಾಮಾನವರೂಪ ಸುಜನರ
ಪಾಲಿಪ ನಿರ್ಲೇಪ
ಶೈಲ ಗೋವರ್ಧನ ಲೀಲೆಯಿಂದೆತ್ತಿ ಗೋ
ಪಾಲಾದಿ ಸರ್ವಪಶುಗಳನು ರಕ್ಷಿಸಿದಿ
ಕೋಲು ಕಂಬಳಿಯ ಧರಿಸಿನೀ ಮುದದಿ
ಬಾಲರ ಸಹ ವನದಿ ಆಡುತಲಿ ಬಂದಿ
ಕಾಳಾಹಿ ನೀರೊಳಗೆ ಇರುವ ಸ್ಥಳಕೆ ಪೋಗಿ

ಜಲವ ಸವಿದು ಗೊಲ್ಲಮಕ್ಕಳು ಸೊಕ್ಕಲು ನೀ
ಒಲಿದು ಬಾಲಕರನೆಬ್ಬಿಸಿದಿ ನೆಲದಿ ನೀ
ಛಲದಿಂದ ಯಮುನೆಯ ನೀರೊಳಗೆ ಧುಮುಕಿ
ಕಾಳಿಯನ ಸತಿಯರು ಪತಿ ಪ್ರಾಣಬೇಡುತಿರೆ
ತುಳಿದು ಅವನ ವರುಣಾಲಯಕೆ ಗೈದ ಕೃಷ್ಣ ೨

ವಾರಿಜ ದಳನೇತ್ರ ಸುರನುತ
ಚಾರು ಚಿನ್ಮಯಗಾತ್ರ
ವಾರಿಧಿಯೊಳು ಪೊಕ್ಕುವೇದವ ಕಿತ್ತು ತಂದಿ
ವಾರಿಜೋದ್ಭವಗಿತ್ತಿ ವರ ಮತ್ಸ್ಯರೂಪದಿ
ಗಿರಿಯ ಪೊತ್ತುನೀ ಅಮೃತವ ಬೀರಿದಿ
ಧರೆಯ ಮೇಲಕೆ ತಂದಿ ವರಾಹ ರೂಪದಿ
ಘೋರ ರೂಪದಿ ಬಂದು ಹಿರಣ್ಯನ ಹೀರಿ ಕೊಂದ
ಧರಣಿ ದಾನವ ಬೇಡಿ ಬಲಿಯನ್ನು ವಂಚಿಸಿದಿ
ಕರದಿ ಪರಶುಗೊಂಡು ನೃಪರ ಸದೆದಿ ನೀ
ತರುಣಿಯ ಮತ್ತೆ ತಂದಿ ನವನೀತ ಕಳ್ಳನೇ
ನಾರಿಯರ ಸೋಲಿಸಿದಿ ತೇಜಾರೂಢನಾಗಿ ಎನ್ನ
ಗುರುತಂದೆ ಪುರಂದರವಿಠಲ ಮೂರುತಿ ಕೃಷ್ಣ ೩

೧೮

ರಾಗ : ಶಂಕರಾಭರಣ **ಚಾಪುತಾಳ**

ಭಜಿಸು ಕೃಷ್ಣಯ್ಯನ ಭಜಿಸು ಪ

ಭಜಿಸು ಮನವೆ ಗೋಪಿಸುತನ । ನಮ್ಮ
ಮೂರ್ಜಗ ದೊರೆ ಕಂದ ಕೃಷ್ಣನ । ಆಹಾ
ಋಜುಗಣಾಧಿಪನಿಂದ ಪ್ರತಿ ಜೀವರಲ್ಲಿಪ್ಪ
ಅಜಜನಕನಾದ ವ್ರಜಜನಪ್ರಿಯನ ಅ.ಪ

ಚಿತ್ತಜನಯ್ಯ ನಮ್ಮ ರಂಗ । ಸಾಧು
ಚಿತ್ತ ಕುಸುಮವಾಸೋತ್ತುಂಗ । ಅಹಾ
ಎತ್ತು ಇರುವ ಕರುಣಾಪಾಂಗ । ದುಷ್ಟ
ದೈತ್ಯಜನರ ಮದಭಂಗ । ಆಹಾ

ಮುತ್ತಿನಹಾರ ಪದಕ ಕೌಸ್ತುಭವನಿಟ್ಟ
ಮುತ್ತಯ್ಯನ ನಿತ್ಯಚಿತ್ತದಿ ನೆನೆಯುತ ೧

ಆನಕದುಂದುಭಿ ಸುತನ । ಗೋಪ
ವನಿತೆಯರಾಟದಲಿಪ್ಪವನ । ವೇಣು
ಗಾನದಿ ಜಗವ ಮೋಹಿಪನ । ತನ್ನ
ನೆನೆವರ ಮನದಲ್ಲಿಪ್ಪವನ । ಅದ
ತನು ಮೊದಲಾದ ಕರಣಾದಿಗಳನೆಲ್ಲ
ಘನಮಹಿಮನ ದಿವ್ಯ ಚರಣಕೊಪ್ಪಿಸಿ ನೀ ೨

ದೇವವರೇಣ್ಯನು ಆತ । ಮತ್ತು
ಭವ ಶಕ್ರಾದಿಗಳಿಗೆ ತಾತ । ನಮ್ಮ
ದೇವಕಿದೇವಿಗೆ ಜಾತ । ನಾಗಿ
ಅವತರಿಸಿದ ಜಗನ್ನಾಥ । ಆಹಾ
ಸಾವಧಾನದಿ ನೀನು ಶರ್ವಾದಿವಂದ್ಯನ
ಭಾವದೊಳಗೆ ಇಟ್ಟು ಗರ್ವರಹಿತನಾಗಿ ೩

ಮೀನನಾಗಿ ವಾಡೆ ಅಳೆದ । ಕೂರ್ಮ
ತಾನಾಗಿ ಗಿರಿಯನು ಪೊತ್ತ । ಸೂಕ
ರಾನನದಿ ಧರೆಯತಂದ । ಮೃಗ
ಮಾನವ ರೂಪದಿ ಬಂದ । ಆಹಾ
ದಾನಬೇಡಿ ಧರೆಯ ಹಾನಿ ರಾಯರ ಸದೆದು
ದಿನಕರ ಕುಲದೀಪ ಹನುಮವಂದಿತ ಪಾದ ೪

ಮಾನಿನಿ ರುಕ್ಮಿಣಿ ರಮಣ । ಮಾನ
ಹೀನನಾದ ಲಕ್ಷ್ಮೀರಮಣ । ನಾಗಿ
ವನಿತೆಯರಲಿ ನಿಂದತರುಣ । ಬಹು
ಗುಣಗಣನಿಲಯ ಪ್ರವೀಣ । ಆಹಾ
ಹೀನರ ಕೊಂದು ಸುಜನರ ರಕ್ಷಣೆಗಾಗಿ
ಘನ್ನ ತುರಗವೇರ್ದ ವನಜಸಂಭವ ಪಿತನ ೫

ಪೇಳುವ ಬಗೆಯ ನೀತಿ ತಿಳಿದು । ನಿನ್ನ
ಒಳಗಿರುವನ ನೋಡಬಹುದು । ಆಹಾ

ತುಳಸೀಸರಗಳಿಟ್ಟು ಕೊರಳು । ಮತ್ತು
ಥಳಥಳಿಪನ ನೀ ನೆನೆದು । ಆಹಾ
ಬಲಿಯವಂಚಕನ ನಿತ್ಯ ಸೂಕ್ಷ್ಮಸ್ಥಾನವರಿತು
ಸುಲಭನ ಅನುದಿನ ದೃಢ ಬುದ್ಧಿಯಿಂದಲಿ ೬

ಮರುಳ ಬಿಡಿಸುವನಯ್ಯ । ತನ್ನ
ಸ್ಮರಿಸುವರ ನೆಂಟನಯ್ಯ । ಭವ
ಸೆರೆಯಿಂದ ತಪ್ಪಿಸುವನಯ್ಯ । ಕೃಷ್ಣ
ಕರುಗಳ ಕಾವ ಎನ್ನಯ್ಯ । ಆಹ
ಗುರುತರಿತು ನೀನು ಗುರುರಂತರಂಗದಿ
ಗುರು ತಂದೆ ಪುರಂದರವಿಠ್ಠಲ ರಾಯನ ೭

೧೯

ರಾಗ : ಸುರುಟಿ **ಚಾಪುತಾಳ**

ಮಂಗಳಂ ಮಚ್ಛಾವತಾರ ಶ್ರೀಹರಿಗೆ
ಮಂಗಳಂ ಕಚ್ಛ ಕೂರ್ಮನಾದವನಿಗೆ
ಮಂಗಳಂ ಅಚ್ಚ ವರಹ ರೂಪ ದೇವಗೆ
ಮಂಗಳಂ ತುಚ್ಛನ ಮುರಿದ ನರಹರಿಗೆ ೧

ಮಂಗಳಂ ಪುಟ್ಟ ವಾಮನ ರೂಪಗೊಂಡಗೆ
ಮಂಗಳಂ ದಿಟ್ಟ ಭಾರ್ಗವ ರಾಮಗೆ
ಮಂಗಳಂ ದುಷ್ಟ ಕುಲಾಂತಕ ವೀರಗೆ
ಮಂಗಳಂ ಬೆಟ್ಟವ ಬೆರಳಲಿಟ್ಟವಗೆ ೨

ಮಂಗಳಂ ತರುಣಿಯರಲಿ ಬೆತ್ತಲೆ ನಿಂತಗೆ
ಮಂಗಳಂ ಸಿರಿಯ ಕುದುರೆ ಮಾಡಿದವಗೆ
ಮಂಗಳಂ ಗುರುತಂದೆ ಪುರಂದರವಿಠಲಗೆ
ಮಂಗಳಂ ಗುರುಶ್ರೀ ಮಧ್ವರಾಯರಿಗೆ ೩

ಜಯಮಂಗಳಂ ನಿತ್ಯ ಶುಭಮಂಗಳಂ

೨೦
ವಾಯುದೇವರು

ರಾಗ : ತೋಡಿ **ರೂಪಕತಾಳ**

ತಂದೆ ಹನುಮ ಭೀಮ ಮಧ್ವ ಗುರುವೆ ಬಂದು ಸಲಹೊ ಇಂದೆ
ದ್ವಂದ್ವ ನಿನ್ನ ಚರಣಕಮಲಕೆರಗುವೆನೀಗ ಪ

ಸುಂದರತರ ಕಂದಕೃಷ್ಣನ ಪಾದಪಂಕಜಗಳನು ಸದಾ
ಮೋದದಿಂದ ಭಜಿಸಿ ಚಿರಂಜೀವಿ ತತ್ವವನ್ನು ಪಡೆದ ಅ.ಪ

ಚೋರತನದಿ ಘೋರ ಅಸುರ ಸಿರಿಯ ಕದ್ದು ಒಯ್ಯಲಾಗ
ಹರಿಯುನೊಂದು ಸತಿಯಳ ಬನದೊಳು ಅರಸುತ ತಿರುಗುತಿರೆ
ತರಣಿಸುತನ ಬೇಗತಂದು ಭರದಿ ಸಖ್ಯವನು ಮಾಡಿಸಿ
ಸರಸಿಜಾಕ್ಷನಾಜ್ಞೆಯಿಂದ ಪೊರಟಿ ದಕ್ಷಿಣದಿಶೆಯ ಕುರಿತು ೧

ಸುರರು ವಿಶ್ರಾಂತಿಗಾಗಿ ಗಿರಿಯ ತಂದು ನಿಲಿಸೆ ಪಥದೊಳು
ಇರಿಸಿ ಅದನು ನೀರೊಳು ನೀನು ಸೇರಿ ರಿಪುಪುರದಲಿ
ಸರಸಾದಿ ರಕ್ಕಸರ ಸೇರಿಸಿದಿ ಯಮಪುರಕೆ
ಪರಮ ಗುಪ್ತರೂಪದಿಂದ ಕಂಡೆ ಜಾನಕಿಯ ವನದಿ ೨

ಬಾರಿ ಬಾರಿಗೆ ನಮಿಸಿ ಗುರುತು ಉಂಗುರವನು ತೋರಿದಿ
ಸಿರಿಯುಕೊಟ್ಟರತ್ನಗೊಂಡು ಹರಿಯಸಹ ಬರುವೆನೆಂದು
ಸೇರಿ ಖಳನ ಸಭೆಯೊಳು ನೀನು ರಾಮದೂತನೆಂದು ಗರ್ಜಿಸಿ
ಅರಿಯಪುರವ ಅನಲಗಿತ್ತು ತಿರುಗಿ ಬಂದು ನಮಿಸಿ ನಿಂತ ೩

ದುರುಳ ದುಶ್ಯಾಸನನಂದು ನೆರೆದು ಸಭೆಯೊಳು ಸತಿಯ
ಸೀರೆಯೆಳೆದು ಮಾಡಿದ ಕ್ರೂರಕ್ರಿಯೆಗಳನ್ನು ಮನದಲಿಟ್ಟು
ವೀರಪತ್ನಿ ಮಾತಿಗಾಗಿ ಘೋರ ಮಹಾರಣದೊಳವನ
ಹೀರಿ ಉರವ ರುಧಿರ ನೆತ್ತಿ ಸತಿಯ ಶಿರೋರುಹವ ಮುಡಿದ ೪

ಕೌರವರನೆಲ್ಲ ಸದೆದು ದುರ್ಯೋಧನನ ಹುಡುಕಲವನು
ನೀರೊಳು ಮುಳುಗಿ ಜಪವಮಾಡಲು ಕ್ರೂರಮಾತುಗಳಿಂದ ತರಿಸಿ
ಘೋರ ಗದಾಧುರರೊಳವನ ಊರುದ್ವಯವ ಹೀರಿಕೊಂದು
ಸಿರಿಕಾಂತನಾದ ಕೃಷ್ಣಗೆ ಅರ್ಪಿಸಿದ ಸರ್ವಪುಣ್ಯ ೫

ಕರದಿ ವಸ್ತ್ರವನ್ನು ಬೀಸಿ ವಾರಿಜಾಕ್ಷನಿದ್ದ ವಾಡೆಯ
ತರಿಸಿ ಅವನ ಶಿರದೊಳೆತ್ತಿ ಭರದಿ ರಜತಪುರದೊಳಿರಿಸಿ
ಮೂರು ಏಳು ಮತವ ಭೇದಿಸಿ ಹರಿಯೆ ಪರನೆಂದು ಸ್ಥಾಪಿಸಿ
ಎರಡು ನಾಲ್ಕು ಯತಿಗಳಿಂದ ನಿರುತ ಕೃಷ್ಣ ಸೇವೆಮಾಳ್ಪ ೬

ನೀರೊಳು ಮುಳುಗಿ ಭಾರಪೊತ್ತು ಬೇರ ಮೆದ್ದು ಕರುಳ ಸೀಳಿ
ಧರೆಯ ಬೇಡಿ ನೃಪರ ಸದೆದು ನಾರನುಟ್ಟು ವರಳ ನೆಳೆದು
ನಾರೇರಪ್ಪಿ ತುರಗವೇರಿ ಶರಣರನ್ನು ಬಿಡದೆ ಪೊರೆವ
ಧೀರನಾದ ಗುರುತಂದೆ ಪುರಂದರವಿಠಲ ದಾಸ ೭

೨೧
ರುದ್ರ ದೇವರು

ಢಮರು ಶೂಲಧರ ವಿಮಲರೂಪನಿನ್ನ
ನಮಿಸುವೆನೋ ಮುದದಿ ಪ

ವ್ಯೋಮಪತಿಯಪಿತ ತಾಮಸಾಧಿಪನೆ
ಕಾಮನಪಿತನ ಕೊಂಡಾಡಿ ಕುಣಿಯುವನೆ ಅ.ಪ

ವಿಷಮಲೋಚನನೆ ವಿಷಾದಗಳಳಿಸೋ
ವಿಷವನುಂಡನೆ ವಿಷಧರಭೂಷಿತ
ಸುಷುಮ್ನದಿವಾಸ ಶಿಶುರೂಪ ಕೃಷ್ಣಯ್ಯನ
ತುಷಿತನಾಗಿ ತೋರೊ ಶಿಶುವಾದ ನನಗೀಗ ೧

ಮನವನಾಳುವನೆ ಮನಸಿಜ ಪಿತನಲಿ
ಮನವ ನಿಲ್ಲಿಸೋ ಹೇ ಮನೋಭವವೈರಿಯೆ
ಮನಮುಟ್ಟಿ ಅವನಂಘ್ರಿ ಅನುದಿನದಲಿ ನಾ
ನೆನೆವಂತೆ ಮಾಡಯ್ಯ ಜಾಹ್ನವಿಜನಕಪ್ರಿಯ ೨

ಒಪ್ಪವಿಲ್ಲದ ಮೂರ್ತಿ ಕಪ್ಪುವರ್ಣನ ಸಖ
ಮುಪ್ಪುರವ ಸುಟ್ಟವನೆ ತಪ್ಪದೆ ಪೊರೆಯೊ ಎನ್ನ
ಅಪ್ಪನಾದ ಗುರುತಂದೆ ಪುರಂದರವಿಠಲನು
ಒಪ್ಪುವಂತೆ ಮಾಡೊ ಎನ್ನ ಕಪ್ಪರ ಕೈಯಲಿ ಇಟ್ಟ ೩

೨೨
ಗುರುಸ್ತುತಿ

ರಾಗ : ಆನಂದ ಭೈರವಿ **ಅಟ್ಟತಾಳ**

ಕರುಣಿಯೆ ವರತುಂಗತೀರವಿಹಾರ ಶ್ರೀ ರಾಘವೇಂದ್ರ ಗುರುವೇ ಪ
ನಿರಾಕರಿಸದೆ ನಿನ್ನ ಶರಣರಿಗೆ ಅತಿ
ಕರುಣಿಯಿಂದಲಿ ಸಾರ್ವಭೌಮನ ಪದತೋರ್ವ ಅ.ಪ

ಕಡುವೈಷ್ಣವಶಿಖಾಮಣಿಯೆ ದಯದಿ ನಿನ್ನ
ಅಡಿಗಳ ಸ್ಮರಣೆಯ ನೀಡೋ
ಕಡು ಬಾಧೆ ಪಡವೊಲ್ಲೆ ಪೊಡವಿಯೊಳಗೆ ಬಂದು
ಕಾಡುವೆನೊ ನಿನ್ನ ಚರಣದಿ ಅನುದಿನದಿ ೧

ಕಡುದಯಾನಿಧಿ ನೀನೆ ಸಡಗರದಿ ಬಂದು
ಕಡಲಶಯನನ ತೋರೋ
ಕಡುಮೂರ್ಖನಾದರೇನು ಬಿಡುವುದುಚಿತವೇನೋ
ಬಿಡುವ ನಾನಲ್ಲವೊ ಮೃಡಸಖನ ದಾಸ ೨

ಆಡುತಾಡುತ ಬಂದು ಕುಣಿವ ಕೃಷ್ಣನ ಭಕ್ತಿ
ಮಾಡುವ ಬಗೆಯ ನಾನರಿಯೆ
ಆಡಿಪಾಡಿ ಮೈಮರೆತು ಭಜಿಸುವಂತೆ
ಮಾಡೊ ಗುರುತಂದೆ ಪುರಂದರವಿಠಲನ ದಾಸ ೩

೨೩

ರಾಗ : ಕಲ್ಯಾಣಿ **ಆದಿತಾಳ**

ಗುರುವೆ ನಿನ್ನ ಚರಣ ಕಮಲವೆ ಗತಿಯೆಂದು ನಂಬಿದೆ ಪ

ಇರುಳು ಹಗಲು ನಿನ್ನ ಚರಣ ಸ್ಮರಣೆಯಿತ್ತು
ಪರಮ ಪುರುಷ ಕೃಷ್ಣ ಮೂರಿತಿಯ ತೋರಿಸುವ ಅ.ಪ

ಮಾರಜನಕನು ತೋರಬೇಕು ಎಂದು
ಸೂರೆಗೈದೆಯಲ್ಲ ಅಪಾರ ಧನವನಂದು
ಕರದಿ ತಂಬೂರಿ ತಾಳ ಧರಿಸಿ ನೀಯನಗಿಂದು
ಭರದಿ ನಿಲ್ಲಿಸೊ ನಿನ್ನ ಮೂರಿತಿಯ ಎನ್ನ ಮುಂದೆ ೧

ಭಾಮಾ ಅರಸನ ನೇಮದಿಂದಲಿ
ಯಾಮ ಯಾಮದಲಿ ಗಾನ ಮಾಡುತಲೆ

ಕಾಮದಿಗಳ ಬಿಡಿಸಿ ಕಾಮಿತಾರ್ಥ ನೀಡುತಲಿ
ಪ್ರೇಮದಿ ಸಲಹೊ ಎನ್ನ ತಾಮಸನೀ ಮಾಡದಲೆ ೨

ದೀನ ಜನರನು ಮಾನದಿಂ ಪೊರೆವ
ಜ್ಞಾನನಿಧಿಯೆ ನೀನೆ ಗತಿಯೆಂಬೆ
ಅನಾಥ ಜನರನೆಲ್ಲ ತಾನೆ ನಿಂತು ಸಲಹುವ
ಎನ್ನ ಗುರುತಂದೆ ಪುರಂದರವಿಠಲನ ದಾಸ ೩

೨೪

ರಾಗ : ಭೈರವಿ ಅಟ್ಟತಾಳ

ಎಂದಿಗೆನ್ನನು ಬಂದು ಸಲಹುವ । ತಂದೆ ಪುರಂದರದಾಸರಾಯ ಪ

ಹಿಂದೆ ಅನೇಕ ಜನುಮಗಳಲಿ । ಬಂದು ವೇಗದಿ ಎನ್ನ ಸಲಹಿದಿ ಅಲ್ಲಲ್ಲಿ ಅ.ಪ

ಶ್ರೀ ವಿಭು ವರಾಹಕ್ಷೇತ್ರದ ಎಡೆಯಲಿ
ಕುವರನಾದ ಎನ್ನ ಕುಬುದ್ಧಿಗಳ ಬಿಡಿಸಿ
ಅವನಿಯೊಳಗೆ ಬಂದು ಅವತರಿಸಿದೋ
ಭವವೈರಿ ಕೃಷ್ಣನ ದಾಸನೆಂದೆನಿಸಿದೋ ೧

ಅಂದು ಕುರುಬರಲಿ ಬಂದು ಉದ್ಭವಿಸಿದಿ
ಹಿಂದೆ ಗೋಪಾಲ ದಾಸರೆಂದೆನಿಸಿದಿ
ಕಂದನಾಗಿ ಪುರಂದರದಾಸರಲಿ ಜನಿಸಿದಿ
ಇಂದು ಎನ್ನನ್ನು ನಿನ್ನಲ್ಲೆ ಪೊಂದಿಸಿದಿ ೨

ಪೊಂದಿದೆ ನಿಶ್ಚಯ ನಿನ್ನನು ತಂದೆ
ಹಿಂದಿನ ಕುಂದೆಲ್ಲ ಮನ್ನಿಸೊ ಇಂದೆ
ಬಂದೆ ಬಳಿಗೆ ನಿನ್ನ ಹರುಷದಿಂದೆ
ದ್ವಂದ್ವ ಚರಣಸೇವೆ ತಂದು ರಕ್ಷಿಸೊ ಮುಂದೆ ೩

ನೆಂಟನಲ್ಲವೆ ನೀನು ತುಂಟರ ಕಂಟಕನು
ಭಂಟ ನಾನಲ್ಲವೆ ಸತತವು ನಿನ್ನ
ಕಂಠದಿ ಶೋಭಿಪ ಶ್ರೀವತ್ಸಧರನ
ಮಂಟಪ ಎನ್ನ ಹೃದಯದಿ ತೋರಿಸೊ ಆತನ ೪

ಪುರುಹೂತಾದಿ ದಿಕ್‍ಪಾಲಕರೊಳೊಬ್ಬನೆ
ಮರುತಾತ್ಮಜನ ಪೂರ್ಣಕರುಣಕೆ ಪಾತ್ರನೆ
ಕರುಣಿಸಿ ಎನ್ನಲಿ ಪೊರೆಯೊ ದಾತನೆ
ಗುರುತಂದೆ ಪುರಂದರವಿಠಲನ ದೂತನೆ ೫

೨೫

ರಾಗ : ಯದುಕುಲ ಕಾಂಬೋದಿ ತ್ರಿಪುಟತಾಳ

ಗುರುವೇ ಕಾಯೊ ನೆರೆ ನಂಬಿದೆನೊ ನಿನ್ನ ಪ

ಕೋರಿದ ವರವೀವ ಜಾರ ಚೋರನ ಪಾದ
ಸರೋಜದಳದಲಿ ಭ್ರಮರನಂತಿರುವ ಅ.ಪ

ವರಗುರುವೆ ನಿನ್ನ ಹೃದಯಮಂದಿರದಲಿ
ಪರಿವಾರಸಹಿತಾಗಿ ಹರಿಯು ತಾನಿರಲು
ಹರಾದಿ ವಿನುತನು ಪರಮಹರುಷದಿಂದ
ಪರಿಪರಿವಿಧದಿ ಆಡುತಲಿರುವನು
ದುರಿತಗಳನ್ನ ತರಿದು ಕರುಣೆಯಿಂದ
ನಿರುತವು ನಿನ್ನಲಿ ತೋರಿಸಿ ಮಾಧವನ ೧

ವಿಷಯದಿ ಬಹುವಿಧ ವಿಷಯುಕ್ತವಾದ ಈ
ವಸುಧೆಯೊಳಗೆ ನಾ ಘಾಸಿಪಡುತಲಿರಲು
ಬಿಸಜನಾಭನ ದಾಸ ಲೇಸುಮಾರ್ಗದಿ ಎನ್ನ
ದಾಸವರ್ಯ ಸುತನೆ ಸಲಹಿದಿ ಮುದದಿ
ಶ್ವಾಸನಿಯಾಮಕನ ತೋರಿಸಿ ಭಕ್ತಿಯಿಂದ
ಗ್ರಾಸವ ಉಣಿಸಿದ ವಾಸುದೇವನ ಪ್ರಿಯ ೨

ಸುರಮುನಿ ದಾನಕೊಟ್ಟ ದೇಶದರಸನೀ
ಧಾರುಣಿಯಲಿ ಬಂದಿ ಉದ್ಧರಿಪುದಕೆನ್ನ
ಸ್ವರತನ ದಾಸನೆ ಅನುಚರನೊ ನಾ ನಿನ್ನ
ಚರಣಯುಗಳಗಳ ಇರಿಸೊ ಎನ್ನ ಮನದಿ
ಚಿರಕಾಲವಿರಬೇಕೊ ಸ್ಥಿರವಾಗಿ ಎನ್ನಲಿ
ಗುರುತಂದೆ ಪುರಂದರವಿಠಲದಾಸನಾದ ೩

೨೬

ರಾಗ : ಸಿಂಧುಭೈರವಿ ರೂಪಕತಾಳ

ಗುರುವೆ ನಿಮ್ಮ ಚರಣದಲಿ ಪದವನಿಟ್ಟು ನಮಿಸುವೆನೊ
ಕರುಣಾರಸಪೂರಿತನೆ ಕರುಣೆಯಿಂದ ರಕ್ಷಿಸೆನ್ನ ೧

ಚಿತ್ತ ಮೊದಲಾದ ಎಲ್ಲವು ಒಪ್ಪಿಸಿದೆ ನಿನ್ನ ಪಾದದಿ
ಉತ್ತಮಪರಪುರುಷನಾದ ಚಿತ್ತಜನಯ್ಯನ ದಾಸ ೨

ಕಾಮಾದಿಗಳಾದ ದೇಹಸಂಬಂಧಿಯ ಸ್ನೇಹಬಿಡಿಸಿ
ಕಾಮಜಜನಕನಾದ ಮುದ್ದು ಭಾಮಾ ಅರಸನ ಧ್ಯಾನನೀಡೋ ೩

ದಾಸವರ್ಯರಾದವರ ಪ್ರಿಯಕರಸುತನೆ ಎನ್ನ
ದೋಷಗಳು ಎಣಿಸದೆ ನೀ ಪೋಷಿಸೊ ಅನುದಿನ ೪

ತರಳನಾದ ಎನಗೆ ಒಲಿದು ನಿನ್ನ ಹೃದಯದೊಳಗಿರುವ
ಗುರುತಂದೆ ಪುರಂದರವಿಠಲನ ತೋರಿಸೀಗ ೫

೨೭

ಅಭಂಗಮಟ್ಟು

ಶರಣು ಶರಣು ಗುರುವೆ ಹರಿಯಚರಣ ತೋರ್ವರೆ
ಮರೆಯದೆ ಎನ್ನಲಿ ನಲಿಯುತ್ತಲಿರುವಿರೆ ೧

ನಾಸಿಕಕ್ಷೇತ್ರದಿ ಪುಟ್ಟಿದ ಪುಣ್ಯರಾಶಿ
ದಾಸರ ದಾಸನಾಗಿ ಶ್ರೀಶನ ಕೊಂಡಾಡಿ ೨

ಮರುತನತನಯನ ಅರ್ಚಿಸಿ ಭಕ್ತಿಯಲಿ
ಹರುಷದಿ ಉಣಿಸಿದ ತರಳತನದಲಿ ೩

ಕಾವಲಾಗಿ ಬಂದನು ಗೋವ್ಗಳಿಕಾದವನು
ಭಾವನಕಾದವನು ದೇವಕಿತನಯನು ೪

ಗುರುತಂದೆ ಪುರಂದರವಿಠಲನ ದಾಸರೆ
ಎರಗುವೆ ಚರಣಕೆ ಪ್ರೇಮದಿ ಸಲಹೋರೆ ೫

೨೮
ಲೋಕನೀತಿ

ರಾಗ : ಭೈರವಿ ಅಟ್ಟತಾಳ

ಚಲಿಸದೆ ಅನುಗಾಲ ಲಲನೆಯರರಸನ
ಸುಲಲಿತಾಂಘ್ರಿಯ ನೀ ನೆನೆ ಮನವೇ ಪ

ಬಳಲುವುದ್ಯಾತಕೊ ಬಲಿವಂಚಕ ನಿನ್ನ
ಬಳಿಯಲ್ಲೆ ಇರುವಾಗ ಬಲುಬಲು ಪರಿಯಲಿ ಅ.ಪ

ಧನಧಾನ್ಯದಾಸೆ ಬಿಟ್ಟು ಧಣಿಯ ನೋಡುತ ದಿವ್ಯ
ಸನಕಾದಿ ಮುನಿಜನರ ಅಂತರಂಗದ ದೊರೆಯ
ನೆನೆಯಲು ಒಮ್ಮೆ ನೀ ನಲಿಯುತ ಒಲಿವನು
ಘನ ಸಾಧನವೊ ಇದು ಪೇಳುವೆ ನಿನಗಾಗಿ ೧

ಕ್ಷಣಕೆ ಮಾಡುವ ಕೋಟಿ ಯೋಚನೆಗಳ ಬಿಟ್ಟು
ಕ್ಷಣ ಭಂಗುರವಾದ ವಿಷಯಕೆ ದೂರನಾಗಿ
ಕ್ಷಣಮಾತ್ರ ನೆನೆಯಲು ಕ್ಷಿತಿದೇವಿ ಅರಸನು
ಕ್ಷಣ ಬಿಟ್ಟು ಅಗಲನು ಕಾಣಿದು ನಿಶ್ಚಯ ೨

ಅನುಮಾನಗಳ ಬಿಟ್ಟು ಶರಣಾಗತ ನಾಗಿ
ಅನುವಾಗಿ ಭಜಿಸಯ್ಯ ಹನುಮನಯ್ಯನ ನಿತ್ಯ
ಅನುರೇಣು ಪರಿಪೂರ್ಣ ಘನನೀಲ ವರ್ಣನು
ತಾನೆ ಹೊಳೆವ ಗುರು ತಂದೆ ಪುರಂದರವಿಠಲ ೩

೨೯

ರಾಗ : ಬ್ಯಾಗಡೆ ಚಾಪುತಾಳ

ನಿಲ್ಲದು ಕರ್ಮದೇಹ ನಿಲ್ಲದು ಪ

ಪುಲ್ಲಲೋಚನ ಮುದ್ದುಕೃಷ್ಣನ ನೋಡಲು ಅ.ಪ

ಕಾಲಕಾಲಗಳಲಿ ಕರ್ಮಗಳಾಚರಿಸಿ
ಆಲಯದೊಳು ತನ್ನ ಗುರುಗಳ ಸ್ಮರಿಸಿ

ಮೂಲಗುರುಗಳ ಮೇಲಾದ ಕರುಣದಿ
ಬಾಲಗೋಪಾಲನ ಅವರಲಿ ನೋಡಲು ೧

ವಾಸನಾಮಯದಿಂದ ದೇಹಭಾಸವ ಮರೆತು
ಆಸೆಯಿಂದಲಿ ತನ್ನ ಗುರುಗಳ ಸ್ಮರಿಸಿ
ದೋಷರಹಿತನಾದ ವಾಸುಕಿಶಯನನ
ದೇಶವಾದ ಹೃದಯಾಕಾಶದಿ ನೋಡಲು ೨

ಛೇದಿಸಿ ಆಶಾಸಂಶಯಗಳನು
ಭೇದಿಸಿ ಹೃದಯದಿ ಗ್ರಂಥಿಗಳನು
ಮುದದಿ ಗುರುಗಳ ಹೃದಯಸ್ಥನಾದ
ಗುರುತಂದೆ ಪುರಂದರವಿಠಲನ ನೋಡಲು ೩

೩೦

ರಾಗ : ಶಂಕರಾಭರಣ **ಚಾಪುತಾಳ**

ಭಕ್ತಿಯೆ ಸೋಪಾನ ಮುಕ್ತಿಪದಕೆ ಪ

ವಿರಕ್ತಿಯಿಂದನುದಿನ ಗುರುವಂತರ್ಗತದಿ
ಭಕ್ತವತ್ಸಲನಂಘ್ರಿ ಶ್ರದ್ಧದಿ ನೆನೆವಂಥ ಅ.ಪ

ಗುರುಪಾದಾಂಬುಜದಿ ನಿಲ್ಲಿಸಿ ಮನವನು
ಕರಣಾದಿಗಳ ಅವರ ಅಧೀನವ ಮಾಡಿ
ಅರಮನೆಯಲಿ ನಮ್ಮ ತರಳಕೃಷ್ಣಯ್ಯನ
ಅರಿತುನೋಡಿ ನಿತ್ಯ ಸ್ಮರಿಸುತಲಿರುವಂಥ ೧

ಪ್ರತಿ ಜೀವನದಲ್ಲಿಹ ಅಮಿತವಿಕ್ರಮನ
ಮತಿವಂತನಾಗಿ ಗುರುಗಳ ಹೃದಯದಿ
ಪ್ರತಿಯಿಲ್ಲದಾಕೃತಿಯ ಅತಿಸೂಕ್ಷ್ಮವಾದ
ಪ್ರೀತಿಯಿಂದ ನೋಡಿ ಸತತವು ನೆನೆವಂಥ ೨

ನಿಗಮವೇದ್ಯನಾದ ಅಗಣಿತಮಹಿಮನ
ಸುಗುಣವಿಚಾರದಿ ಮುಳುಗಿ ಮುಳುಗಿ
ಸಗುಣತಂದೆ ಪುರಂದರವಿಠಲನ
ರಾಗರಹಿತನಾಗಿ ಪಾಡಿ ಅರ್ಚಿಸುವಂಥ ೩

ಅನುಬಂಧಗಳು

ಅನುಬಂಧ ೧

ಕಠಿಣ ಪದಗಳ ಅರ್ಥ

೧) (ಅ) ತಂದೆ ಪುರಂದರವಿಠಲರ ಕೀರ್ತನೆಗಳು

೨) (ಆ) ಗುರುತಂದೆ ಪುರಂದರವಿಠಲರ ಕೀರ್ತನೆಗಳು

ಅನುಬಂಧ ೨

ಟಿಪ್ಪಣಿಗಳು

೧) (ಅ) ತಂದೆ ಪುರಂದರವಿಠಲರ ಕೀರ್ತನೆಗಳು

೨) (ಆ) ಗುರುತಂದೆ ಪುರಂದರವಿಠಲರ ಕೀರ್ತನೆಗಳು

ಅನುಬಂಧ ೩

ಕೀರ್ತನೆಗಳ ಅಂಕಿತ ವಿಂಗಡಣೆ

೩) (ಅ) ತಂದೆ ಪುರಂದರವಿಠಲರ ಅಂಕಿತವಿರುವ ಪುರಂದರದಾಸರ ಕೀರ್ತನೆಗಳು

೩) (ಆ) ತಂದೆ ಶ್ರೀ ಪುರಂದರವಿಠಲ ಅಂಕಿತದ ಕೀರ್ತನೆಗಳು

೩) (ಇ) ಶಾಮರಾಯರ ಕೀರ್ತನೆಗಳು

ಅನುಬಂಧ ೪

ಪುರಂದರವಿಠಲ ಅಂಕಿತದ ವಿಶೇಷಣಗಳು

ಅನುಬಂಧ ೫

ಕೀರ್ತನೆಗಳ 'ಅ' ಕಾರಾದಿ

೫) (ಅ) ತಂದೆ ಪುರಂದರವಿಠಲರ ಕೀರ್ತನೆಗಳು

೫) (ಆ) ಗುರುತಂದೆ ಪುರಂದರವಿಠಲರ ಕೀರ್ತನೆಗಳು

ಅನುಬಂಧ – ೧
ಕಠಿಣ ಪದಗಳ ಅರ್ಥ
೧ (ಅ) ತಂದೆ ಪುರಂದರವಿಠಲರ ಕೀರ್ತನೆಗಳು

ಅಂಬರ	=	ಆಕಾಶ
ಅಂಬುಜ	=	ತಾವರೆ
ಅಂಬುಜೋದ್ಭವ	=	ಬ್ರಹ್ಮ
ಅಂಬುಜೋದ್ಭವಪಿತ	=	ಶ್ರೀಹರಿ
ಅಘ	=	ಪಾಪ
ಅಜ	=	ಬ್ರಹ್ಮ
ಅಜಗರ	=	ಸರ್ಪ
ಅಜಿತ	=	ಯಾರಿಂದಲೂ ಜಯಿಸಲಾಗದ
ಅನಘ	=	ಪಾಪಲೇಪವಿಲ್ಲದವನು, ಶ್ರೀಹರಿ
ಅನಿಲ	=	ವಾಯು
ಅನಿಲಪ್ರಿಯ	=	ಶ್ರೀಹರಿ
ಅಪ್ಪ	=	ಸಿಹಿ ದೋಸೆ
ಅಪ್ಪಚ್ಚಿ	=	ರೊಟ್ಟಿ
ಆಕುಲ	=	ವ್ಯಾಕುಲ
ಅಖುವಾಹನ	=	ಮೂಷಿಕವಾಹನ
ಆನಂದಾಚಲ	=	ತಿರುಮಲೈ
ಆವು	=	ಗೋವು
ಆವು ಕಾವಲು	=	ದನ ಮೇಯಿಸುವ
ಉಂಗುಟ	=	ಕೈ ಬೆರಳು
ಉರಗ	=	ಸರ್ಪ
ಉರಗಾದ್ರಿ	=	ತಿರುಮಲೆ
ಉರಗಾದ್ರಿವಾಸ	=	ವೆಂಕಟೇಶ
ಉರಿಮಾರಿ	=	ಬೆಂಕಿಮಾರಿ
ಏಕಭಾವ	=	ಒಂದೇ ಮನಸ್ಸು
ಒಕ್ಕಲು	=	ಕುಲ
ಒಕ್ಕಲಿಕ್ಕು	=	ಕುಲಕ್ಷಯಮಾಡು
ಓಡು	=	ದೋಣಿ
ಕಂತೆ	=	ಜೋಳಿಗೆ
ಕಂದರ್ಪ	=	ಮನ್ಮಥ
ಕಂದರ್ಪಜನಕ	=	ಶ್ರೀಹರಿ

ಕರಪುತ್ರ	= ಕರಸಂಜಾತ, ಶಿಷ್ಯ
ಕರಿ	= ಆನೆ
ಕರಿವರದ	= ಗಜರಾಜವರದ ಶ್ರೀಹರಿ
ಕಲಾಪ	= ನವಿಲುಗರಿ
ಕಾಕಾಚಿ	= ಕಾಗೆ
ಕಾವ	= ರಕ್ಷಕ
ಕಾಳಮೇಘ	= ಕಪ್ಪು ಮೋಡ
ಕಾಳಮೇಘವರ್ಣ	= ನೀಲಮೇಘಶ್ಯಾಮ
ಕಾಳಮಯ್ಯ	= ಕಪ್ಪುದೇಹದ
ಕಾಶ್ಯಪಿ	= ಭೂಮಿ
ಕಾಸುರೆಡ್ಡಿ	= ಬಡ್ಡಿವ್ಯಾಪಾರಿ
ಕಿಟ	= ವರಾಹ
ಕಿಂಕರ	= ಸೇವಕ, ದಾಸ
ಕಿಂಕರರಸ	= ದಾಸರ ದೊರೆ
ಕುಸುಮಶರ	= ಮನ್ಮಥ
ಕುಸುಮಶರಪಿತ	= ಶ್ರೀಹರಿ
ಕೂಪ	= ಬಾವಿ
ಕೈಕೊಡು	= ಸಹಾಯಮಾಡು
ಕ್ರೋಡ	= ವರಾಹ
ಗಮ್ಮನೆ	= ತಟ್ಟನೆ
ಗಳ	= ಕಂಠ
ಗಾಡಿ	= ಸೌಂದರ್ಯ
ಗಾಡಿಕಾರ	= ಚೆಲುವ
ಚಟ್ಟಿಗೆ	= ಹಾಲು ಮೊಸರಿನ ಗಡಿಗೆ
ಜವಡಿ	= ಜೋಡಿ
ಜಾಲ	= ಗರ್ವ, ಬಿಗುಮಾನ
ಡಂಬಕ	= ತೋರಿಕೆ
ಡಿಂಬ	= ಶರೀರ
ತಟ	= ದಡ
ತಟಿ	= ಮಿಂಚು
ತುರಗ	= ಕುದುರೆ
ತುರಗವಿಹಂಗ	= ಪಕ್ಷಿವಾಹನ
ತೊಂಡ	= ಸೇವಕ

ತೊಂಡವತ್ಸಲ = ಭಕ್ತವಾತ್ಸಲ್ಯವುಳ್ಳವನು
ತೋರ = ಭಾರವಾದ
ದಂತಿ = ಆನೆ, ಹಸ್ತಿ
ದಂತಿಪುರ = ಹಸ್ತಿನಾವತಿ
ದಾತ = ರಕ್ಷಕ
ದ್ವಿಜ = ಪಕ್ಷಿ, ಗರುಡ
ದ್ವಿಜವೈರಿ = ಸರ್ಪ, ಕಾಳಿಂಗ
ದ್ವಿಜವೈರಿವೈರಿ = ಶ್ರೀಕೃಷ್ಣ
ದಿಗಂಬರ = ಶಿವ
ದಿಗಂಬರಸುತ = ಗಣಪತಿ
ದಿಗಂಬರಪಿತ = ಬ್ರಹ್ಮ
ನಿಗಮ = ವೇದ
ನುತಿಸು = ಸ್ತುತಿಸು
ಪಂಚಬಾಣ = ಮನ್ಮಥ
ಪಂಚಬಾಣನಯ್ಯ = ಶ್ರೀಹರಿ
ಪಂಥ = ಸ್ಪರ್ಧೆ
ಪನ್ನಗ = ಸರ್ಪ
ಪರ = ಮೋಕ್ಷ
ಪರಮ = ಶ್ರೇಷ್ಠ
ಪಲ್ಲವ = ಚಿಗುರು
ಪೊಡವಿ = ಭೂಮಿ
ಬುಕ್ಕ = ಸುಗಂಧಯುಕ್ತ ಪುಡಿ
ಬುಕ್ಕಚ್ಚಿ = ಸ್ನಾನ
ಭಂಗ = ಅವಮಾನ
ಭಾಮಾಮಣಿ = ಸತ್ಯಭಾಮೆ
ಭಾಮಾಮಣಿಲೋಲ = ಶ್ರೀಕೃಷ್ಣ
ಭಾರದ್ವಾಜ = ಒಂದು ಪಕ್ಷಿ, ಬಾನಾಡಿ
ಭಾರತೀಪತಿ = ವಾಯುದೇವರು
ಭಾವಜ = ಮನ್ಮಥ
ಭಾವಜನಯ್ಯ = ಮನ್ಮಥನ ತಂದೆ
ಭುಜಗ = ಸರ್ಪ
ಭುಜಗರಾಜ = ಆದಿಶೇಷ
ಭುಜಗರಾಜಶಯ್ಯ = ಶೇಷಶಯನ
ಭೋಗ = ಸರ್ಪ

ಭೋಗಪರ್ಯಂಕ	=	ಹಾವಿನ ಹಾಸಿಗೆ
ಮರ್ಕಟ	=	ಕೋತಿ
ಮರಳು	=	ಮರುಳು, ಮೋಹ
ಮರುತ	=	ವಾಯು
ಮಾರ್ಜಾಲ	=	ಬೆಕ್ಕು
ವಟದೆಲೆ	=	ಆಲದ ಎಲೆ
ವತ್ಸ	=	ಬಾಲಕ, ಮಗು
ವಯಿನ	=	ಪ್ರೀತಿ
ವ್ರಜ	=	ದನದ ಹಿಂಡು
ವ್ರಜದ ಮಕ್ಕಳು	=	ಗೋಪಾಲಕರು
ವಾಕು	=	ಮಾತು
ವಾತಜ	=	ವಾಯುಪುತ್ರ
ವಾಸನಾಮೃಗ	=	ಕಸ್ತೂರಿಮೃಗ
ಶಂಖ	=	ಶಂಖಾಸುರ
ಶಂಖವೈರಿ	=	ಶ್ರೀಹರಿ
ಶಂಭು	=	ಶಿವ
ಶಂಭುಪಿತ	=	ಬ್ರಹ್ಮ
ಶಂಭುಪಿತಜನಕ	=	ಶ್ರೀಹರಿ
ಶರ್ವ	=	ಶಿವ
ಸಖ	=	ಗೆಳೆಯ
ಸಟೆ	=	ಸುಳ್ಳು
ಸಿಂಧೂರ	=	ಆನೆ
ಸುತ್ತು	=	ಕಾಲುಂಗುರ
ಸೋಮಕುಲ	=	ಚಂದ್ರವಂಶ
ಹೆಡಿಗೆ	=	ತಲೆಯ ಮೇಲೆ ಹೊತ್ತ ಕುಕ್ಕೆ

ಕಠಿಣಪದಗಳ ಅರ್ಥ

೧ (ಅ) ಗುರು ತಂದೆ ಪುರಂದರವಿಠಲರ ಕೀರ್ತನೆಗಳು

ಅನಿಮಿಷರು = ದೇವತೆಗಳು
ಅಹಿ = ಸರ್ಪ
ಊರು = ತೊಡೆ
ಋಜುಗಣಾಧಿಪರು = ಬ್ರಹ್ಮಪದವಿಗೆ ಅರ್ಹರಾದವರು
ಕಚ್ಛ = ಕಚ್ಛಪ, ಆಮೆ
ಕಾಕು ಜನ = ಕೆಟ್ಟ ಜನ
ಕಾಳಾಹಿ = ಕಾಳಸರ್ಪ
ಕ್ರೋಡ = ವರಾಹ
ಕ್ಷಿತಿ = ಭೂಮಿ
ಕ್ಷಿತಿ ದೇವಿ = ಭೂದೇವಿ
ಕ್ಷಿತಿ ದೇವಿಯರಸ = ಶ್ರೀಹರಿ
ಗ್ರಾಸ = ಆಹಾರ
ಗೋರಸ = ಹಾಲು
ಚಿತ್ತ ಜನಯ್ಯ = ಶ್ರೀಹರಿ
ಚೋರ = ಕಳ್ಳ
ಜಾಡೆ = ಆಲಸ್ಯ, ಸೋಮಾರಿತನ
ಜಾರ = ವ್ಯಭಿಚಾರಿ
ಜಾಹ್ನವಿ = ಗಂಗೆ
ಜಾಹ್ನವಿ ಜನಕ = ಶ್ರೀಹರಿ
ಜಾಹ್ನವಿ ಜನಕ ಪ್ರಿಯ= ಶಿವ
ತತ್ವೇಶರು = ಪಂಚಭೂತಗಳ ಅಭಿಮಾನಿ ದೇವತೆಗಳು
ತುಷಿತ = ಅಧೀನ
ದುಗ್ಧಾಬ್ಧಿ = ಕ್ಷೀರಸಾಗರ
ದುಗ್ಧಾಬ್ಧಿತನಯೆ = ಲಕ್ಷ್ಮೀದೇವಿ
ದ್ಯುತಿ = ಬೆಳಕು
ಧನದ = ಕುಬೇರ
ಧನದ ಸಖ = ಇಂದ್ರ
ನೆಗೆದ ಹಲ್ಲು = ಕೋರೆದಾಡೆ ನಿಗಮ = ವೇದಗಳು
ಪರಮೇಷ್ಠಿ = ಬ್ರಹ್ಮ
ಪಾಕಶಾಸನ = ಇಂದ್ರ
ಪುರಹೂತ = ಇಂದ್ರ

ಪೊಡವಿ	=	ಭೂಮಿ
ಮಕರಾಂಕ	=	ಮನ್ಮಥ
ಮನೋಭವ	=	ಮನ್ಮಥ
ಮನೋಭವವೈರಿ	=	ಶಿವ
ಮೃಗಮದ	=	ಕಸ್ತೂರಿ
ಮೀನಕೇತನ	=	ಮನ್ಮಥ
ಮೀನಕೇತನಪಿತ	=	ಶ್ರೀಹರಿ
ಮುಪ್ಪುರ	=	ತ್ರಿಪುರ
ಮುಪ್ಪುರಸುಟ್ಟವರು	=	ಶಿವ
ಯುಗಳೊಂದು ಭುವಿ	=	ಮೂರು ಹೆಜ್ಜೆ ಭೂಮಿ
ವಟದೆಲೆ	=	ಆಲದ ಎಲೆ
ವರಾಹಕ್ಷೇತ್ರ	=	ತಿರುಪತಿ
ವಲ್ಕಲ	=	ನಾರುಮಡಿ
ವಾಣಿವಲ್ಲಭ	=	ಬ್ರಹ್ಮ
ವ್ಯೋಮ	=	ಆಕಾಶ
ವ್ಯೋಮಪತಿ	=	ಆಕಾಶಭಿಮಾನಿ ಗಣೇಶ
ವಿಷಮಲೋಚನ	=	ಶಿವ
ವಿಷಧರ	=	ಸರ್ಪ
ವಿಷಧರ ಭೂಷಿತ	=	ನಾಗಭೂಷಣನಾದ ಶಿವ
ವಿಷವನುಂಡವ	=	ನಂಜುಂಡನಾದ ಶಿವ
ಶ್ವಾಸನಿಯಾಮಕ	=	ಪ್ರಾಣದೇವರು
ಸಾರಭೂತ	=	ಸತ್ವಗುಣವುಳ್ಳವರು
ಸುರಮುನಿ	=	ನಾರದ
ಸ್ವರತ	=	ಸ್ವರಮಣನಾದ ಶ್ರೀಹರಿ
ಸೌಧಾಮಿನಿ	=	ಮಿಂಚು

ಅನುಬಂಧ – ೨

ಟಿಪ್ಪಣಿಗಳು

೨ (ಅ) ತಂದೆ ಪುರಂದರವಿಠಲರ ಕೀರ್ತನೆಗಳು

ಕೀರ್ತನೆ – ೧

ನುಡಿ – ೧ ತಂಬಿಗೆ ತುಪ್ಪದಿ ತೋರಿದಿ ಆತನ

ಪುರಂದರದಾಸರು ತಮ್ಮ ತಂದೆಯ ಶ್ರಾದ್ಧದದಿನ ಭೋಜನ ಪಂಕ್ತಿಗೆ ತುಪ್ಪವನ್ನು ಬಡಿಸಲು ತುಪ್ಪದ ತಂಬಿಗೆ ತರುವಂತೆ ತಮ್ಮ ಶಿಷ್ಯ ಅಪ್ಪಣ್ಣನಿಗೆ ಹೇಳಿದರು. ಅಪ್ಪಣ್ಣ ತುಪ್ಪದತಂಬಿಗೆಯನ್ನು ದಾಸರ ಕೈಗೆ ತಂದಿತ್ತ. ಆ ತಂಬಿಗೆಯ ತುಪ್ಪದಲ್ಲಿ ದಾಸರು ಶ್ರೀಕೃಷ್ಣನ ಬಿಂಬವನ್ನು ಕಂಡರು. ಮೈಮರೆತು ಕುಣಿದಾಡಿದರು; ವಂದಿಸಿ ಕೈಮುಗಿದರು. ತುಪ್ಪದ ಬಿಂದಿಗೆಯಲ್ಲಿ ಕೃಷ್ಣನ ದರ್ಶನವಾಗಿದ್ದು, ಈ ದರ್ಶನ ಮಾಡಿಸಿದ್ದು ವಿನಾಯಕನೆಂದು ದಾಸರ ಭಾವನೆ. ಪುರಂದರದಾಸರ 'ಎಂದಪ್ಪಿಕೊಂಬೆ ರಂಗಯ್ಯನ' ಎಂಬ ಕೀರ್ತನೆಯಲ್ಲಿ ಇದರ ಉಲ್ಲೇಖವಿದೆ.

ಕೀರ್ತನೆ – ೩

ನುಡಿ – ೧ ಗಗನಾಭಿಮಾನಿ

ಪಂಚಭೂತಗಳಲ್ಲಿ ಒಂದಾದ ಆಕಾಶ ತತ್ವಕ್ಕೆ ಅಭಿಮಾನಿ-ಯಾದವನು ಗಣಪತಿ. ಮಹಾದಾಕಾಶಪತಿ, ನಭೋಭಿಮಾನಿ, ಅಂತರಿಕ್ಷಾಭಿಮಾನಿ, ಖೇಶ ಮೊದಲಾದ ವಿಶೇಷಣಗಳು ಇದನ್ನೇ ತಿಳಿಸುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಕ್ರಮವಾಗಿ ಆಕಾಶ, ಅಗ್ನಿ, ಭೂಮಿ, ನೀರು ಮತ್ತು ಗಾಳಿಗಳಿಂದ ಅನುಭವಕ್ಕೆ ಬರುತ್ತದೆ. ಶಬ್ದದ ಲಿಖಿತರೂಪವೇ ಸಾಹಿತ್ಯ-ಶಾಸ್ತ್ರ. ವೇದವ್ಯಾಸ ಪ್ರಣೀತವಾದ ಶಬ್ದರೂಪದ ಕಾವ್ಯವನ್ನು ಬರೆದುಕೊಂಡವನು ಆಕಾಶಾಭಿಮಾನಿ ಗಣಪತಿ. ಆದ್ದರಿಂದ ವಿದ್ಯಾದೇವತೆ ಎಂದು ಕರೆಯುತ್ತಾರೆ.

ಕೀರ್ತನೆ – ೪

ನುಡಿ – ೧ ಅನಂತ

ಇದು ಅನಂತಪದ್ಮನಾಭನ ವ್ರತದ ಕಥೆಯನ್ನು ನಿರೂಪಿಸುವ ಕೃತಿ. ಅನಂತ ಎಂಬುದು ಶ್ರೀಹರಿಯ ಅನಂತ ನಾಮಗಳಲ್ಲಿ ಒಂದು. ಆದಿ ಅಂತ್ಯರಹಿತನಾದ್ದರಿಂದ ಅವನು ಅನಂತ. ಮಾರ್ಗಶಿರ ಶುದ್ಧ ಚತುರ್ದಶಿ ಈ ವ್ರತವನ್ನು ಆಚರಿಸಬೇಕು.

ಅನಂತನ ಸಾನ್ನಿಧ್ಯವಿರುವ ಹದಿನಾಲ್ಕು ಗ್ರಂಥಿಗಳಿರುವ ದಾರವನ್ನು ಪೂಜಿಸಿ ಕೈಗೆ ಕಟ್ಟಿಕೊಳ್ಳಬೇಕು. ಚತುರ್ದಶಲೋಕದ ಒಡೆಯನಾದ ಅನಂತನ ಸಾನ್ನಿಧ್ಯ ಈ ಚತುರ್ದಶಗ್ರಂಥಿಗಳ ದಾರದಲ್ಲಿದೆಯೆಂಬುದು ನಂಬಿಕೆ.

ನುಡಿ – ೧ **ಕೌಂಡಿಣ್ಯ**

ಇವನು ವಶಿಷ್ಠಮುನಿಯ ಸಂತತಿಯಲ್ಲಿ ಬಂದ ಒಬ್ಬ ಋಷಿ. ಕುಂಡಿನ ಋಷಿಯ ಮಗ, ಗೋತ್ರಪ್ರವರ್ತಕನಾದ ಮಹರ್ಷಿ. ಈತನು ಸುಮಂತನೆಂಬ ಬ್ರಾಹ್ಮಣನ ಮಗಳಾದ ಶೀಲೆ ಎಂಬುವಳನ್ನು ವಿವಾಹವಾಗಿದ್ದ. ಈಕೆ ಅನಂತನ ವ್ರತವನ್ನು ಮಾಡಿ ದಾರವನ್ನು ಧರಿಸಿ ಕೌಂಡಿಣ್ಯನ ಆಶ್ರಮವನ್ನು ಸಂಪದ್ಭರಿತವಾಗುವಂತೆ ಮಾಡಿದಳು. ಶೀಲೆಯು ಕೈಯಲ್ಲಿ ಧರಿಸಿದ್ದ ಅನಂತನ ದಾರವನ್ನು ಕಂಡು ಸಂಶಯಗೊಂಡ ಕೌಂಡಿಣ್ಯ ಅದನ್ನು ಕಸಿದುಕೊಂಡು ಬೆಂಕಿಗೆ ಹಾಕಿದ. ಈ ದುಷ್ಕರ್ಮದಿಂದ ಅವನ ಸಂಪತ್ತೆಲ್ಲ ನಾಶವಾಯಿತು. ತಪ್ಪಿನ ಅರಿವಾದ ಕೌಂಡಿಣ್ಯ ಅನ್ನ ಆಹಾರಗಳನ್ನು ಬಿಟ್ಟು ಕಾಡುಮೇಡುಗಳಲ್ಲಿ ಅಲೆದಾಡಿದ, ಅನಂತನಿಗಾಗಿ ಹುಡುಕಾಡಿದ. ಕೊನೆಗೆ ಪ್ರಾಣತ್ಯಾಗ ಮಾಡಲು ನಿರ್ಧರಿಸಿದ. ಅನಂತನು ವೃದ್ಧನರೂಪದಲ್ಲಿ ದರ್ಶನ ನೀಡಿ ತನ್ನ ಲೋಕಕ್ಕೆ ಕರೆದುಕೊಂಡು ಹೋದ. ಕೌಂಡಿಣ್ಯ ಋಷಿ ಕಂಡ ಅನಂತನ ಸ್ವರೂಪದ ವರ್ಣನೆ ಇಲ್ಲಿದೆ.

ನುಡಿ – ೪ **ಗಂಗೆಯಪೆತ್ತ ಪಾದ**

ವಾಮನಾವತಾರಗಳಲ್ಲಿ ಶ್ರೀಹರಿ ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ ತ್ರಿವಿಕ್ರಮನಾಗಿ ಬೆಳೆದ. ಭೂಮಿ ಆಕಾಶಗಳನ್ನು ತನ್ನ ಪಾದದಿಂದ ಅಳೆದ. ಸ್ವರ್ಗದ ದೇವತೆಗಳು ಅವನ ಪಾದಕ್ಕೆ ದೇವಜಲದಿಂದ ಅಭಿಷೇಕ ಮಾಡಿದರು. ಆ ಪಾದಜಲವೇ ಗಂಗಾನದಿಯಾಗಿ ಹರಿಯಿತು. ಗಂಗೆ ಹರಿಪಾದೋದ್ಭವೆ ಎನಿಸಿಕೊಂಡಳು.

ನುಡಿ – ೮ **ಒಂಭತ್ತು ವಿಧವಾದ ಭಕ್ತಿ**

ಇದು ನವವಿಧ ಭಕ್ತಿಯೆಂದು ಭಾಗವತದಲ್ಲಿ ಹೇಳಲಾಗಿದೆ. (ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ)

ಕೀರ್ತನೆ – ೫

ಇದು ದಶಾವತಾರಸ್ತುತಿ

ಮಯ್ಯೆಲ್ಲ ಕೆಸರಪ್ಪ – ಮತ್ಸ್ಯ
ಭಾರ ಹೊರುವುದೇನಪ್ಪ – ಕೂರ್ಮ
ಮೋರೆ ಸೊಟ್ಟು ಯಾಕಪ್ಪ – ವರಾಹ
ತೆರೆದ ಬಾಯ ತೋರಪ್ಪ – ನಾರಸಿಂಹ
ಬಲಿಗೆ ಕಾವಲಾಗಪ್ಪ – ವಾಮನ
ಭೃಗುರಾಮಪ್ಪ – ಪರಶುರಾಮ
ವನಚರನು ನೀನಾಗಪ್ಪ – ಶ್ರೀರಾಮ
ಕಡಿವಾಣನ ಪಿಡಿಯಪ್ಪ – ಶ್ರೀಕೃಷ್ಣ
ಮೋಹಶಾಸ್ತ್ರವ ಕಲಿಸಪ್ಪ – ಬುದ್ಧ
ದಿಟ್ಟ ತೇಜಿಯನೇರಪ್ಪ – ಕಲ್ಕಿ

ಕೀರ್ತನೆ – ೬

ನುಡಿ – ೧ **ಮಣ್ಣು ಗಂಟು ಕಟ್ಟಿ ಉಪ್ಪು ಕೂಗುವುದು**

ಇದು ಒಂದು ಜಾನಪದ ಮಕ್ಕಳಾಟ, ಮಗುವಿನ ತಲೆಯ ಮೇಲೆ ಒಂದು ಸಣ್ಣ ಮಣ್ಣಿನ ಗಂಟನ್ನು ಹೊರಿಸಿ 'ಉಪ್ಪು ಬೇಕೆ ಉಪ್ಪು' ಎಂದು ಓಡಾಡಿಸುವರು. ಓರಗೆಯ ಮಕ್ಕಳು ಗ್ರಾಹಕರಂತೆ ನಟಿಸುತ್ತಾರೆ. ಕೃಷ್ಣನ ಬಾಲಲೀಲೆಗಳಲ್ಲಿ ಈ ಉಪ್ಪಾಟವೂ ಒಂದು.

ಕೀರ್ತನೆ – ೧೪

ಇದು ದಶಾವತಾರಸ್ತುತಿ

ಕಣ್ಣ ಮುಚ್ಚಲು ಒಲ್ಯ = ಮತ್ಸ್ಯ
ಗಿರಿಯ ಹೊತ್ತ ಗೂನಣ್ಣ = ಕೂರ್ಮ
ಅಸುರರಿಗೆ ಮೋಸ ಮಾಡಿದ = ಮೋಹಿನಿ
ಹಲ್ಲಣ್ಣ ಕೋರೆ ಹಲ್ಲಣ್ಣ = ವರಾಹ
ಕಂಬದಿಂದ ಬಂದ್ಯಣ್ಣ = ನಾರಸಿಂಹ
ಒಂದೆ ಬಾರಿ ಅಳೆದ್ಯಣ್ಣ = ವಾಮನ
ರಾಮಣ್ಣ ಬಡಿಬ್ಯಾಡಣ್ಣ = ಪರಶುರಾಮ
ರಾವಣನ ಬಡಿಬೇಕಣ್ಣ = ಶ್ರೀರಾಮ
ಕೊಲ್ಲ ಬಂದ ಹೆಣ್ಣ ಕೊಲೆಮಾಡಿದ = ಶ್ರೀಕೃಷ್ಣ
ಕುದುರೆಯ ನೀನೇರಿದ್ಯಣ್ಣ = ಕಲ್ಕಿ

ನುಡಿ – ೮ **ಮಾವನ ನೀ ಕಳೆದ್ಯಣ್ಣ !**

ಶ್ರೀಕೃಷ್ಣ ತನ್ನ ಸೋದರಮಾವನಾದ ಕಂಸನನ್ನು ಕೊಂದ.

ಮಾನಿನಿಯರ ಬಿಡಿಸಿದ್ಯಣ್ಣ !

ನರಕಾಸುರ ಸೆರೆಯಿಂದ ಮಾನಿನಿಯರನ್ನು ಶ್ರೀಕೃಷ್ಣ ರಕ್ಷಿಸಿದ.

ನುಡಿ – ೯ **ನೀನಿಲ್ಲದೆ ಒಂದಿಲ್ಲಣ್ಣ**

ಭಗವಂತನ ಸಾನ್ನಿಧ್ಯವಿಲ್ಲದ ವಸ್ತುಗಳು ಯಾವುದೂ ಇಲ್ಲ. ಅವನು ಸರ್ವವ್ಯಾಪಿ.

ಎಲ್ಲವು ನೀ ಬಲ್ಲ್ಯಣ್ಣ

ಭಗವಂತ ಸರ್ವಜ್ಞ, ಅವನು ಎಲ್ಲವನ್ನೂ ಅರಿತವನು.

ನಿನ್ನ ಬಲ್ಲವರಿಲ್ಲಣ್ಣ

ಭಗವಂತನ ಜ್ಞಾನವನ್ನು ಪೂರ್ಣವಾಗಿ ಹೊಂದಿದ ಮಾನವರು ಯಾರೂ ಇಲ್ಲ.

ಕೀರ್ತನೆ – ೨೨

ನುಡಿ – ೧ **ಭಾರತಿ**

ಸರಸ್ವತಿ ಭಾರತಿಯರು ಕೃತಿನಾಮಕ ಲಕ್ಷ್ಮೀದೇವಿ ಮತ್ತು ಪ್ರದ್ಯುಮ್ನ ನಾಮಕ ನಾರಾಯಣನ ಪುತ್ರಿಯರು. ಭಾರತಿ ವಾಯುದೇವರ ಪತ್ನಿ. ಆದ್ದರಿಂದ ವಾಯುದೇವರನ್ನು ಭಾರತೀಶ, ಭಾರತಿರಮಣ ಎನ್ನುತ್ತಾರೆ.

ನುಡಿ – ೨ **ಐದೇಳು ನಾಮಗಳು** (೫ + ೭ = ೧೨) ವೈಷ್ಣವರು ದೇಹದ ಮೇಲೆ ಧರಿಸುವ ದ್ವಾದಶ ನಾಮಗಳು

ಐದು ಮುದ್ರಾಂಕಿತ = ಶಂಖ, ಚಕ್ರ, ಗದಾ, ಪದ್ಮ, ನಾರಾಯಣ ಈ ಪಂಚ ಮುದ್ರೆಗಳ ಗುರುತನ್ನು ವೈಷ್ಣವರು ತಮ್ಮ ದೇಹದ ಮೇಲೆ ಧರಿಸುತ್ತಾರೆ.

ಐದು ಭೇದ = ಪಂಚಭೇದಗಳು

೧) ಜೀವ–ಜೀವ ೨) ಜೀವ–ಜಡ ೩) ಜಡ–ಜಡ

೪) ಜೀವ–ಈಶ್ವರ ೫) ಜಡ–ಈಶ್ವರ

ತಾರತಮ್ಯ = ಶ್ರೀಹರಿ ಮತ್ತು ಇತರ ದೇವತೆಗಳಿಗೆ ಅಂತರವಿದೆ. ಇದು ದೇವತಾ ತಾರತಮ್ಯ. ಹೀಗೆಯೇ ಎಲ್ಲ ಜೀವಿಗಳಲ್ಲೂ ತಾರತಮ್ಯವಿದೆ. ಎಲ್ಲ ದೇವತೆಗಳೂ ಒಂದೇ ಅಲ್ಲ. ಎಲ್ಲ ಜೀವಿಗಳೂ ಒಂದೇ ಅಲ್ಲ. ಶ್ರೀ ಹರಿಯು ಸರ್ವೋತ್ತಮ.

ಉಳಿದೆಲ್ಲ ದೇವತೆಗಳು ಹರಿಯ ಅನುಚರರು ಎಲ್ಲ ಕಡೆಯಲ್ಲೂ ನೀಚ–ಉಚ್ಚ ಭಾವನೆಗಳು ಇವೆ. ಈ ತಾರತಮ್ಯ ವಾಸ್ತವ. ತಾರತಮ್ಯ ರಹಿತವಾದ ಪರಿಕಲ್ಪನೆ ಆದರ್ಶ ಅಥವಾ ಭ್ರಮೆ – ಇದು ತಾರತಮ್ಯ ತತ್ವ.

ಐದು ಮೂರನೆ ಮಗು : (೫ + ೩ = ೮) ದೇವಕಿಗೆ ಎಂಟನೆಯ ಮಗನಾಗಿ ಜನಿಸಿದ ಬಾಲಕೃಷ್ಣ.

ಕೀರ್ತನೆ – ೨೪

ನುಡಿ – ೪ ವಿಪರೀತಂಗಳಗೈದ ಭೃಗು

ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠ ಎಂದು ಪರೀಕ್ಷಿಸಲು ಭೃಗುಮುನಿ ವೈಕುಂಠಕ್ಕೆ ಬಂದ. ಲಕ್ಷ್ಮೀನಾರಾಯಣರು ಇವನ ಆಗಮನವನ್ನು ಗಮನಿಸಲಿಲ್ಲ. ಕೋಪಗೊಂಡ ಭೃಗು ವಿಷ್ಣುವಿನ ವಕ್ಷಸ್ಥಳಕ್ಕೆ ಕಾಲಿನಿಂದ ಒದ್ದ. ಒದ್ದವನನ್ನು ಉಪಚರಿಸಿ ಅವನ ಪಾದವನೊತ್ತಿ ಶ್ರೀಹರಿ ಅವನ ಕೋಪವನ್ನು ಉಪಶಮನ ಮಾಡಿದ. ಅವನ ಗರ್ವ ದೃಷ್ಟಿಯನ್ನು ದೂರಮಾಡಿದ. ಲಕ್ಷ್ಮಿ ನಾರಾಯಣನಿಂದ ದೂರವಾದಳು. ನಾರಾಯಣ ಶ್ರೀನಿವಾಸನಾಗಿ ಉರಗಾದ್ರಿಯಲ್ಲಿ ಹುತ್ತದಲ್ಲಿ ನೆಲಸಿದ – ಇವೆಲ್ಲ ಭೃಗುಮುನಿ ಮಾಡಿದ ಅವಾಂತರಗಳು. **ಪಾಪಿಮಾಧವ** : ಕಾಳಹಸ್ತಿಯ ಪುರಂದರನೆಂಬ ಸೋಮಯಾಜಿಯ ಮಗ ಮಾಧವ. ವೇದವೇದಾಂಗ ಪರಿಣತನಾಗಿದ್ದರೂ ಅವನು ಕಾಮಾಂಧನಾಗಿದ್ದ. ಸಂಸಾರವಿಮುಖನಾಗಿ ಕುಂತಲೆಯೆಂಬ ಚಂಡಾಲಸ್ತ್ರೀಯೊಂದಿಗೆ ವಾಸಿಸುತ್ತಿದ್ದ. ಕ್ರಮೇಣ ಮದ್ಯವ್ಯಸನಿಯಾದ ಕುಂತಳೆ ಮೃತಳಾದಾಗ ಹುಚ್ಚನಂತಾದ. ತಾನು ಧರ್ಮಭ್ರಷ್ಟವಾದ ಬಗ್ಗೆ ಪಶ್ಚಾತ್ತಾಪವುಂಟಾಯಿತು. ಕಪಿಲತೀರ್ಥದಲ್ಲಿ ಸ್ನಾನಮಾಡಿ ಪಾಪಮುಕ್ತನಾಗಿ ಮುಂದೆ ಸುಧರ್ಮರಾಜನ ಮಗ ಆಕಾಶರಾಜನಾಗಿ ಜನಿಸಿದ. ಪದ್ಮಾವತಿಯನ್ನು ಮಗಳಾಗಿ ಪಡೆದ.

ನುಡಿ – ೫ ಅಪ್ರಾಕೃತಕಾಮಿ

'ಕ' ಎಂದರೆ ಸುಖ. 'ಆಮ' ಎಂದರೆ ಪರಿಮಾಣ ರಹಿತವಾದ್ದು. ಪ್ರಾಕೃತ ಜೀವಿಗಳು ಅನುಭವಿಸುವ ಸುಖಕ್ಕೆ ಪರಿಮಿತಿ ಇದೆ. ಜನನ ಮರಣಾದಿ ದುಃಖಗಳಿವೆ. ಇವುಗಳ ಲೇಪವಿಲ್ಲದೆ ಪೂರ್ಣಸುಖವನ್ನು ಅಮಿತವಾಗಿ ಅನುಭವಿಸುವನು ಶ್ರೀ ಹರಿ ಒಬ್ಬನೇ. ಆದ್ದರಿಂದ ಶ್ರೀ ಹರಿಯನ್ನು 'ಪೂರ್ಣಕಾಮಿ' ಎನ್ನುತ್ತಾರೆ. ಅವನು ಅನುಭವಿಸುವ ಸುಖಪ್ರಾಕೃತರು

ಅನುಭವಿಸುವ ಅಲ್ಪಸುಖಕ್ಕಿಂತ ಭಿನ್ನವಾದ್ದರಿಂದ ಅವನು 'ಅಪ್ರಾಕೃತಕಾಮಿ'.

ಮೂರೆಡು ಅರಿಗಳು = (೩ × ೨ = ೬) ಅರಿಷಡ್ವರ್ಗಗಳು (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ)

ಮೂರೈದು ಮದಗಳು = (೩ + ೫ = ೮) ಅಷ್ಟಮದಗಳು (ಕುಲಮಧ, ರೂಪಮದ, ಯೌವನಮದ, ವಿದ್ಯಾಮದ, ಧನಮದ, ರಾಜ್ಯಮದ, ಅನ್ನಮದ, ಅಧಿಕಾರಮದ)

ಮೂರು ನಾಲ್ಕು ಎರಡು ಅಂಡಗಳು = (೩ × ೪) × ೨ = ೨೪ ಚತುರ್ದಶ ಬ್ರಹ್ಮಾಂಡಗಳು (ಭೋಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ, ಸತ್ಯಲೋಕ; ಅತಳ, ವಿತಳ, ಸುತಳ, ತಳಾತಳ, ರಸಾತಳ, ಮಹಾತಳ ಮತ್ತು ಪಾತಾಳ)

ಮೂರು ಮಾಡುವ = ಸೃಷ್ಟಿ, ಸ್ಥಿತಿ ಮತ್ತು ಲಯಕಾರ್ಯ ಮಾಡುವ

ಮೂರೈದು ಕ್ರಿಯೆಗಳು = (೩ + ೫ = ೮) ಅಷ್ಟ ಕ್ರಿಯೆಗಳು, ಅಷ್ಟಕರ್ಮಗಳು (ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ನಿಯಮನ)

ಮೂರು ಕಾಲ = ತ್ರಿಕಾಲ (ಜಾಗೃತ್, ಸ್ವಪ್ನ, ಸುಷುಪ್ತಿ)

ಮೂರು ವಸ್ತುಗಳು = ಈಷಣತ್ರಯ (ಸತಿಮೋಹ, ಸುತಮೋಹ, ದ್ರವ್ಯಮೋಹ)

ಮೂರು ಏಳು = (೩ + ೭ = ೧೦) ದಶೇಂದ್ರಿಯಗಳ ಅಪೇಕ್ಷೆಗಳು (ಕಿವಿ, ಕಣ್ಣು, ಮೂಗು, ನಾಲಗೆ, ಚರ್ಮ, ಮುಖ, ಕೈ, ಕಾಲು, ಆಸನ, ಉಪಸ್ಥ – ಇವುಗಳ ಅಪೇಕ್ಷೆ)

ಕೀರ್ತನೆ – ೨೮

ಗಜುಗವಾಡುತಲಿರ್ದನು

ಗ್ರಾಮೀಣ ಪ್ರದೇಶದಲ್ಲಿ ಚಿರಪರಿಚಿತವಾಗಿದ್ದ ಮಕ್ಕಳ ಆಟಗಳಲ್ಲಿ ಗಜ್ಜುಗದ ಆಟವೂ ಒಂದು. ಇವುಗಳಲ್ಲಿ ಹಲವು ವಿಧಾನಗಳಿವೆ. ಗಜ್ಜುಗಳನ್ನು ಹಾರಿಸುವ ಆಟ, ಹೊಡೆಯುವ ಆಟ, ಬಚ್ಚಿಡುವ ಆಟ, ಗೆರೆಯ ದಾಟುವ ಆಟ ಹೀಗೆ ಕೃಷ್ಣನು ಆಡಿದ ಗಜ್ಜುಗದ ಆಟಗಳ ಪ್ರಸ್ತಾಪ ಇಲ್ಲಿದೆ.

ಕೀರ್ತನೆ – ೨೯

ನುಡಿ – ೧೩ ಒಲಿದು ಇಟ್ಟಿಗೆ ಕೊಂಡ

ಪುಂಡರೀಕನೆಂಬ ಭಕ್ತನಿಗೆ ಒಲಿದ ಶ್ರೀಹರಿ ಅವನಿಗೆ ಪ್ರತ್ಯಕ್ಷನಾಗಿ ಅವನು ಕೊಟ್ಟ ಇಟ್ಟಿಗೆಯ ಮೇಲೆ ನಿಂತು ಪಾಂಡುರಂಗನಾದ. ಪಾಂಡವರಿಗೆ ಅತ್ಯಂತಪ್ರಿಯನಾದ ರಂಗನೇ ಪಾಂಡುರಂಗ. ಅವನೇ ಪಂಡರಿರಾಯನು.

ನುಡಿ – ೨೧ ಅವಿಕಾರಿ

ಹಲವು ಅವತಾರಗಳನ್ನು ಮಾಡಿದರೂ ಹರಿಯ ಮೂಲರೂಪ ವಿಕಾರ ಹೊಂದುವುದಿಲ್ಲ. ಅವನು ಹುಟ್ಟು, ಸಾವು, ಬಾಲ್ಯ, ಯೌವನ, ಮುಪ್ಪುಗಳು ಇಲ್ಲದೆ ಇದ್ದಂತೆಯೇ ಇರುತ್ತಾನೆ. ಆದ್ದರಿಂದ ಅವನನ್ನು 'ಅವಿಕಾರಾಯ, ಶುದ್ಧಾಯ, ನಿತ್ಯಾಯ ಪರಮಾತ್ಮನೇ' ಎನ್ನುತ್ತಾರೆ. ಅವಿಕಾರತೆ, ಶುದ್ಧತ್ವ ಮತ್ತು ನಿತ್ಯತೆ ಇವು ಪರಮಾತ್ಮನ ಲಕ್ಷಣಗಳು.

ನುಡಿ – ೨೪ ಮುದ್ರೆದಾಸರು

ಶ್ರೀ ಹರಿಯ ಆಯುಧಗಳಾದ ಪಂಚಮುದ್ರೆಗಳನ್ನು ದೇಹದ ಮೇಲೆ ಧರಿಸುವಭಕ್ತರು. ಅಂಕಿತಪಡೆದು ಹರಿದಾಸರಾದವರೂ ಮುದ್ರೆದಾಸರೇ.

ಕೀರ್ತನೆ – ೩೦

ನುಡಿ – ೨ ಸಂದೀಪನ ಕಂದನ ತಂದಿತ್ತ ....

ಸಾಂದೀಪಿನಿ ಎಂಬ ಬ್ರಾಹ್ಮಣ ಆವಂತಿ ಪಟ್ಟಣದಲ್ಲಿ ವಾಸವಾಗಿದ್ದ. ಬಲರಾಮ, ಶ್ರೀಕೃಷ್ಣ ಮತ್ತು ಸುಧಾಮರು ಈತನಲ್ಲಿ ವಿದ್ಯಾಭ್ಯಾಸ ಮಾಡಿದವರು. ಸಾಂದೀಪಿನಿಯ ಮಗನನ್ನು ಪಂಚಜನ ಎಂಬ ದೈತ್ಯ ಅಪಹರಿಸಿ ಸಮುದ್ರದಲ್ಲಿ ಅಡಗಿಕೊಂಡಿದ್ದ. ವಿದ್ಯಾಭ್ಯಾಸವನ್ನು ಮುಗಿಸಿದ ಕೃಷ್ಣ ಬಲರಾಮರು 'ಗುರುದಕ್ಷಿಣೆಯಾಗಿ ಏನನ್ನು ಕೊಡಬೇಕು' ಎಂದು ಸಾಂದೀಪಿನಿಯನ್ನು ಕೇಳಿದರು. ಮೃತನಾದ ತನ್ನ ಮಗನನ್ನು ಗುರುದಕ್ಷಿಣೆಯಾಗಿ ತಂದು ಒಪ್ಪಿಸಬೇಕೆಂದು ಸಾಂದೀಪಿನಿ ಹೇಳಿದ. ಶ್ರೀಕೃಷ್ಣ ಸಮುದ್ರವನ್ನು ಹೊಕ್ಕು ಪಂಚಜನನನ್ನು ಸಂಹರಿಸಿ ಗುರುಪುತ್ರನನ್ನು ಕರೆತಂದು ಗುರುವಿಗೆ ಒಪ್ಪಿಸಿದ.

ನುಡಿ – ೧೯ ಪುಟ್ಟ ರೂಪವಕೊಂಡು ಸುಟ್ಟನು ಅಸುರರನ್ನು

ತ್ರಿಪುರಾಸುರರ ಸಂಹಾರಕಾಲದಲ್ಲಿ ಶಿವನಿಗೆ ಕೊಟ್ಟ ಮಾತಿನಂತೆ ಶ್ರೀಹರಿ ಬಾಲರೂಪವನ್ನು ಧರಿಸಿ ತ್ರಿಪುರಾಸುರರ ಪತ್ನಿಯರ

ಎದುರು ಸುಳಿದಾಡಿದ. ಅವರ ವ್ರತಭಂಗ ಮಾಡುವ ಮೂಲಕ ತ್ರಿಪುರಾಸುರರ ಸಾವಿಗೆ ಪರೋಕ್ಷವಾಗಿ ಕಾರಣನಾದ. ಶಿವನಿಗೆ ತ್ರಿಪುರಾರಿ ಎಂಬ ಹೆಸರಾಯಿತು. ತ್ರಿಪುರದ ಸತಿಯರ ವ್ರತಭಂಗ ಮಾಡಿದ ಬಾಲರೂಪಿ ಬುದ್ಧನ ಪ್ರಸ್ತಾಪ ಇಲ್ಲಿದೆ.

ಕೀರ್ತನೆ – ೩೨

ನುಡಿ – ೧೨ **ತಂಬಿಗೆ ನೀರ ತಂದಿಟ್ಟ ಪಾದಂಗಳ ....**
ಇದು ಪುರಂದರದಾಸರ ಜೀವನಕ್ಕೆ ಸಂಬಂಧಿಸಿದ ಒಂದು ಪವಾಡ. ಒಮ್ಮೆ ಪುರಂದರದಾಸರು ಮೃತ್ತಿಕಾಶೌಚಕ್ಕಾಗಿ ಒಂದು ತಂಬಿಗೆಯಲ್ಲಿ ನೀರನ್ನು ತರಲು ತಮ್ಮ ಶಿಷ್ಯ ಅಪ್ಪಣ್ಣನಿಗೆ ಹೇಳಿದರು. ನಿದ್ರೆ ಮಾಡುತ್ತಿದ್ದ ಅಪ್ಪಣ್ಣ ದಾಸರ ಮಾತನ್ನು ಗಮನಿಸಲಿಲ್ಲ. ಆಗ ಪಾಂಡುರಂಗನೇ ಅಪ್ಪಣ್ಣನ ರೂಪದಲ್ಲಿ ಬಂದು ತಂಬಿಗೆಯಲ್ಲಿ ನೀರನ್ನು ತಂದು ನೀಡಿದನೆಂದು ಜನಜನಿತವಾದ ಕಥೆ. ಪುರಂದರದಾಸರ 'ಮುಯ್ಯಕ್ಕೆ ಮುಯ್ಯಿ ತೀರಿತು' ಕೀರ್ತನೆಯಲ್ಲಿ ಇದರ ಪ್ರಸ್ತಾಪವಿದೆ.

ಕೀರ್ತನೆ – ४೧

ನುಡಿ – ೧ **ಧೀರನೆ ನಿನ್ನಲಿ ಇದ್ದನ ಕೊಲಿಸಿದಿ ....**
ಇದು ಪರಶುರಾಮನ ಅವತಾರಕ್ಕೆ ಸಂಬಂಧಿಸಿದ್ದು. ಕಾರ್ತವೀರ್ಯನು ಜಮದಗ್ನಿಯ ಆಶ್ರಮಕ್ಕೆ ಅತಿಥಿಯಾಗಿ ಬಂದು ಸತ್ಕಾರವನ್ನು ಪಡೆದ. ಆಶ್ರಮದಲ್ಲೇ ಇದ್ದ ಕಪಿಲೆಗೆ ಆಸೆ ಪಟ್ಟು ಜಮದಗ್ನಿಯನ್ನು ಕೊಲ್ಲಿಸಿ ಪರಶುರಾಮನ ಆಕ್ರೋಶಕ್ಕೆ ಕಾರಣನಾಗಿ ಹತನಾದ.

ನುಡಿ – ೨ ಪಕ್ಷಿಗಮನ = ಗರುಡಗಮನನಾದ ಶ್ರೀಹರಿ
ಅಕ್ಷಯಕೊಟ್ಟನೆ = ದ್ರೌಪದಿಗೆ ಅಕ್ಷಯವಸ್ತ್ರ ನೀಡಿದ ಶ್ರೀಕೃಷ್ಣ
ಪಕ್ಷಯಾದವನೆ = ಯಾದವರ ಪಕ್ಷಕ್ಕೆ ಸೇರಿದ ಶ್ರೀಕೃಷ್ಣ
ಪಕ್ಷಿಯ ಸಲಹಿದಿ = ಜಟಾಯುವನ್ನು ಸಲಹಿದ ಶ್ರೀರಾಮ
ಪಕ್ಷಿಯ ಶಿಕ್ಷಿಸಿದಿ = ಕಾಕಾಸುರನನ್ನು ಶಿಕ್ಷಿಸಿದ ಶ್ರೀರಾಮ
ಪಕ್ಷವ ಸೀಳಿದಿ = ಭೇದೋಪಾಯದ ಮೂಲಕ ಕರ್ಣನ ಜನ್ಮವೃತ್ತಾಂತವನ್ನು ತಿಳಿಸಿ ಕೌರವ ಪಕ್ಷವನ್ನು ಸೀಳಿದ ಶ್ರೀಕೃಷ್ಣ
ಪಕ್ಷ ಐವರಪಿಡಿದು = ಪಂಚಪಾಂಡವರ ಪಕ್ಷವನ್ನು ವಹಿಸಿ
ರಥವ ನೆಲಕೆ ತುಳಿದು = ಕರ್ಣನ ಸರ್ಪಾಸ್ತ್ರದಿಂದ ಅರ್ಜುನನನ್ನು ರಕ್ಷಿಸಿದ ಪ್ರಸಂಗ

ನುಡಿ – ೩ **ಬಾಲನಾಗಿ ಅತ್ರಿ ಸತಿಯಲಿ ಜನಿಸಿದಿ** = ಅತ್ರಿಯ ಸತಿಯಾದ ಅನುಸೂಯೆಯ ಮಗನಾಗಿ ಜನಿಸಿದ ದತ್ತಾವತಾರದ ಪ್ರಸ್ತಾಪ
ಬಾಲನಾಗಿ ಸತ್ಯವತಿಗೆ ನೀ ತೋರಿದಿ = ಸತ್ಯವತಿಯ ಮಗನಾದ ವೇದವ್ಯಾಸರ ಅವತಾರ
ಬಾಲನಾಗಿ ತತ್ವ ತಾಯಿಗೆ ಪೇಳಿದಿ = ದೇವಹೂತಿಗೆ ಸಾಂಖ್ಯ ತತ್ವವನ್ನು ಭೇದಿಸಿದ ಶ್ರೀಹರಿಯ ಕಪಿಲಾವತಾರ

ಕೀರ್ತನೆ – ೪೧

ಪ – **ನೀಲಾದೇವಿ ಅರಸ** : ಶ್ರೀಕೃಷ್ಣ. ನೀಲಾದೇವಿ ಕೋಸಲರಾಜನಾದ ನಗ್ನಜಿತನ ಮಗಳು. ಶ್ರೀಕೃಷ್ಣನ ಅಷ್ಟ ಮಹಿಷಿಯರಲ್ಲಿ ಒಬ್ಬಳು. ಇವಳಿಗೆ ಸತ್ಯೆ ಎಂಬ ಹೆಸರೂ ಇತ್ತು. ಆದ್ದರಿಂದ ಶ್ರೀಕೃಷ್ಣನನ್ನು ಸತ್ಯಾರಮಣ ಎನ್ನುತ್ತಾರೆ.

ಕೀರ್ತನೆ – ೪೩

ನುಡಿ – ೧ **ಕಂದಗೆ ಒಲಿದ ದೇವ** ಹಸುಳೆ ಧ್ರುವರಾಯಗೆ/ಪ್ರಹ್ಲಾದಗೆ ಒಲಿದವನು.

ಕಂದನಾಗಿ ಮಾತಲಾಲಿಸಿ ದಶರಥನ ಕಂದನಾಗಿ ತಂದೆಯ ಮಾತಿನಂತೆ ರಾಜ್ಯತ್ಯಾಗ ಮಾಡಿ ಪಿತೃವಾಕ್ಯಪರಿಪಾಲಕನಾದ ಶ್ರೀರಾಮ.

ಕಂದಗೊಲಿದು ಅವನ ಕೊಂಡು : ಸೂರ್ಯನ ಕಂದನಾದ ಸುಗ್ರೀವನಿಗೆ ಒಲಿದು ಅವನನ್ನು ಮುಂದಿಟ್ಟುಕೊಂಡು ಶ್ರೀರಾಮ ಲಂಕೆಗೆ ಯುದ್ಧಕ್ಕೆ ಹೊರಟ.

ಕಂದನೆತ್ತಿ ಲಾಲಿಸಿದನ ...... ಕೈಕಸಿಯ ಕಂದನಾದ ವಿಭೀಷಣನನ್ನು ಉದ್ಧಾರಮಾಡಿದ ಶ್ರೀರಾಮ.

ಕಂದನಶಿರವ ಎರಡು ಮಾಡಿ : ತನ್ನ ಸೋದರತ್ತೆಯಾದ ಶ್ರುತಶ್ರವೆಯ ಕಂದನಾದ ಶಿಶಿಪಾಲನ ತಲೆಯನ್ನು ತೆಗೆದ ಶ್ರೀಕೃಷ್ಣ
ಕಂದಗೊಲಿದು ಕಲ್ಲನೇರಿ .... ಪುಂಡರೀಕನಿಗೆ ಒಲಿದು ಇಟ್ಟಿಗೆ ಮೇಲೆ ನಿಂತ ಪಾಂಡುರಂಗ.

ನುಡಿ – ೩ **ಇದು ದಶಾವತಾರಸ್ತುತಿ. ಕಪ್ಪುಮಯ್ಯ** – ಮತ್ಸ್ಯ
ಅಪ್ರಮೇಯ = ಕೂರ್ಮ
(ಅಳತೆಗೆ ಸಿಗದ ಶಕ್ತಿ ಶಾಲಿಯಾಗಿ ಮಂದರ ಪರ್ವತನನ್ನೇ ಎತ್ತಿದವನು)

ವಕ್ರದಂತಿಗಳುಳ್ಳವನು = ವರಾಹ, ಒಪ್ಪು ಇಲ್ಲದ = ಆಕರ್ಷಕ ದೇಹಸೌಂದರ್ಯವಿಲ್ಲದ ಕುಬ್ಜವಾಮನ. **ಅಸುರನ ನಿಗ್ರಹಿಸಿದ** = ಶ್ರೀರಾಮ, **ಅಮಿತ ವಿಕ್ರಮ** = ಪರಶುರಾಮ, **ಅಪಾರ ಮಹಿಮೆ ತೋರಿದವನು** = ಶ್ರೀಕೃಷ್ಣ, **ಪ್ರಹ್ಲಾದ ವರದ** = ನರಸಿಂಹ, **ಸುರರಿಗಮೃತವನಿತ್ತ ದೇವ** = ಮೋಹಿನಿ, **ಒಪ್ಪು ಇಲ್ಲದ ಮೂರುತಿ** = ಒಂದು ನೆಲೆಯಲ್ಲಿ ನಿಲ್ಲದ ನಿತ್ಯ ಸಂಚಾರಿ = ಕಲ್ಕಿ – ಇಲ್ಲಿ ದಶಾವತಾರದ ಕ್ರಮ ವ್ಯತ್ಯಾಸವಾಗಿದೆ.

ಕೀರ್ತನೆ – ೪೫

ನುಡಿ – ೧ **ಶೂರನಾಮಕನ ಪೌತ್ರ** ಯದುವಂಶದ ಶೂರರಾಜನ ಮಗ ವಸುದೇವ. ವಸುದೇವನ ಮಗ ಶ್ರೀಕೃಷ್ಣ.

ನುಡಿ – ೨ **ಕಾಲುರಹಿತನೆ** = ಮತ್ಸ್ಯ, **ಕಾಲುತೋರದನೆ** = ಕೂರ್ಮ, **ಕೇಶಮ್ಯೆ** = ವರಾಹ,

ಮೃಗರಾಜ = ನರಸಿಂಹ, **ಸುಂದರ** = ವಾಮನ, **ನೃಪವೈರಿ** = ಪರಶುರಾಮ,

ದಶಕಂಠ ಘಾತಕ = ಶ್ರೀರಾಮ, **ಬೆಣ್ಣೆಕದ್ದು ಮೆದ್ದ** = ಶ್ರೀಕೃಷ್ಣ, **ನಾಚಿಕೆ ಬಿಟ್ಟು ನಗುತ ನಿಂತ** = ಬುದ್ಧ,

ಕಾಶ್ಯಪಿಯೊಳು ಮೆರೆದ ಧೀರ = ಕಲ್ಕಿ, **ಭೂದಾನಗೈದವ** = ಪರಶುರಾಮ, ಪರಶುರಾಮನು ಅಶ್ವಮೇಧಯಾಗ ಮಾಡಿ ಭೂಮಂಡಲವನೆಲ್ಲ ಕಶ್ಯಪರಿಗೆ ದಾನ ಮಾಡಿದ ಉಲ್ಲೇಖ ಮಹಾಭಾರತದ ಶಾಂತಿಪರ್ವದಲ್ಲಿದೆ. ಈ ಕೀರ್ತನೆಯಲ್ಲಿ ದಶಾವತಾರದ ಉಲ್ಲೇಖ ಮೊದಲ ನುಡಿಯಲ್ಲಿ ಒಂದುಬಾರಿ, ಎರಡನೆ ನುಡಿಯಲ್ಲಿ ಎರಡುಬಾರಿ ಮೂರನೆ ನುಡಿಯಲ್ಲಿ ಮೂರುಬಾರಿ ಬಂದಿದ್ದು ಈ ರಚನೆ ವ್ಯಾಸವಿಠಲರ 'ತಿಳಿಯದೊ ನಿನ್ನಾಟ ತಿರುಪತಿಯ ವೆಂಕಟ' ಕೀರ್ತನೆಯನ್ನು ಹೋಲುತ್ತದೆ.

ಕೀರ್ತನೆ – ೫೬

ನುಡಿ – ೧ **ಗುರುಪತ್ನಿಗೆ ಪುತ್ರನ ತಂದಿತ್ತ ಸಾಹಸಿ** – ನೋಡಿ ಕೀ ೩೦ ರ ಟಿಪ್ಪಣಿ.

ನುಡಿ – ೨ **ಮುಚುಕುಂದ ರಾಯನಿಂದ ದೈತ್ಯನ ಕೊಲ್ಲಿಸಿ** .... ಕಾಲಯವನ ಎಂಬುವನು ಗರ್ಗಮಹರ್ಷಿಯ ಮಗ. ಇವನ

ಉಪಟಳವನ್ನು ನಿಯಂತ್ರಿಸಲು ಕೃಷ್ಣನಿಗೂ ಸಾಧ್ಯವಾಗಲಿಲ್ಲ. ಮುಚಕುಂದನ ದೃಷ್ಟಿಪಾತದಿಂದ ಕಾಲಯವನ ಅಂತ್ಯವಾಗುವಂತೆ ಮಾಡಿದ ಕೃಷ್ಣನ ತಂತ್ರದ ಉಲ್ಲೇಖ ಇದು.

ನುಡಿ – ೩ **ಉತ್ತರೆಯ ಗರ್ಭದಲಿ ಇದ್ದ ಶಿಶು** .... ಉತ್ತರೆ ಅಭಿಮನ್ಯುವಿನ ಹೆಂಡತಿ. ವಿರಾಟನ ಮಗಳು, ಪರೀಕ್ಷಿತ ರಾಜನ ತಾಯಿ. ಅಶ್ವತ್ಥಾಮ ಉತ್ತರೆಯ ಗರ್ಭವನ್ನು ನಾಶಮಾಡಲು ಐಶೀಕಾಸ್ತ್ರವನ್ನು ಪ್ರಯೋಗ ಮಾಡಿದ. ಶ್ರೀಕೃಷ್ಣನು ಉತ್ತರೆಯ ಗರ್ಭಕ್ಕೆ ರಕ್ಷಣೆ ನೀಡಿ ಪಾಂಡವರ ವಂಶ ಉಳಿಯುವಂತೆ ಮಾಡಿದ.

ಕೀರ್ತನೆ – ೬೮

ಇದೊಂದು ನಿಂದಾಸ್ತುತಿ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಹುಚ್ಚಾದರೆ ಶ್ರೀಹರಿಗೆ ಮತ್ತೆ ಮತ್ತೆ ಅವತಾರ ಮಾಡುವ ಹುಚ್ಚು. ಅವನಿಗೆ ಹುಚ್ಚು ಹಿಡಿದರೆ ವಿಚಿತ್ರವಾಗಿ ವರ್ತಿಸುತ್ತಾನೆ. ನೀರಿಗೆ ಬೀಳುತ್ತಾನೆ (ಮತ್ಸ್ಯ), ಕಲ್ಲು ಗುಂಡು ಹೊರುತ್ತಾನೆ (ಕೂರ್ಮ), ಗೆಡ್ಡೆ ಗೆಣಸುಗಳನ್ನು ಕಚ್ಚಿ ಕಚ್ಚಿ ತಿನ್ನುತ್ತಾನೆ (ವರಾಹ), ವಿಪರೀತ ಕೋಪಗೊಳ್ಳುತ್ತಾನೆ (ನರಸಿಂಹ), ಭಿಕ್ಷೆ ಬೇಡುತ್ತಾನೆ (ವಾಮನ), ರಾಜರನ್ನೇ ಬಡಿಯುತ್ತಾನೆ (ಪರಶುರಾಮ), ಎಂಜಲು ತಿನ್ನುತ್ತಾನೆ (ಶ್ರೀರಾಮ), ದನಗಳನ್ನು ಮೇಯಿಸುತ್ತಾನೆ (ಶ್ರೀಕೃಷ್ಣ), ಬೆತ್ತಲಾಗುತ್ತಾನೆ (ಬುದ್ಧ), ವೈದ್ಯನಾಗಿ ಮದ್ದು ಕುಡಿಯುತ್ತಾನೆ (ಧನ್ವಂತ್ರಿ), ಕುದುರೆ ಹತ್ತಿ ಮೆರೆಯುತ್ತಾನೆ (ಕಲ್ಕಿ), – ಇಲ್ಲಿ ಹನ್ನೊಂದು ಅವತಾರಗಳ ಪ್ರಸ್ತಾಪವಿದೆ.

ಕೀರ್ತನೆ – ೮೨

ರಘೋತ್ತಮ ತೀರ್ಥರು (೧೫೭೬) ಇವರ ಬೃಂದಾವನ ತಮಿಳುನಾಡಿನ ದಕ್ಷಿಣ ಪಿನಾಕಿನಿ ತೀರದ ತಿರುಕೋಯಿಲೂರಿನಲ್ಲಿದೆ. ಶ್ರೀರಘುವರ್ಯರ ಶಿಷ್ಯರಾದ ಶ್ರೀರಘೋತ್ತಮತೀರ್ಥರು ಉತ್ತರಾದಿ ಮಠದ ಯತಿ ಪರಂಪರೆಯಲ್ಲಿ ಅಗ್ರಮಾನ್ಯರಾದವರು. ಐವತ್ತೈದು ವರ್ಷಗಳಷ್ಟು ದೀರ್ಘಕಾಲ ಪೀಠಾದಿಪತಿಗಳಾಗಿದ್ದು ಮಧ್ವಸಿದ್ಧಾಂತದ ಅಗ್ರಶ್ರೇಣಿಯ ಪ್ರಸಾರಕರು. ಗ್ರಂಥರಚನೆ, ಶಾಸ್ತ್ರಪಾಂಡಿತ್ಯ, ತತ್ವದೀಕ್ಷೆ, ತಪೋನಿಷ್ಠೆಗಳಿಂದ ಅಪೂರ್ವವ್ಯಕ್ತಿತ್ವವನ್ನು ಹೊಂದಿದ್ದ ಮಹಿಮಾನ್ವಿತರು.

ಕೀರ್ತನೆ – ೯೨

ಅಂದು ನಮ್ಮಪ್ಪಣ್ಣ ತುಪ್ಪಕ್ಕೆ ಹೋದನು

ದಾಸರು ತಮ್ಮ ಹಿಂದಿನ ಜನ್ಮದಲ್ಲಿ ಪುರಂದರದಾಸರ ಶಿಷ್ಯರಾದ ಅಪ್ಪಣ್ಣನೆಂದು ಭಾವಿಸುತ್ತಾರೆ. ತುಪ್ಪದ ತಂಬಿಗೆಯ ಘಟನೆಯನ್ನು ನೆನೆಯುತ್ತಾರೆ. ನೋಡಿ ಕೀರ್ತನೆ ೧ರ ಟಿಪ್ಪಣಿ.

ಕೀರ್ತನೆ – ೧೦೧

ಉರಿಮಾರಿಗೆ ಔತಣ

'ಕಾಮ' ಅಥವಾ ಆಸೆಯನ್ನು ಆಶ್ರಯಿಸಿದ ಜೀವವು ಪಡುವ ಸಂಕಟದ ನಿರೂಪಣೆ ಇಲ್ಲಿದೆ. ಕಾಮ ಅಥವಾ ಆಸೆ ನಾವೇ ಇಷ್ಟಪಟ್ಟು ತಂದದ್ದು. ನಾವೇ ಅಂಟಿಸಿಕೊಂಡಿದ್ದು. ಇದು ಎರಡನೇ ಹೆಂಡತಿಯಂತೆ. ನಮ್ಮ ಸೊಕ್ಕು ಮುರಿದು ಮೂಲೆ ಗುಂಪುಮಾಡಿ ಅನ್ಯತ್ರ ಓಡುವುದು ಇದರ ಸ್ವಭಾವ. ಕಾಮದ ನೆಂಟರು ಅರಿಷಡ್‌ವರ್ಗಗಳು. ಇವೂ ಆಸೆಯ ವಶವರ್ತಿಗಳೇ ಆಗಿದ್ದು ವ್ಯಕ್ತಿಯ ಘನತೆಯನ್ನು ನೆಮ್ಮದಿಯನ್ನು ಹಾಳುಮಾಡುತ್ತವೆ.

ಕೀರ್ತನೆ – ೧೦೨

ನುಡಿ – ೧೩ **ನೀನು ಲೊಡಲೊಟ್ಟೆ**

ಲೊಡ ಎಂದರೆ ವ್ಯರ್ಥ ಎಂದು ಅರ್ಥ. ಲೊಟ್ಟೆ ಎಂದರೂ ವ್ಯರ್ಥ ಎಂದು ಅರ್ಥ. ಲೊಡಲೊಟ್ಟೆ ಒಂದು ದ್ವಿರುಕ್ತಿ. 'ಳ' ಕಾರ 'ಡ' ಕಾರವಾಗಿ ಲೊಳಲೊಟ್ಟೆ ಲೊಡಲೊಟ್ಟೆ ಎಂಬ ಎರಡು ರೂಪವನ್ನು ದಾಸರು ಬಳಸುತ್ತಾರೆ. ದೇವರ ಧ್ಯಾನಕ್ಕೆ ಇರುವ ಬೆಲೆ ದರ್ಶನ, ದಾಸ್ಯ, ಶ್ರಾಸ್ತ್ರ, ಧ್ಯಾನಗಳಿಗೆ ಇಲ್ಲ. ಈ ಮೂರು ನೀಡುವ ಫಲವನ್ನು ಹರಿಧ್ಯಾನವೊಂದೇ ನೀಡುವುದರಿಂದ ಉಳಿದೆಲ್ಲವೂ ಲೊಳಲೊಟ್ಟೆಯಂತೆ ಭಾವಿಸುತ್ತಾರೆ.

ಅನುಬಂಧ – ೨
(೨ ಆ) ಟಿಪ್ಪಣಿಗಳು
(ಗುರು ತಂದೆ ಪುರಂದರವಿಠಲರ ಕೀರ್ತನೆಗಳು)

ಕೀರ್ತನೆ – ೪

ನುಡಿ – ೮ **ಉದ್ಧವ** : ಇವನು ಶ್ರೀಕೃಷ್ಣನ ಮಂತ್ರಿ, ವಸುದೇವನ ತಮ್ಮನಾದ ದೇವಭಾಗನ ಮಗ. ಕೃಷ್ಣನು ಕಂಸನನ್ನು ಕೊಂದ ಸುದ್ಧಿಯನ್ನು ಮಧುರೆಗೆ ತಿಳಿಸಿದ ಸುದ್ಧಿವಾಹಕ. ಕೃಷ್ಣನ ನಿರ್ಯಾಣದ ನಂತರ ತನ್ನ ಕೊನೆಯ ದಿನಗಳನ್ನು ಬದರಿ ಕಾಶ್ರಮದಲ್ಲಿ ಕಳೆದ.

ಕೀರ್ತನೆ – ೬

ನುಡಿ – ೧ **ಮಾತೃಕ್ಷೀರ ಉಣದಲೆ ಮಾಡು**
ಮತ್ತೆಮತ್ತೆ ಜೀವಿಗಳಾಗಿ ಹುಟ್ಟಿ ತಾಯಿಯ ಹಾಲುಕುಡಿದು ಲೌಕಿಕ ವ್ಯವಸ್ಥೆಗಳಿಗೆ ಬದ್ಧವಾಗಿರದಂತೆ ವಾಡು. ಪುನರ್ಜನ್ಮವಿಲ್ಲದ ಮುಕ್ತಿಪದವಿ ನೀಡು ಎಂದರ್ಥ.

ಕೀರ್ತನೆ – ೯

ನುಡಿ – ೧ **ಕ್ಷೀರಾಂಬುಧಿ ಸುತಮುಖನೆ** = ಕ್ಷೀರಸಾಗರದಲ್ಲಿ ಜನಿಸಿದ ಚಂದ್ರನಂತಹ ಮುಖ ಉಳ್ಳವನೆ
ಕ್ಷೀರಸಾಗರವಾಸ = ಹಾಲಿನ ಕಡಲಿನಲ್ಲಿ ನೆಲಸಿರುವನು
ಕ್ಷೀರಾಬ್ಧಿ ಸುತೆಪ್ರಿಯ = ಕ್ಷೀರ ಸಮುದ್ರರಾಜನ ಮಗಳಾದ ಲಕ್ಷ್ಮಿಗೆ ಪ್ರಿಯನಾದವನು
ಕ್ಷೀರ ಕೊಟ್ಟಳ ವೈರಿ = ತನಗೆ ಹಾಲು ಉಣಿಸಿದ ಪೂತನಿಯನ್ನು ಕೊಂದ ಶ್ರೀಕೃಷ್ಣ
ಕ್ಷೀರ ಮಥನದಿತೋರ್ದ = ದೇವಾಸುರರಿಗೆ ಅಮೃತ ಹಂಚಿದ ಮೋಹಿನಿ ಅವತಾರಿ ಶ್ರೀಹರಿ
ಮಾತೃಕ್ಷೀರ ಉಣದಲೆ ಮಾಡು = ಪುನರ್ಜನ್ಮವಿಲ್ಲದ ಮುಕ್ತಿ ನೀಡು

ನುಡಿ – ೨ **ನಾಗ ಶಯನ** = ಶೇಷನ ಮೇಲೆಗೆ ಮಲಗಿದವನು
ನಾಗಭೂಷಣಪ್ರಿಯ = ಸರ್ಪಧಾರಿಯಾದ ಶಿವನಿಗೆ ಪ್ರಿಯನಾದವನು
ನಾಗರಕ್ಷಕ = ಗಜರಾಜನನ್ನು ರಕ್ಷಿಸಿದವನು (ನಾಗ = ಆನೆ)
ನಾಗಮರ್ದನ = ಕಾಳಿಂಗ ಸರ್ಪನನ್ನು ನಿಗ್ರಹಿಸಿದವನು

ನಾಗಧ್ವಜ ವೈರಿಪ್ರಿಯ = ಆನೆಯ ಧ್ವಜವನ್ನು ಲಾಂಛನವಾಗಿ ಉಳ್ಳ ದುರ್ಯೋಧನನ ವೈರಿಯಾದ ಭೀಮನಿಗೆ ಪ್ರಿಯನಾದವನು

ನಾಗವೇಣಿಯರರಸ = ಸರ್ಪದಂತೆ ನೀಳ ಜಡೆಯನ್ನು ಹೊಂದಿದ ಸುಂದರಿಯರ ಅರಸ

ಕೀರ್ತನೆ – ೭

ನುಡಿ – ೧ ಧರ್ಮನ ತಮ್ಮನಿಂದ ಜೀವರಪೊರೆವನೆ = ಧರ್ಮರಾಯನ ತಮ್ಮ ಭೀಮಸೇನ. ಭೀಮಸೇನನ ಮೂಲರೂಪ ವಾಯುದೇವರು. ವಾಯುದೇವರ ಮೂಲಕ ಜೀವಿಗಳನ್ನು ರಕ್ಷಿಸುವ ಶ್ರೀಹರಿ.

ಕೀರ್ತನೆ – ೮

ನುಡಿ – ೧ ಜಲದಿಯೊಳು ವಾಡೆಯ ಅಳೆದ

ಓಡು ಎಂದರೆ ದೋಣಿ ಎಂದು ಅರ್ಥ ಈ ಓಡು ಓಡೆ ಆಗಿ ವಾಡೆಯಾಗಿದೆ. ಸಮುದ್ರದಲ್ಲಿ ದೋಣಿಯನ್ನು ಅಳೆದವನು ಮತ್ಸ್ಯರೂಪಿ ಪರಮಾತ್ಮ. ಸೂರ್ಯಪುತ್ರನಾದ ವೈವಸ್ವತಮನು ಒಮ್ಮೆ ತರ್ಪಣ ಕೊಡುವಾಗ ಕೈಯಲ್ಲಿ ಬಿದ್ದ ಮೀನಿನ ಮರಿಯನ್ನು ಒಂದು ಪಾತ್ರೆಯಲ್ಲಿ ರಕ್ಷಿಸಿದ. ಒಂದೇ ದಿನದಲ್ಲಿ ಅದು ಪಾತ್ರೆಯ ಗಾತ್ರಕ್ಕೂ ಬೆಳೆಯಿತು. ಜಲಾಶಯದಲ್ಲಿ ಬಿಟ್ಟಾಗ ಅಷ್ಟೂ ದೊಡ್ಡದಾಯಿತು. ಕ್ರಮವಾಗಿ ಮಡುಗಳು, ನದಿಗಳು ಅದರ ಗಾತ್ರಕ್ಕೆ ಸಾಲದೆ ಸಮುದ್ರವನ್ನು ಸೇರಿತು. ಆ ಮತ್ಸ್ಯವೇ ಪ್ರಳಯಕಾಲದಲ್ಲಿ ದೇವನಿರ್ಮಿತವಾದ ನಾವೆಯನ್ನು ರಾಜನಿಗೆ ನೀಡಿ ಪಾಣಿವರ್ಗವನ್ನು ಕಾಪಾಡಲು ಸಹಾಯ ಮಾಡಿತು ಎಂಬುದು ಮತ್ಸ್ಯ ಪುರಾಣದ ಕಥೆ.

ಕೀರ್ತನೆ – ೧೮

ನುಡಿ – ೨ ಆನಕ ದುಂದುಭಿ ಸುತ

ವಸುದೇವನ ಜನನ ಕಾಲದಲ್ಲಿ ದೇವತೆಗಳು ಆನಕ (ತಮಟೆ) ಮತ್ತು ದುಂದುಭಿ (ನಗಾರಿ) ವಾದ್ಯಗಳನ್ನು ಬಾರಿಸಿದರು. ಇಂಥ ದಿವ್ಯವಾದ್ಯಗಳ ಧ್ವನಿಯನ್ನು ಕೇಳುತ್ತ ಜನಿಸಿದ್ದರಿಂದ ಅವನಿಗೆ 'ಆನಕದುಂದುಭಿ' ಎಂದು ಹೆಸರಾಯಿತು. ಇವನ ಮಗ ಶ್ರೀಕೃಷ್ಣನೇ ಆನಕ ದುಂದುಭಿ ಸುತ.

ಕೀರ್ತನೆ – ೨೦

ಕರವಸ್ತ್ರವನು ಬೀಸಿ .... ವಾಡೆಯ ತರಿಸಿ

ಒಮ್ಮೆ ಮಧ್ವಾಚಾರ್ಯರು ಕಡಲತೀರದಲ್ಲಿ ಧ್ಯಾನಾಸಕ್ತರಾಗಿದ್ದಾಗ ದ್ವಾರಕೆಯಿಂದ ಹೊರಟ ಹಡಗೊಂದು ಉಡುಪಿಯ ತೀರದತ್ತ ಬರುತ್ತಿತ್ತು. ಇದ್ದಕಿದ್ದಂತೆ ಬಿರುಗಾಳಿ ಬಂದು ಅಲೆಗಳ ಅಬ್ಬರದಲ್ಲಿ ಹಡಗು ಮುಳುಗುವ ಸ್ಥಿತಿಗೆ ಬಂತು. ಹತಾಶನಾದ ನಾವಿಕ ರಕ್ಷಣೆಗಾಗಿ ಜೋರಾಗಿ ಕೂಗಿದ. ಮಧ್ವಾಚಾರ್ಯರು ತಾವು ಹೊದ್ದಿದ್ದ ಕಾವಿಯ ವಸ್ತ್ರವನ್ನು ಬೀಸಿ ನಾವೆಯ ಓಲಾಟವನ್ನು ನಿಲ್ಲಿಸಿದರು. ಹಡಗಿನ ನಾವಿಕ ಕೃತಜ್ಞತೆಯಿಂದ ನೀಡಿದ ಏನನ್ನೂ ಸ್ವೀಕರಿಸಿದೆ ಹಡಗಿನಲ್ಲಿದ್ದ ಗೋಪಿ ಚಂದನದ ಗಡ್ಡೆಯನ್ನು ಸ್ವೀಕರಿಸಿದರು. ದೊಡ್ಡಗಾತ್ರದ ಆ ಗಡ್ಡೆಯಲ್ಲಿ ದೊರೆತ ಕೃಷ್ಣವಿಗ್ರಹವೇ ಉಡುಪಿಯಲ್ಲಿ ಪ್ರತಿಷ್ಠಿತನಾದ ಶ್ರೀಕೃಷ್ಣ.

ನುಡಿ – ೬ **ಮೂರು ಏಳುಮತ** : ಮಧ್ವಾಚಾರ್ಯರಿಗಿಂತ ಹಿಂದೆ ಇದ್ದ ಇಪ್ಪತ್ತೊಂದು (೩ × ೭) ಭಾಷ್ಯಕಾರರ ಭಾಷ್ಯಗಳು. ಭಾರತಿ, ವಿಜಯ, ಸಚ್ಚಿದಾನಂದ, ಬ್ರಹ್ಮಘೋಷ, ಶತಾನಂದ, ವಾಮನ, ಯಾದವ ಪ್ರಕಾಶ, ವಿಜಯ, ರಾಮಾನುಜ, ಭರ್ತೃ, ದ್ರವಿಡ, ಬ್ರಹ್ಮದತ್ತ, ಭಾಸ್ಕರ, ಪಿಶಾಚ, ವೃತ್ತಿಕಾರಕ, ವಿಜಯಭಟ್ಟ, ವಿಷ್ಣುಕ್ರಾಂತ, ವಾದೀಂದ್ರ, ಮಾಧವದಾಸ, ಶಂಕರ.

ಅನುಬಂಧ – ೩

ಕೀರ್ತನೆಗಳ ಅಂಕಿತ ವಿಂಗಡಣೆ

(೩ ಅ) ತಂದೆ ಪುರಂದರವಿಠಲ ಅಂಕಿತವಿದ್ದು ಪುರಂದರದಾಸರ ಕೀರ್ತನೆಗಳಲ್ಲಿ ಮುದ್ರಿತವಾಗಿರುವ ಪದಗಳು

(ಇವು ಪುರಂದರದಾಸರವೇ)

ಪಾವಂಜೆ ಗುರುರಾಯರ ಸಂಗ್ರಹ (ದ್ವಿಮು. ೨೦೧೧)

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಪಾದ	ಕೀರ್ತನ ಸಂಖ್ಯೆ
೧	ಅಂದೆ ನಿರ್ಣಯಿಸಿದರು ಕಾಣೊ	೨೮
೨	ಆಗಲಾಗಲಿ ರಂಗಯ್ಯ ನಿಮ್ಮಯ್ಯಗೆ	೫೬
೩	ಇಂತು ವೇದಾಂತಗಳಲ್ಲಿ	೮೭
೪	ಇಂದಿರಾರಮಣ ಗೋವಿಂದ	೮೯
೫	ಇಕ್ಕೋ ನವನೀತ ಚೋರ	೯೬
೬	ಇಷ್ಟು ಪಾಪವ ಮಾಡಿದ್ದೆ ಸಾಕೊ	೧೨೨
೭	ಊರ ದೇವರ ಮಾಡಬೇಕಣ್ಣ	೧೩೮
೮	ಅಂಬುಜ ಮುಖ ಗೋಪಿ	೧೫೩
೯	ಎಂದೆಂದು ನಿನ್ನ ಪಾದವೆ ಗತಿ	೧೫೬
೧೦	ಏಕೆ ದೇಹವನು ದಂಡಿಸುವೆ	೧೮೮
೧೧	ಏತರ ಕಟಿಪಿಟಿ	೨೦೦
೧೨	ಏನು ಗತಿಯೊ ಎನಗೆ	೨೧೨
೧೩	ಒಂದೇ ಮನದಿ ನಾನಿಂದು	೨೩೫
೧೪	ಛೀ, ಥೂ, ಖೋಡಿ	೩೮೫
೧೫	ಜಯತು ಗೋಕುಲವಾಸ	೩೯೭
೧೬	ತಂಗಿ ನೋಡೆ ನಮ್ಮಂಗಳದೊಳು	೪೧೩
೧೭	ನಡೆದು ಬಾ ನಾಲ್ವರಿದ್ದೆಡೆಗೆ	೪೯೦
೧೮	ನರನಾದ ಮೇಲೆ ಹರಿನಾಮ	೪೯೩
೧೯	ನಾ ಮುಂದೆ ರಂಗ	೫೧೩
೨೦	ನಿನ ದಿವ್ಯಮೂರುತಿಯ	೫೩೩
೨೧	ನಿನ್ನ ನಂಬಿದೆ ನೀರಜಶ್ಯಾಮ	೫೩೬
೨೨	ನೀ ತಂದೆ ನಾ ಬಂದೆ	೫೫೨

೨೩	ನೆಚ್ಚಬೇಡ ನೀ ನೆಚ್ಚಬೇಡ	೫೬೮
೨೪	ಪೂಜೆಯಾತಕೊ ಮನುಜ	೬೧೦
೨೫	ಬಾರಯ್ಯ ರಂಗ ಬಾರಯ್ಯ	೬೪೧
೨೬	ಬೇಡುಮನವೆ	೬೫೯
೨೭	ಮಂದಮತಿಯೊ ನಾನು	೬೮೩
೨೮	ಯಾರಿಗೆ ಯಾರುಂಟು	೭೭೯
೨೯	ಯಾರಿಗೆ ಮಾಡ್ತಿ ಮ್ಯಾ	೭೧೮
೩೦	ರಂಗ ಬಂದ ಮನೆಗೆ	೭೯೬
೩೧	ಸಾಧುಸಂಗ ವಾಗದ ಬಾಳು	೮೯೫
೩೨	ವಂದಿಸುವುದಾದಿಯಲಿ	೦೦೩
೩೩	ಹುಚ್ಚು ಹಿಡಿಯಿತು ಎನಗೆ	೯೮೬

೩ (ಆ) ತಂದೆ ಶ್ರೀ ಪುರಂದರವಿಠಲ ಅಂಕಿತದ ಕೀರ್ತನೆಗಳು

(ಇಲ್ಲಿ ಪುರಂದರವಿಠಲ ಮತ್ತು ತಂದೆ ನಡುವೆ ಶ್ರೀ ಎಂಬ ವಿಶೇಷಣವಿದೆ. ತಂದೆಯೆಂಬ ಸಂಬಂಧವಾಚಕ, ಶ್ರೀ ಎಂಬ ವಿಶೇಷಣ ಇವೆರಡೂ ಪುರಂದರವಿಠಲನಿಗೇ ಅನ್ವಯಿಸುತ್ತವೆ. ಈ ಎಲ್ಲ ಹಾಡುಗಳೂ ಪುರಂದರದಾಸರದೆ ಆಗಿದೆ)

ಪಾವಂಜೆ ಗುರುರಾಯರ ಸಂಗ್ರಹ (ದ್ವಿ.ಮು. ೨೦೧೦)

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಪಾದ	ಕೀರ್ತನ ಸಂಖ್ಯೆ
೧	ವಂದಿಸುವುದಾದಿಯಲಿ	೦೩
೨	ಏತರ ಕಟಿಪಿಟಿ	೨೦೦
೩	ನಾ ಮುಂದೆ ರಂಗ	೫೧೩
೪	ನೆಚ್ಚಬೇಡ ನೀ	೫೬೮
೫	ಬೇಡಮನವೆ ಬೇಡಿಕೊಂಬೆನು	೬೫೯
೬	ಯಾರಿಗೆ ಯಾರುಂಟು	೭೭೯

೩ (ಇ) ಶಾಮರಾಯರ ಕೀರ್ತನೆಗಳು

ತಂದೆ ಪುರಂದರವಿಠಲ ಅಂಕಿತದಲ್ಲಿ ಪುರಂದರದಾಸರ ಕೀರ್ತನೆಗಳಲ್ಲಿ ಸೇರಿಹೋಗಿರುವ ಶಾಮರಾಯರ ಕೀರ್ತನೆಗಳು.

ಇವು ಪುರಂದರದಾಸರದಲ್ಲ

(ಪಾವಂಜೆ ಗುರುರಾಯರ ಸಂಗ್ರಹ – ದ್ವಿಮು. ೨೦೧೦)

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಪಾದ	ಕೀರ್ತನ ಸಂಖ್ಯೆ
೧	ಅಪ್ಪಪ್ಪಾ ನೀ ನೋಡಪ್ಪ	೪೪
೨	ಆಡಿದ ರಂಗನಾಡಿದ	೬೪
೩	ಇತ್ತತ್ತು ಓಡಿ ನೀ	೯೭
೪	ಏಕೆ ನಿರ್ದಯನಾಗುವೆ	೧೯೬
೫	ಏನಣ್ಣ ನಿನಗೇನಣ್ಣ	೨೦೨
೬	ಒಮ್ಮೆ ನೆನೆಯಲು	೨೪೨
೭	ಕಂದ ಬೇಡವೊ	೨೬೨
೮	ಕರುಣಾಬ್ಧಿ ನೀನಂತೆ	೨೭೮
೯	ಕೃಷ್ಣ ಬಾರೋ	೩೧೩
೧೦	ಗಜುಗವಾಡುತಲಿರ್ದರು	೩೪೫
೧೧	ನಂದನ ಕಂದನ	೪೭೯
೧೨	ನಳಿನನಾಭನ ನೀನು ಪಾಡೊ	೫೦೦
೧೩	ನಿನ್ನ ಒಲುಮೆಗೆ ನಾನು	೫೩೦
೧೪	ಬಾಲಕೃಷ್ಣನೆ ಬಾರೊ	೬೪೯
೧೫	ಬಿಲ್ಲುಗಾರನು ಆದನು	೬೫೨
೧೬	ಮುಟ್ಟಬಾರೊ ಎನ್ನನು	೭೩೮
೧೭	ಮುಟ್ಟಬೇಡವೊ ಎನ್ನನು	೭೩೯
೧೮	ಹಣ್ಣುಕೊಂಡನು	೯೨೭
೧೯	ಹರಿಯೆ ಪರದೈವ	೯೬೬

ಅನುಬಂಧ – ೪

ಪುರಂದರವಿಠಲ ಅಂಕಿತದ ವಿಶೇಷಣಗಳು

ಅಖಿಲೇಶ
ಅನಾಥಬಂಧು
ಅಪಾರಮಹಿಮ
ಅಪ್ರತಿಮ
ಅಬ್ಬರದ ದೈವ
ಅಮಿತ ಮಹಿಮ
ಅರವಿಂದನಾಭ
ಇಂದಿರೆ ರಮಣ
ಈಶ
ಉದ್ದಂಡ
ಉರಿಮೋರೆ ದೈವ
ಒಡೆಯ
ಓಂಕಾರಮೂರ್ತಿ
ಕಂತುಪಿತ
ಕಪಟನಾಟಕ
ಕಮಲಾಕ್ಷ
ಕಂಬುಗ್ರೀವ
ಕರ್ತ
ಕಾರಣಕರ್ತ
ಗರಡಗಮನ
ಗಾನಲೋಲ
ಗುಣಶೀಲ
ಗುರು
ಚೊಕ್ಕ
ಜಗತ್‌ಕರ್ತ
ಜಗದೊಡೆಯ
ಜ್ಞಾನಿ

ಘನ್ನ
ಘನ್ನಮಹಿಮ
ಚಕ್ರಧರ
ಚದುರ
ಚಿತ್ತಜನಯ್ಯ
ಚೆನ್ನ
ತಂದೆ
ತಂದೆಶ್ರೀ
ತುಂಗವಿಕ್ರಮ
ದಾತ
ದಿಟ್ಟ
ದೀನರಕ್ಷಕ
ದೊರೆ
ದೇವ
ಧರೆಗಧಿಕ
ನಂಟ
ನಗೆಮುಖ
ನಮ್ಮ
ನಿಗಮಗೋಚರ
ಪ್ರಸನ್ನ
ಪುಲ್ಲಲೋಚನ
ಫಣಿವರದ
ಬಲ್ಲಿದ
ಭಕ್ತವತ್ಸಲ
ಭಾಗವತ ಪ್ರಿಯ
ಮಂಗಳ ಮೂರುತಿ
ಮಂಗಳಾತ್ಮಕ

ನಿಶ್ಚಿಂತ
ಪದುಮಲೋಚನ
ಪದುಮಾಕ್ಷ
ಪರಮಪುರುಷ
ಪ್ರಕಟ
ಪ್ರಣವಗೋಚರ
ಮಡಿವಂತ
ಮಧ್ವೇಶ
ಮುದ್ದು
ವರದ
ವಲ್ಲಭ
ವಿಶ್ವಂಭರ
ವಸುಧೀಶ
ಶಾಮಸುಂದರ
ಶುಭಾಂಗ
ಶೃಂಗಾರ ಮೂರುತಿ
ಶ್ರೀನಿಧಿ
ಸಮದರ್ಶಿ
ಸ್ವಾಮಿ
ಸೃಷ್ಟೀಶ
ಸಿರಿ
ಶ್ರೀ

(ಈ ವಿಶೇಷಣಗಳ ಪಟ್ಟಿ ಸಮಗ್ರವಾಗಿಲ್ಲ)

ಅನುಬಂಧ – ೫

ಕೀರ್ತನೆಗಳ 'ಅ' ಕಾರಾದಿ ಸೂಚಿ

೫ (ಅ) ತಂದೆ ಪುರಂದರವಿಠಲರ ಕೀರ್ತನೆಗಳು

ಅನುಬಂಧ – ೫

ಕೀರ್ತನೆಗಳ 'ಅ' ಕಾರಾದಿ ಸೂಚಿ

೫ (ಅ) ಗುರುತಂದೆ ಪುರಂದರವಿಠಲರ ಕೀರ್ತನೆಗಳು

ತಂದೆ ಪುರಂದರವಿಠಲ ಅಂಕಿತದಲ್ಲಿ ೧೧೧ ಕೀರ್ತನೆ ಮತ್ತು ಸುಳಾದಿ ಖಂಡಗಳು, ೨೦ ಉಗಾಭೋಗಗಳು ದೊರೆತಿವೆ. ಸುಳಾದಿಗಳ ಅಂತ್ಯದಲ್ಲಿ ಬರುವ ಜತೆಗಳಂತಹ ೩೦ ದ್ವಿಪದಿಗಳು ರಚಿತವಾಗಿವೆ. ಪ್ರತಿಯೊಂದು ಜತೆಯೂ ಒಂದು ಸ್ವತಂತ್ರವಾದ ಅಭಿಪ್ರಾಯದ ನಿರೂಪಣೆಯಾಗಿದೆ. 'ಸುಳಾದಿ' ಎಂದು ಕರೆಯಲಾದ ರಚನೆಗಳು ಶುದ್ಧ ಸುಳಾದಿಗಳಲ್ಲ. ೧೫–೨೦ ಪಾದಗಳ ಒಂದೊಂದು ಘಟಕ. ಆದಿಪ್ರಾಸವನ್ನು ಉಳಿಸಿಕೊಂಡು ರಗಳೆಯಂತೆ ನಿರರ್ಗಳವಾಗಿ ಸಾಗುತ್ತವೆ. ಇವು ಸುಳಾದಿಯ ಖಂಡ ಭಾಗಗಳಂತೆ ಇವೆ.

ತಂದೆ ಪುರಂದರವಿಠಲ ಅಂಕಿತದ ಶಾಮರಾಯರಿಗೆ ಒಬ್ಬ ಶಿಷ್ಯರಿದ್ದರು. ಅವರು 'ಗುರುತಂದೆ ಪುರಂದರವಿಠಲ' ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಇವರು ತಮ್ಮ ಗುರುಗಳನ್ನು ಕುರಿತು ರಚಿಸಿರುವ ಗುರುಸ್ತುತಿಗಳಲ್ಲಿ 'ದಾಸವರ್ಯರಾದವರ ಪ್ರಿಯಸುತ' ಎಂದು ಸಂಬೋಧಿಸಿದ್ದಾರೆ.

ತಮ್ಮ ಗುರುಗಳಾದ ತಂದೆಪುರಂದರವಿಠ್ಠಲರು ಹಿಂದಿನ ಜನ್ಮದಲ್ಲಿ ಪುರಂದರದಾಸರ ಮಕ್ಕಳೆಂದೂ, ನಂದ ಗೋಕುಲದಲ್ಲಿ ಕೃಷ್ಣನೊಂದಿಗೆ ಆಟವಾಡಿದ ಗೋಪಾಲಕರಲ್ಲಿ ಒಬ್ಬರೆಂದೂ, ಯಮನ ಅಂಶಜರೆಂದೂ ತಿಳಿಸುತ್ತಾರೆ.



ಕರ್ನಾಟಕ ಇತಿಹಾಸ ಸಂಶೋಧನ ಮಂಡಲ (ರಿ.)
ಡಿ.ಬಿ. ರೊದ್ದ ರಸ್ತೆ, ಧಾರವಾಡ
ಫೋನ : 0836-2441131,
email :khrsdwd2014@gmail.com